# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 11 | ಫೆಬ್ರವರಿ 2025 | ಬೆಂಗಳೂರು | ₹ 10/-



# ಮೋದಿ ವಿದೇಶಿ ಪ್ರವಾಸ

'ನಿಮ್ಮನ್ನು ತುಂಬಾ ಮಿಸ್ ಮಾಡಿಕೊಂಡಿದ್ದೇನೆ. ನೀವು ಒಳ್ಳೆಯ ಸ್ನೇಹಿತ'

- ಡೊನಾಲ್ಡ್ ಟ್ರಂಪ್, ಅಮೆರಿಕಾದ ಅಧ್ಯಕ್ಷ



ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದವರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಸಂವಾದ



ಗಣರಾಜ್ಯೋತ್ಸವ ದಿನದಂದು ಕರ್ತವ್ಯ ಪಥದಲ್ಲಿ ಪ್ರಧಾನಿ ಶ್ರೀ ಮೋದಿ



‘ಪರೀಕ್ಷಾ ಪೆ ಚರ್ಚಾ’ ಕಾರ್ಯಕ್ರಮಕ್ಕೆ ಆಗಮಿಸಿದ್ದ ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ಶ್ರೀ ಮೋದಿ




ಎನ್‌ಸಿಸಿ ವಾರ್ಷಿಕೋತ್ಸವ ರ‍್ಯಾಲಿಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




ದಾವಣಗೆರೆಯಲ್ಲಿ ಆಯೋಜಿಸಿದ್ದ ಬಂಜಾರ ಸಮಾಜದ ಶ್ರೇಷ್ಠ ಸಂತ ಶ್ರೀ ಸೇವಾಲಾಲ ಮಹರಾಜಯ 286ನೇ
ಜಯಂತಿ ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ಹಾಗೂ ಗಣ್ಯರು

# ಐತಿಹಾಸಿಕ ಕುಂಭ, ಕಾರ್ಯಕರ್ತನ ಅಳಲು, ಅಪೇಕ್ಷೆ

ಇತಿಹಾಸ ಸೃಷ್ಟಿಸಿದ ಮಹಾ ಕುಂಭಮೇಳ ಸಂಪನ್ನಗೊಂಡಿದೆ. ಪ್ರಸ್ತುತ ಕುಂಭಮೇಳ ಹಲವಾರು ಸಂಗತಿಗಳ ಅನಾವರಣಕ್ಕೆ ಸಾಕ್ಷಿಯಾಯಿತು. ಪ್ರಯಾಗ್‌ರಾಜ್‌ನಲ್ಲಿ ಗಂಗಾ, ಯುಮುನಾ ಹಾಗೂ ಸರಸ್ವತಿ ನದಿಗಳ ಸಂಗಮದಂತೆ, ಕೋಟ್ಯಾಂತರ ಭಕ್ತರ ನಂಬಿಕೆಯ ಮತ್ತು ಶ್ರದ್ಧೆಯ, ಶ್ರೀ ಯೋಗಿ ಆದಿತ್ಯನಾಥ್‌ರವರ ಅಚ್ಚುಕಟ್ಟುತನದ ಆಡಳಿತದ ಹಾಗೂ ಅಧಿಕಾರಿಗಳ ಕರ್ತವ್ಯದಲ್ಲಿನ ಬದ್ಧತೆಯ ಸಂಗಮವೂ ಈ ಕುಂಭದಲ್ಲಿ ಆಯಿತು. 'ನ ಭೂತೋ ನ ಭವಿಷ್ಯತಿ' ಎಂಬ ರೀತಿಯಲ್ಲಿ ಆಯೋಜನೆಗೊಂಡ ಈ ಕುಂಭಮೇಳ ವಿಶ್ವದ ಎಲ್ಲಾ ರಾಷ್ಟ್ರಗಳ ಮತ್ತು ಮಾಧ್ಯಮಗಳ ಗಮನ ಸೆಳೆದು ಇತಿಹಾಸ ನಿರ್ಮಿಸಿಬಿಟ್ಟಿತು. ಆದರೆ ಸ್ವಾರ್ಥ ಮತ್ತು ತುಷ್ಟೀಕರಣದ ನೀತಿಗಳನ್ನೇ ಮೈಗೂಡಿಸಿಕೊಂಡಿರುವ ದೇಶದೊಳಗಿನ ಕೆಲವು ಶಕ್ತಿಗಳು ಮತ್ತದೇ ಹಳೇ ಆಲಾಪವನ್ನು ಮಾಡಿ ಅಪಹಾಸ್ಯಕ್ಕೀಡಾಗಿದ್ದು ಮಾತ್ರ ದುರ್ದೈವದ ಸಂಗತಿ. ಈಗಾಗಲೇ ದೇಶದ ಬಹುಭಾಗದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿರುವ ಈ ಶಕ್ತಿಗಳು ಇನ್ನೂ ಹಿಂದೂಗಳ ನಂಬಿಕೆ ಶ್ರದ್ಧೆಗಳ ಬಗ್ಗೆ ತಮ್ಮ ನಿಲುವು ಬದಲಿಸಿಕೊಳ್ಳದಿರುವುದು ಅವರಲ್ಲಿ ನೆಲೆಯೂರಿರುವ ತುಷ್ಟೀಕರಣದ ನೀತಿ ಮತ್ತು ಹಿಂದು ವಿರೋಧಿ ಮಾನಸಿಕತೆಯ ದ್ಯೋತಕವೇ ಸರಿ.

ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಅಮೇರಿಕ ಭೇಟಿ ಫಲಪ್ರದವಾಗಿದೆ. ಇಡೀ ಜಗತ್ತಿನ ಗಮನ ಸೆಳೆದಿದ್ದ ಮೋದಿ ಮತ್ತು ಟ್ರಂಪ್ ಭೇಟಿ ಯಶಸ್ವಿಯಾಗಿದೆ. ಅದರಲ್ಲೂ ಮೋದಿಯವರನ್ನು ತನ್ನ ಆತ್ಮೀಯ ಸ್ನೇಹಿತ ಎಂದು ಬಹಿರಂಗವಾಗಿ ವ್ಯಕ್ತಪಡಿಸಿದ ಟ್ರಂಪ್‌ರವರ ಉದ್ಗಾರ ಜಗತ್ತಿನ ಬಹುತೇಕ ರಾಷ್ಟ್ರಗಳ ನಿದ್ದೆಗೆಡಿಸಿರುವುದಂತೂ ಸುಳ್ಳಲ್ಲ. ಜಗತ್ತಿನ ಬಹುತೇಕ ಬಲಾಢ್ಯ ರಾಷ್ಟ್ರಗಳು ಭಾರತಕ್ಕೆ ಕೊಡುತ್ತಿರುವ ಮಾನ್ಯತೆ ಮೋದಿ ನೇತೃತ್ವಕ್ಕೆ ವಿಶ್ವಮಟ್ಟದಲ್ಲಿ ಸಂದ ಗೌರವವಾಗಿದೆ.

## ಸಂಪಾದಕೀಯ

ರಾಜ್ಯದಲ್ಲಿ ಭಂಡ ಕಾಂಗ್ರೆಸ್ ಸರಕಾರದ ಅತಿರೇಕಗಳು ಮುಂದುವರೆದಿದೆ. ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆಧಾರ ರಹಿತವಾದ ಆರೋಪಗಳನ್ನು ಮಾಡಿ ಅದಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಹಿಟ್ ಅಂಡ್ ರನ್ ಮಾಡುವ ತನ್ನ ಹಳೇ ಚಾಳಿಯನ್ನು ಕಾಂಗ್ರೆಸ್ ಮುಂದುವರೆಸಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಪರಾಮರ್ಶಿಸದೆ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ ಕಾಂಗ್ರೆಸ್ ಸರಕಾರ ರಾಜ್ಯವನ್ನು ಅಭಿವೃದ್ಧಿ ವಂಚಿತ ರಾಜ್ಯವನ್ನಾಗಿಸುತ್ತಿದೆ. ಮುಖ್ಯಮಂತ್ರಿ ವಿಚಾರವಾಗಿ ಕಾಂಗ್ರೆಸ್ ಪಕ್ಷದಲ್ಲಿ ಇನ್ನೂ ಸ್ಥಿರತೆ ಇಲ್ಲದ ಕಾರಣ ರಾಜ್ಯದ ಜನತೆಗೆ ಅಸ್ಥಿರ ಆಡಳಿತ ನೋಡುವಂತೆ ಆಗಿದೆ. ರಾಜ್ಯದ ಜನತೆಯ ಹಿತಾಸಕ್ತಿಗೆ ವಿರುದ್ಧವಾಗಿ ಆಡಳಿತ ಮಾಡುತ್ತಿರುವ ಕಾಂಗ್ರೆಸ್‌ಗೆ ಅಧಿಕಾರದ ಕುರ್ಚಿ ಉಳಿಸಿಕೊಳ್ಳುವುದು ಮಾತ್ರ ಆದ್ಯತೆಯಾಗಿದೆ. ಗ್ರೇಟರ್ ಬೆಂಗಳೂರು ಮಾಡುತ್ತೇವೆ ಎನ್ನುವ ಡಿಸಿಎಂ, ಬೆಂಗಳೂರನ್ನು ರೌಡಿಗಳ ನಗರವನ್ನಾಗಿಸುತ್ತಿದ್ದಾರೆ. ಮೂರು ವರ್ಷದಿಂದ ನಿಯಂತ್ರಣವಿಲ್ಲದ ಆಡಳಿತದಿಂದಾಗಿ ಲಾಂಗು, ಮಚ್ಚು, ಕೊಲೆ, ದೌರ್ಜನ್ಯ ಪ್ರಕರಣಗಳು ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಯಥೇಚ್ಛವಾಗಿ ನಡೆಯುತ್ತಿದೆ. ಇದರಿಂದ ರಾಜ್ಯದ ಜನ ನೆಮ್ಮದಿ ಕಳೆದುಕೊಂಡಿದ್ದು, ಭಯದಲ್ಲಿ ಬದುಕುವಂತೆ ಆಗಿದೆ. ಒಟ್ಟಿನಲ್ಲಿ ಕಾಂಗ್ರೆಸ್‌ಗೆ ಓಟು ಕೊಟ್ಟ ಮತದಾರನ ಪರಿಸ್ಥಿತಿ ಶೋಚನೀಯವಾಗಿದ್ದರೆ, ಕಾಂಗ್ರೆಸ್ ನಾಯಕರು ಅಧಿಕಾರದ ಸುಖ ಅನುಭವಿಸುತ್ತಿರುವುದು ರಾಜ್ಯದ ಮತ್ತು ಜನತೆಯ ದುರದೃಷ್ಟಕರ.

ಮಧ್ಯಮವರ್ಗದ ಜನರ ಮತ್ತು ಭವಿಷ್ಯ ಭಾರತದ ಬಗ್ಗೆ ಸದಾ ಚಿಂತನೆ ನಡೆಸುವ ಮೋದಿ ಸರ್ಕಾರ ಅದಕ್ಕೆ ಪೂರಕವಾಗಿ ಮಂಡಿಸಿರುವ ಕೇಂದ್ರದ ಪ್ರಸ್ತುತ ವರ್ಷದ ಬಜೆಟ್ ಸಾಮಾನ್ಯ ಹಾಗೂ ಬಡಜನರ ಮೆಚ್ಚಿನ ಬಜೆಟ್ ಆಗಿದೆ. ಅದರಲ್ಲೂ 12 ಲಕ್ಷ ರೂವರೆಗಿನವರಿಗೆ ವರಮಾನ ತೆರಿಗೆ ಮಿತಿಯ ಅವಕಾಶವನ್ನು ನೀಡಿದ ಕೇಂದ್ರದ ಬಜೆಟ್‌ಗೆ ಮಧ್ಯಮ ವರ್ಗದವರಿಂದ ವ್ಯಾಪಕ ಪ್ರಶಂಸೆಗಳು ವ್ಯಕ್ತವಾಗುತ್ತಿದೆ. ಅಲ್ಲದೆ ವಿಕಸಿತ ಭಾರತಕ್ಕೆ ಪೂರಕವಾದ ಬಜೆಟ್ ನೀಡಿರುವ ಮೋದಿ ಸರ್ಕಾರ ಸರ್ವವಲಯಕ್ಕೂ ಭವಿಷ್ಯತ್ತಿನ ಭಾರತದ ಕಾರ್ಯಯೋಜನೆಗೆ ಪೂರಕವಾಗುವಂತೆ ಮಾಡಿದೆ.

ಬಿಜೆಪಿಯಲ್ಲಿ ಆಂತರಿಕವಾಗಿ ನಡೆಯುತ್ತಿರುವ ಕೆಲವು ರಾಜಕೀಯ ಬೆಳವಣಿಗೆಗಳಿಂದ ಪಕ್ಷದ ಸಂಘಟನೆಗೆ ಕೊಂಚ ಹಿನ್ನಡೆ ಮತ್ತು ಕಾರ್ಯಕರ್ತನ ಮನಸ್ಸಿಗೆ ಬೇಸರವಾಗುತ್ತಿರುವುದನ್ನು ಒಪ್ಪಿಕೊಳ್ಳಲೇ ಬೇಕು. ಆದಷ್ಟು ಬೇಗ ಎಲ್ಲಾ ಗೊಂದಲಗಳು ಸುಖಾಂತ್ಯ ಕಂಡಲ್ಲಿ ಪಕ್ಷ ಸಂಘಟನೆ ಇನ್ನಷ್ಟು ಚುರುಕುಗೊಳ್ಳುವುದಲ್ಲದೆ, ಕಾರ್ಯಕರ್ತನಲ್ಲೂ ಉತ್ಸಾಹ ಮೂಡಲಿದೆ. ಸಂಘಟನೆಯ ಹಿತವೇ ಸರ್ವರ ಸಕಾರಾತ್ಮಕ ಚಿಂತನೆಯಾಗಲೀ ಎಂಬ ಮನದಾಳದ ಅಳಲು ಮತ್ತು ಅಪೇಕ್ಷೆ ಬಿಜೆಪಿಯ ಸಾಮಾನ್ಯ ಕಾರ್ಯಕರ್ತನದ್ದಾಗಿದೆ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ತನ್ನ ದೇಶ ಮತ್ತು**
**ಸತ್ಯದ ಮುಂದೆ**
**ಮಾತ್ರ ತಲೆ ಬಾಗುವ ವ್ಯಕ್ತಿಯನ್ನು**
**ಎಲ್ಲೆಡೆ ಗೌರವಿಸಲಾಗುತ್ತದೆ.**

**- ಛತ್ರಪತಿ ಶಿವಾಜಿ ಮಹಾರಾಜ್**





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005


## ಈ ಸಂಚಿಕೆಯಲ್ಲಿ




**'ನಿಮ್ಮನ್ನು ತುಂಬಾ ಮಿಸ್ ಮಾಡಿಕೊಂಡಿದ್ದೇನೆ. ನೀವು ಒಳ್ಳೆಯ ಸ್ನೇಹಿತ'**




**ಕೇಂದ್ರ ಬಜೆಟ್ 2025**


- **ದೀವಟಿಗೆ :** ಸರೋಜಿನಿ ನಾಯ್ಡು ..... 05
- ಮಾರ್ಸೈಲ್ ತಟದಲ್ಲೂ ಮೋದಿಗೆ ಸೈನಿಕನೇ ಕಂಡ! ..... 15
- ದೆಹಲಿಯಲ್ಲಿ ಅರಳಿದ ಕಮಲ ..... 18
- ದುರ್ಬಲ ಆರ್ಥಿಕತೆಯಿಂದ ಸದೃಢ ಆರ್ಥಿಕ ಶಕ್ತಿಯಾಗಿ ಭಾರತ ..... 19
- ಅಟಲ್ ಬಿಹಾರಿ ವಾಜಪೇಯಿ ಉಪಮಾತೀತ ರಾಜಕಾರಣಿ ..... 21
- ವರಪುತ್ರ ಅಟಲ್ ಜಿ ಜನ್ಮ ಶತಾಬ್ದಿ ಅಭಿಯಾನ ..... 23
- ಮಹಾ ಕುಂಭಮೇಳ - 2025 ..... 26
- ಹುಟ್ಟೂರಿನಲ್ಲೊಂದು ಉಲ್ಲೇಖನೀಯ ಕಾರ್ಯ ..... 30
- ಬಿಜೆಪಿ ನೂತನ ಜಿಲ್ಲಾಧ್ಯಕ್ಷರಿಗೆ ಅಭಿನಂದನೆಗಳು ..... 31
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ:** ಶ್ರೀ ಉಮನಾಥ್ ಶೆಟ್ಟಿಗಾರ್ ಬೋಳಾರ್ .32
- ಮಾಸದ ಮಾಧುರ್ಯ 94ನೇ ಕಾರ್ಯಕ್ರಮದಲ್ಲಿ **'ದಕ್ಷ ಯಜ್ಞ'** ..... 33
- **ಮನ್ ಕಿ ಬಾತ್** - ಏಕತೆಯ ಮಹಾ ಕುಂಭ ..... 34

# ಸರೋಜಿನಿ ನಾಯ್ಡು

ದೀವಟಿಗೆ

ಡಾ. ಹರೀಶ್ ಆತ್ರೇಯ
ಕಾರ್ಯಕರ್ತರು



**ಭಾ**ರತದ ಸ್ವಾತಂತ್ರ್ಯ ಹೋರಾಟದಲ್ಲಿ ಅದಮ್ಯ ಶಕ್ತಿ ಮತ್ತು ಮಹಿಳಾ ಸಬಲೀಕರಣದ ಪ್ರವರ್ತಕರಾದ ಸರೋಜಿನಿ ನಾಯ್ಡು ಅವರು ಧೈರ್ಯ, ಬುದ್ಧಿಶಕ್ತಿ ಮತ್ತು ವಾಗ್ಮಿತ್ವಕ್ಕೆ ಶಾಶ್ವತ ಸಂಕೇತವಾಗಿ ಉಳಿದಿದ್ದಾರೆ. ಭಾರತದ ಕೋಗಿಲೆ ಎಂದು ಪ್ರಸಿದ್ಧರಾದ ಅವರು ಕೇವಲ ಕವಿಯತ್ರಿಯಾಗಿರಲಿಲ್ಲ, ಆಧುನಿಕ ಭಾರತವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಕ್ರಾಂತಿಕಾರಿ.

**ಆರಂಭಿಕ ಜೀವನ ಮತ್ತು ಶಿಕ್ಷಣ :** ಫೆಬ್ರವರಿ 13, 1879 ರಂದು ಹೈದರಾಬಾದ್‌ನಲ್ಲಿ ಜನಿಸಿದ ಸರೋಜಿನಿ ನಾಯ್ಡು ರವರು ಚಿಕ್ಕ ವಯಸ್ಸಿನಿಂದಲೇ ಅಸಾಧಾರಣ ಸಾಹಿತ್ಯ ಪ್ರತಿಭೆಯನ್ನು ಪ್ರದರ್ಶಿಸಿದವರು. ಅವರ ತಂದೆ ಅಘೋರೇನಾಥ್ ಚಟ್ಟೋಪಾಧ್ಯಾಯ ಅವರು ವಿಜ್ಞಾನಿ ಮತ್ತು ಶಿಕ್ಷಣ ತಜ್ಞರಾಗಿದ್ದರು ಮತ್ತು ಅವರ ತಾಯಿ ಬರದ ಸುಂದರಿ ದೇವಿ ಅವರು ಕವಯಿತ್ರಿಯಾಗಿದ್ದರು. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಮತ್ತು ನಂತರ ಲಂಡನ್‌ನ ಕಿಂಗ್ಸ್ ಕಾಲೇಜು ಮತ್ತು ಕೇಂಬ್ರಿಡ್ಜ್‌ನ ಗಿರ್ಟನ್ ಕಾಲೇಜಿನಲ್ಲಿ ಸರೋಜಿನಿಯ ಶಿಕ್ಷಣವು ಅವರನ್ನು ಉದಾರವಾದಿ ವಿಚಾರಗಳಿಗೆ ಒಡ್ಡಿತು. ಇದು ಭಾರತದ ಸ್ವಾತಂತ್ರ್ಯಕ್ಕೆ ಕೊಡುಗೆ ನೀಡುವ ಬಯಕೆಯನ್ನು ಹೆಚ್ಚಿಸಿತು.

**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನಾಯ್ಡು ರವರ ಪಾತ್ರ:** ಸರೋಜಿನಿ ನಾಯ್ಡು ಅವರು ಭಾರತದ ರಾಷ್ಟ್ರೀಯತಾವಾದಿ ಚಳವಳಿಗೆ ಪ್ರವೇಶಿಸಿದಾಗ ಮಹಾತ್ಮ ಗಾಂಧಿ ಮತ್ತು ಗೋಪಾಲ ಕೃಷ್ಣ ಗೋಖಲೆ ಅವರಿಂದ ಪ್ರಭಾವಿತರಾಗಿದ್ದರು. ಅಹಿಂಸೆ ಮತ್ತು ನಾಗರಿಕ ಅಸಹಕಾರದ ಪ್ರತಿಪಾದಕರಾಗಿದ್ದ ನಾಯ್ಡು, ಉಪ್ಪಿನ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (1925) ಅಧ್ಯಕ್ಷರಾಗಿ ಮತ್ತು ನಂತರ ಉತ್ತರ ಪ್ರದೇಶದ ರಾಜ್ಯಪಾಲರಾಗಿ (1947) ಸೇವೆ ಸಲ್ಲಿಸಿದ ಮೊದಲ ಭಾರತೀಯ ಮಹಿಳೆ. ಮಹಿಳಾ ಸಬಲೀಕರಣದ ಚಾಂಪಿಯನ್‌ಮಹಿಳಾ ಹಕ್ಕುಗಳಿಗಾಗಿ ಸರೋಜಿನಿ ನಾಯ್ಡು ಅವರ ವಕಾಲತ್ತು ಕ್ರಾಂತಿಕಾರಿಯಾಗಿತ್ತು. ಅವರ ಭಾಷಣಗಳು ಮತ್ತು ಬರಹಗಳು ಮಹಿಳಾ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಪ್ರಾತಿನಿಧ್ಯದ ಅಗತ್ಯವನ್ನು ಒತ್ತಿಹೇಳಿದವು. ಸಮಾನ ಹಕ್ಕುಗಳಿಗಾಗಿ ಪ್ರಚಾರ ಮಾಡಿ ಮಹಿಳಾ ಭಾರತೀಯ ಸಂಘದ (1917) ರಚನೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.


ಲಂಡನ್‌ನಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನಗಳಲ್ಲಿ, ಅವರು ಭಾರತದ ಮಹಿಳೆಯರನ್ನು ಪ್ರತಿನಿಧಿಸಿ, ಅವರ ಮತದಾನದ ಹಕ್ಕು ಮತ್ತು ಆಡಳಿತದಲ್ಲಿ ಹೆಚ್ಚಿನ ಪಾತ್ರಕ್ಕಾಗಿ ವಾದಿಸಿದರು.ಸಾಹಿತ್ಯಿಕ ಕೊಡುಗೆಗಳು ರಾಷ್ಟ್ರೀಯತಾವಾದಿ ಮತ್ತು ಸ್ತ್ರೀವಾದಿ ವಿಷಯಗಳಿಂದ ಸಮೃದ್ಧವಾಗಿರುವ ಅವರ ಕಾವ್ಯವು ಅವರ ಕ್ರಿಯಾಶೀಲತೆಯನ್ನು ಬಲಪಡಿಸಿತು. ದಿ ಗೋಲ್ಡನ್ ಥ್ರೆಶೋಲ್ಡ್ (1905), ದಿ ಬರ್ಡ್ ಆಫ್ ಟೈಮ್ (1912), ಮತ್ತು ದಿ ಬ್ರೋಕನ್ ವಿಂಗ್ (1917) ನಂತಹ ಕೃತಿಗಳು ಭಾರತದ ಪರಂಪರೆಯನ್ನು ಬಿಂಬಿಸುವುದಲ್ಲದೆ, ಮುಕ್ತ ಮತ್ತು ಸಮಾನ ಸಮಾಜಕ್ಕಾಗಿ ಅವರ ಆಕಾಂಕ್ಷೆಗಳನ್ನು ಧ್ವನಿಸಿದವು. ಬದಲಾವಣೆಯನ್ನು ಪ್ರೇರೇಪಿಸಲು ಅವರು ತಮ್ಮ ಸಾಹಿತ್ಯಿಕ ಶಕ್ತಿಯನ್ನು ಬಳಸಿದರು, ನ್ಯಾಯಕ್ಕಾಗಿ ಹೋರಾಟದಲ್ಲಿ ಸಾಹಿತ್ಯವು ಅಪಾರ ಶಕ್ತಿಯನ್ನು ಹೊಂದಿವೆ ಎಂದು ಸಾಬೀತುಪಡಿಸಿದರು. ಮಹಿಳೆಯರು ಪುರುಷರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ರಾಷ್ಟ್ರೀಯ ಅಭಿವೃದ್ಧಿಗೆ ಕೊಡುಗೆ ನೀಡುವ ಭಾರತವನ್ನು ಅವರು ಕಲ್ಪಿಸಿಕೊಂಡರು. ಇಂದು, ಅವರ ಕೊಡುಗೆಗಳನ್ನು ವಿಶ್ವಾದ್ಯಂತ ಸ್ತ್ರೀ ವಾದಿಗಳು, ಕಾರ್ಯಕರ್ತರು ಮತ್ತು ನಾಯಕರಿಗೆ ಸ್ಫೂರ್ತಿಯಾಗಿ ಸ್ಮರಿಸಲಾಗುತ್ತದೆ.

ಸರೋಜಿನಿ ನಾಯ್ಡು ಅವರ ಜೀವನವು ಬುದ್ಧಿಶಕ್ತಿ, ಮತ್ತು ಕ್ರಿಯಾಶೀಲತೆಯ ಶಕ್ತಿಗೆ ಸಾಕ್ಷಿಯಾಗಿದೆ. ಭಾರತದ ಸ್ವಾತಂತ್ರ್ಯ ಚಳವಳಿಯ ಮೇಲೆ ಅವರ ಪ್ರಭಾವ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಅವರ ನಿರಂತರ ಪ್ರಯತ್ನವು ಇತಿಹಾಸದಲ್ಲಿ ಅಳಿಸಲಾಗದ ಗುರುತು. ಅವರ ಕೊಡುಗೆಗಳನ್ನು ನಾವು ಪ್ರತಿಬಿಂಬಿಸುವಾಗ, ಸಮಾನತೆ ಮತ್ತು ನ್ಯಾಯದ ಮೇಲಿನ ಅವರ ಕನಸುಗಳು ಭಾರತ ಮತ್ತು ಅದರಾಚೆಗಿನ ಮಹಿಳೆಯರ ಭವಿಷ್ಯವನ್ನು ರೂಪಿಸುತ್ತಲೇ ಇರುತ್ತವೆ ಎಂಬುದನ್ನು ನಾವು ಗುರುತಿಸಬೇಕಾಗಿದೆ.




# ‘ನಿಮ್ಮನ್ನು ತುಂಬಾ ಮಿಸ್ ಮಾಡಿಕೊಂಡಿದ್ದೇನೆ. ನೀವು ಒಳ್ಳೆಯ ಸ್ನೇಹಿತ’

**ಜಾಗತಿಕ ಕುತೂಹಲಕ್ಕೆ ಕಾರಣವಾಗಿದ್ದ ಮೋದಿ ಅಮೆರಿಕಾ ಪ್ರವಾಸ ಯಶಸ್ವಿ..!!**



**ಮಹೇಶ್ ಹೆಗಡೆ**
ಪತ್ರಕರ್ತರು

**ಪ್ರ**ತಿಸಲ ಹೇಳುವಂತೆ ವಿದೇಶಾಂಗ ನೀತಿಯಲ್ಲಿ ಮೋದಿ ಸರ್ಕಾರದ ನಡೆಗಳು ಕುತೂಹಲಕರವಾಗಿರುತ್ತದೆ. ಪ್ರತಿಸಲ ಮೋದಿ ವಿದೇಶಿ ಪ್ರವಾಸ ಹೊರಟಾಗ ಸಹ ನಮ್ಮ ದೇಶ ಮಾತ್ರವಲ್ಲದೇ, ಇಡೀ ವಿಶ್ವ ಕಾತುರದಿಂದ ಕಾಯುತ್ತಿರುತ್ತದೆ. ಅದರಲ್ಲೂ ಈ ಸಲದ ಮೋದಿ ಪ್ರವಾಸದ ಬಗ್ಗೆ ಇಡೀ ವಿಶ್ವ ಕಣ್ಣು ತೆರೆದು ಕುಳಿತಿತ್ತು. ಏಕೆಂದರೆ ಮೋದಿ ಪ್ರವಾಸ ಕೈಗೊಂಡಿದ್ದು ಅಮೆರಿಕಾಕ್ಕೆ. ಅಮೆರಿಕಾದಲ್ಲಿ ಹೊಸ ಸರ್ಕಾರ ರಚನೆಯಾಗಿ, ಬೈಡನ್ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದು, ಡೊನಾಲ್ಡ್ ಟ್ರಂಪ್ ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೇರಿದ ಸಮಯ. ಟ್ರಂಪ್ ತನ್ನ ಅಚ್ಚರಿಯ ನಿರ್ಧಾರಗಳಿಂದ ಹಲವಾರು ದೇಶಗಳಿಗೆ ನಡುಕ ಹುಟ್ಟಿಸಿದ್ದರು. ಇಂತಹ ಸಮಯದಲ್ಲಿ ಅಂದರೆ ಹೊಸ ಅಧ್ಯಕ್ಷರ ಆಯ್ಕೆಯ ನಂತರ ಮೋದಿಯ ಅಮೆರಿಕಾ ಪ್ರವಾಸ ಅತ್ಯಂತ ಮಹತ್ವದ್ದಾಗಿತ್ತು. ಎಂದಿನಂತೆ ಮೋದಿ ಪ್ರವಾಸ ಅತ್ಯಂತ ಯಶಸ್ವಿಯಾಗಿದ್ದು, ನಾವು ಭಾರತದ ಪರ ಎಂದು ಅಮೆರಿಕಾ ತಿಳಿಸಿದೆ.




# ವಾಷಿಂಗ್‌ಟನ್‌ನಲ್ಲಿ ಪ್ರಧಾನಿಗೆ ಭವ್ಯ ಸ್ವಾಗತ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿಗೆ ಆಗಮಿಸುತ್ತಿದ್ದಂತೆ, ಭಾರತೀಯ ಸಮುದಾಯದವರು ಭವ್ಯವಾದ ಸ್ವಾಗತವನ್ನು ಕೋರಿದರು. ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ 2 ನೇ ಬಾರಿಗೆ ಅಧಿಕಾರ ಸ್ವೀಕರಿಸಿದ ಬಳಿಕ ಪ್ರಧಾನಿ ಮೋದಿಗೆ ಆಹ್ವಾನ ನೀಡಿದ್ದರು. ಈ ಹಿನ್ನೆಲೆಯಲ್ಲಿ ಫ್ರಾನ್ಸ್ ಪ್ರವಾಸ ಮುಗಿಸಿ ಮಾರ್ಸಿಲ್ಲೆಯಿಂದ ಹೊರಟ ಮೋದಿ ವಾಷಿಂಗ್‌ಟನ್‌ಗೆ ಬಂದಿದ್ದರು. ಅಮರಿಕಾ ಅಧ್ಯಕ್ಷರ ನಿವಾಸ ವೈಟ್‌ಹೌಸ್ ಸಮೀಪದಲ್ಲೇ ಇರುವ ಅಧ್ಯಕ್ಷರ ಅತಿಥಿಗೃಹ ಬ್ಲೇರ್ ಹೌಸ್‌ನಲ್ಲಿ ಮೋದಿ ವಾಸ್ತವ್ಯ ಹೂಡಿದ್ದರು. ಅತಿಥಿಗೃಹಕ್ಕೆ ಮೋದಿ ಬರುತ್ತಿದ್ದಂತೆ ಮಳೆ, ಚಳಿಯನ್ನೂ ಲೆಕ್ಕಿಸದೆ ಕಾಯುತ್ತಿದ್ದ ಅಮೆರಿಕದಲ್ಲಿರುವ ಭಾರತೀಯರು ಘೋಷಣೆ ಕೂಗಿ ಪ್ರಧಾನಿಗೆ ಹೃತ್ಪೂರ್ವಕ ಸ್ವಾಗತ ಕೋರಿದರು.

## ಮೋದಿ ಅಮೆರಿಕಾ ಪ್ರವಾಸದ ಪ್ರಮುಖ ಅಂಶಗಳು



ಡೊನಾಲ್ಡ್ ಟ್ರಂಪ್ ಭೇಟಿಗೂ ಮುನ್ನ ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕಲ್ ವಾಲ್ಟ್ ಅವರು ಪ್ರಧಾನಿ ಮೋದಿ ರವರೊಂದಿಗೆ ಮಾತುಕತೆ ನಡೆಸಿದರು. ಮೋದಿ ವಾಷಿಂಗ್ಟನ್‌ಗೆ ಆಗಮಿಸುತ್ತಿದ್ದಂತೆ ನೂತನವಾಗಿ ನೇಮಕವಾಗಿರುವ ಅಮೆರಿಕಾ ರಾಷ್ಟ್ರೀಯ ಗುಪ್ತಚರ ಪಡೆಯ ನಿರ್ದೇಶಕಿ, ಭಾರತೀಯ ಮೂಲದ ತುಳಸಿ ಗಬಾರ್ಡ್ ಜತೆ ಮಾತುಕತೆ ನಡೆಸಿದರು. ಉಭಯ ನಾಯಕರ ಭಾರತ ಮತ್ತು ಅಮೆರಿಕ ಬಾಂಧವ್ಯದ ಕುರಿತು, ಭಯೋತ್ಪಾದನೆ ನಿಗ್ರಹ, ಸೈಬರ್ ಭದ್ರತೆ ಹಾಗೂ ಇತರ ಬೆದರಿಕೆಗಳ ಕುರಿತು ಸಹಕಾರ ಹೆಚ್ಚಿಸುವ ಬಗ್ಗೆ ಚರ್ಚೆ ನಡೆಸಿದರು. ಅಲ್ಲದೆ ಅಮೆರಿಕಾ ಸರ್ಕಾರದ ಪ್ರಮುಖ ಹುದ್ದೆಗಳಲ್ಲಿರುವ ಎಲಾನ್ ಮಸ್ಕ್, ಮೈಕಲ್, ರಿಪಬ್ಲಿಕನ್ ಪಕ್ಷದ ನಾಯಕ ವಿವೇಕ್ ರಾಮಸ್ವಾಮಿಯೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.



# ವೈಟ್ ಹೌಸ್‌ನಲ್ಲಿ ಪ್ರಧಾನಿ ಗೌರವಾರ್ಥ ಔತಣಕೂಟ

ಮೋದಿ ಭೇಟಿ ಹಿನ್ನಲೆಯಲ್ಲಿ ಆಯೋಜಿಸಿದ್ದ ಔತಣಕೂಟದಲ್ಲಿ ಮೋದಿ ಮತ್ತು ಟ್ರಂಪ್ ಅವರು ಮಹತ್ವದ ಮಾತುಕತೆ ನಡೆಸಿದರು. ಟ್ರಂಪ್ ಮೊದಲ ಅವಧಿಗೆ ಅಧ್ಯಕ್ಷರಾಗಿದ್ದಾಗ ಪ್ರಧಾನಿ ಮೋದಿ ರವರೊಂದಿಗೆ ಉತ್ತಮ ಸ್ನೇಹ ಹೊಂದಿದ್ದರು. ಉಭಯ ನಾಯಕರು ಹಲವು ವೇದಿಕೆಗಳಲ್ಲಿ ಭೇಟಿಯಾಗಿ ಚರ್ಚೆ ನಡೆಸಿದ್ದರು. 2019 ರಲ್ಲಿ ಮೋದಿ ಅಮೆರಿಕದ ಟೆಕ್ಸಾಸ್‌ನಲ್ಲಿ ಹೌಡಿ ಮೋದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. 2020ರಲ್ಲಿ ಟ್ರಂಪ್ ಅಹಮದಾಬಾದ್‌ನಲ್ಲಿ ಹಮ್ಮಿಕೊಂಡಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಂತರ ಮಹತ್ವದ ಬೆಳವಣಿಗೆಯ ನಂತರ ಇದೇ ಮೊದಲ ಬಾರಿಗೆ ಉಭಯ ನಾಯಕರು ಭೇಟಿಯಾಗಿದ್ದರು.

ಅಮೆರಿಕ ಅಧ್ಯಕ್ಷರ ಜತೆ ಪ್ರಧಾನಿ ಮೋದಿ ಮೆಗಾ ಡೀಲ್ ಸೇರಿದಂತೆ ಹಲವು ರಕ್ಷಣಾ ಸಂಬಂಧ, ಉಗ್ರರ ಹಸ್ತಾಂತರ ಸೇರಿದಂತೆ ಅನೇಕ ಚರ್ಚೆಯನ್ನು ನಡೆಸಿ, ಹಲವು ಒಪ್ಪಂದಗಳಿಗೆ ಸಹಿ ಹಾಕಿ ಮೋದಿ ಹಾಗೂ ಟ್ರಂಪ್ ಉಭಯ ದೇಶಗಳ ನಡುನ ಬಾಂಧವ್ಯಕ್ಕೆ ಹೊಸ ಭಾಗ್ಯ ಬರೆದಿದ್ದಾರೆ. ಮೋದಿ ಆಲಿಂಗಿಸಿ ಆತ್ಮೀಯವಾಗಿ ಬರಮಾಡಿಕೊಂಡ ಟ್ರಂಪ್, '**ನಿಮ್ಮನ್ನು ತುಂಬಾ ಮಿಸ್ ಮಾಡಿಕೊಂಡಿದ್ದೇನೆ. ನೀವು ಅತ್ಯುತ್ತಮ ವ್ಯಕ್ತಿ ಮತ್ತು ಒಳ್ಳೆಯ ಸ್ನೇಹಿತ**' ಎಂದು ಬಣ್ಣಿಸಿದರು.

ಟ್ರಂಪ್ ಮೊದಲ ಅವಧಿಯಲ್ಲಿ ಭಾರತ ಮತ್ತು ಅಮೆರಿಕ ನಡುವೆ ದ್ವಿಪಕ್ಷೀಯ ಬಾಂಧವ್ಯ, ವ್ಯಾಪಾರ ವಹಿವಾಟು ವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಈ ಬಾರಿಯೂ ಟ್ರಂಪ್ ರೊಂದಿಗೆ ಅಮೆರಿಕದ ತೈಲ, ಅನಿಲ, ಎಫ್-35 ಯುದ್ಧ ವಿಮಾನ ಖರೀದಿ ಸಂಬಂಧ ಹಾಗೂ ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹಾವ್ವೂರ್ ರಾಣಾ ಮತ್ತು ಅಮೆರಿಕದಲ್ಲಿರುವ ಭಾರತದ ಅಕ್ರಮ ವಲಸಿಗರ ಗಡಿಪಾರಿನ ಕುರಿತು ಮೋದಿ ಚರ್ಚೆ ನಡೆಸಿದರು. ಮೋದಿ ಭೇಟಿಗೂ ಕೆಲವೇ ಗಂಟೆಗಳ ಮುನ್ನ ಪಾರಸ್ಪರಿಕ (ರೆಸಿಪ್ರೋಕಲ್) ಸುಂಕದ ಕುರಿತು ಮಹತ್ವದ ತೀರ್ಮಾನವನ್ನು ಟ್ರಂಪ್ ಪ್ರಕಟಿಸಿದ್ದರು. ಈ ವಿಚಾರದ ಕುರಿತೂ ಮಾತುಕತೆ ವೇಳೆ ಚರ್ಚೆ ನಡೆದಿದೆ. ಮಾತುಕತೆ ಬಳಿಕ 44 ನಿಮಿಷಗಳ ಸುದ್ದಿಗೋಷ್ಠಿ ನಡೆಸಿದರು. 2030ಕ್ಕೆ 500 ಬಿಲಿಯನ್ ವ್ಯಾಪಾರ ವಹಿವಾಟು ಗುರಿ, ಎಫ್-34 ಸ್ಟೆಲ್ಲಾರ್ ಫೈಟರ್ ಜೆಟ್ ಭಾರತಕ್ಕೆ ಮಾರುವ ಬಗ್ಗೆ,ಅಕ್ರಮ ವಲಸಿಗರನ್ನು ಕರೆಸಿಕೊಳ್ಳುವ ಬಗ್ಗೆ, ಮುಂಬೈ ದಾಳಿ ಆರೋಪಿ ತಹವ್ವುರ್ ರಾಣಾ ಹಸ್ತಾಂತರ, 25 ಬಿಲಿಯನ್ ಡಾಲರ್ ಇಂಧನ ಖರೀದಿ, ಭಾರತದಲ್ಲಿ ಅಮೆರಿಕನ್ ಕಾಲೇಜು ತೆರೆಯುವ ಬಗ್ಗೆ ಸುದೀರ್ಘವಾದ ಚರ್ಚೆ ನಡೆಸಿ ಪರಸ್ಪರ ಒಪ್ಪಂದಕ್ಕೆ ಬರಲಾಗಿದೆ. ಅಮೆರಿಕದಿಂದ ತೈಲ ಮತ್ತು ಅನಿಲ ಆಮದು ಮಾಡಿಕೊಳ್ಳಲು ಭಾರತ ಒಪ್ಪಿಗೆ ಸೂಚಿಸಿದ್ದು, ಈ ಒಪ್ಪಂದದಂತೆ ಭವಿಷ್ಯದಲ್ಲಿ 25 ಬಿಲಿಯನ್ ಡಾಲರ್ ಮೌಲ್ಯದ ಇಂಧನ ಆಮದು ಮಾಡಿಕೊಳ್ಳಲಾಗುವುದು. ಇದೇ ವೇಳೆ ರಕ್ಷಣಾ ಕ್ಷೇತ್ರದ ಕುರಿತು ಚರ್ಚೆ ನಡೆಯಿತು. ಅಮೆರಿಕದ ಅತ್ಯಾಧುನಿಕ ಎಫ್-35 ಸ್ಟೆಲ್ಲಾರ್ ಯುದ್ಧ ವಿಮಾನವನ್ನು ಭಾರತಕ್ಕೆ ನೀಡಲು ಟ್ರಂಪ್ ಒಪ್ಪಿಗೆ ನೀಡಿದ್ದಾರೆ. ಜತೆಗೆ 6 ಪಿ-8ಐ ಕಡಲು ಗಸ್ತು ವಿಮಾನ ಖರೀದಿ ಸಂಬಂಧ ಸಲ್ಲಿಸಲಾಗಿದ್ದ ಪ್ರಸ್ತಾವನೆಗೆ ಅಮೆರಿಕ ಒಪ್ಪಿಗೆ ನೀಡಿದ್ದು, ಶೀಘ್ರದಲ್ಲೇ ವಿಮಾನಗಳು ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲಿವೆ.

## ಚೀನಾ ಗಡಿ ಸಮಸ್ಯೆಯೂ ಚರ್ಚೆ

ಭಾರತ ಮತ್ತು ಚೀನಾ ಗಡಿ ಸಮಸ್ಯೆ ಚರ್ಚೆಯಾಗಿದ್ದು, ಇತ್ಯರ್ಥಕ್ಕೆ ಮಧ್ಯಸ್ಥಿಕೆ ವಹಿಸುವುದಾಗಿ ಟ್ರಂಪ್ ತಿಳಿಸಿದ್ದಾರೆ. ಪರಮಾಣು ವಿದ್ಯುತ್ ಉತ್ಪಾದನೆ ಸಂಬಂಧ ಟ್ರಂಪ್ ಮತ್ತು ಮೋದಿ ಚರ್ಚೆ ನಡೆಸಿದ್ದು, ಅಮೆರಿಕ ನ್ಯಾಸದ ಪರಮಾಣು ಸ್ಥಾವರ ನಿರ್ಮಿಸಲು ಅಮೆರಿಕ ಮತ್ತು ಭಾರತದ ನಡುವಿನ ಒಪ್ಪಂದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುವುದಾಗಿ ಟ್ರಂಪ್ ತಿಳಿಸಿದ್ದಾರೆ. ರಷ್ಯಾ-ಉಕ್ರೇನ್ ಯುದ್ಧ ಸಂಬಂಧ ಉಭಯ ನಾಯಕರು ಚರ್ಚಿಸಿದ್ದು, ಶಾಂತಿ ಸ್ಥಾಪಿಸಲು ಟ್ರಂಪ್‌ಗೆ ಭಾರತ ಅಗತ್ಯ ಬೆಂಬಲ ನೀಡಲಿದೆ. ಭಾರತ ಶಾಂತಿಯ ಪರವಾಗಿದೆ ಎಂದು ಮೋದಿ ತಿಳಿಸಿದರು.

## ಮೋದಿಗೆ ಪುಸ್ತಕ ಉಡುಗೊರೆ



ಟ್ರಂಪ್ ತಮ್ಮ ಗೆಳೆಯ ಮೋದಿಗೆ ಹೌಡಿ ಮೋದಿ ಮತ್ತು ನಮಸ್ತೆ ಟ್ರಂಪ್ ಕಾರ್ಯಕ್ರಮಗಳ ಫೋಟೋಗಳನ್ನು ಒಳಗೊಂಡ ಅವರ್ ಜರ್ನಿ ಟುಗೆದರ್' ಎಂಬ ಪುಸ್ತಕವನ್ನು ಉಡುಗೊರೆಯಾಗಿ ನೀಡಿದರು. ಪುಸ್ತಕದಲ್ಲಿ ಮಿನಿಸ್ಟರ್ ಪ್ರೈಮ್ ಮಿನಿಸ್ಟರ್, ಯೂ ಆರ್ ಗ್ರೇಟ್ ಎಂದು ಬರೆದು ಸಹಿ ಮಾಡಿದ್ದಾರೆ.




# ಎಐ ಶೃಂಗ ಸಭೆಯಲ್ಲಿ ಮೋದಿ

ಅಮೆರಿಕಾ ಪ್ರವಾಸಕ್ಕೂ ಮುನ್ನ ಫ್ರಾನ್ಸ್ ನಲ್ಲಿ ನಡೆದ ಎಐ ಶೃಂಗಸಭೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಭಾಗಿಯಾಗಿ ಮಾತನಾಡಿದರು. ಜನಜೀವನವನ್ನು ಕ್ರಾಂತಿಕಾರಕವಾಗಿ ಬದಲಾಯಿಸುವ ಸಾಮರ್ಥ್ಯವಿರುವ ಕೃತಕ ಬುದ್ಧಿಮತ್ತೆಗಾಗಿ (ಎಐ) ಜಾಗತಿಕ ಚೌಕಟ್ಟನ್ನು ರೂಪಿಸಲು ಸಾಮೂಹಿಕ ಪ್ರಯತ್ನಗಳನ್ನು ನಡೆಸುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ಈ ಚೌಕಟ್ಟು ನಂಬಿಕೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಹಾಗೂ ಪೂರ್ವಗ್ರಹಗಳಿಂದ ಮುಕ್ತವಾದ ಮುಕ್ತ ಸಂಪನ್ಮೂಲ ಆಧರಿಸಿರಬೇಕು ಎಂದು ಎಐ ಕ್ರಿಯಾ ಶೃಂಗಸಭೆಯ ಸಹ-ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕೃತಕ ಬುದ್ಧಿಮತ್ತೆಯು ರಾಜಕೀಯ, ಆರ್ಥಿಕತೆ, ಭದ್ರತೆ ಮತ್ತು ಸಮಾಜವನ್ನು ಬದಲಾಯಿಸುತ್ತಿದೆ, ಎಐ 21ನೇ ಶತಮಾನದಲ್ಲಿ 'ಮನುಕುಲಕ್ಕೆ ಕೋಡ್ ಬರೆಯುತ್ತಿದೆ' ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು. ಅಪಾಯಗಳ ನಿರ್ವಹಣೆ ಮತ್ತು ಪ್ರತಿಸ್ಪರ್ಧಿಗಳನ್ನು ಎದುರಿಸಲು ಮಾತ್ರವಲ್ಲ, ಅನ್ವೇಷಣೆಗಳ ಉತ್ತೇಜನ ಮತ್ತು ಜಾಗತಿಕ ಕಲ್ಯಾಣಕ್ಕೆ ಅವುಗಳ ಬಳಕೆಗೂ ಆಡಳಿತದ ಅವಶ್ಯಕತೆಯಿದೆ ಎಂದು ಮೋದಿ ಹೇಳಿದರು.

ಜೀವನ ಬದಲಾವಣೆ ಸಾಮರ್ಥ್ಯ ಆರೋಗ್ಯ, ಶಿಕ್ಷಣ, ಕೃಷಿ ಇತ್ಯಾದಿ ಕ್ಷೇತ್ರಗಳಲ್ಲಿ ಸುಧಾರಣೆ ತಂದು ಕೋಟಿಗಟ್ಟಲೆ ಜನರ ಜೀವನವನ್ನು ಪರಿವರ್ತಿಸಲು ಎಐ ನೆರವಾಗಬಲ್ಲದು. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ತಲುಪುವ ಪಯಣವನ್ನು ಸುಲಭ ಹಾಗೂ ತ್ವರಿತಗೊಳಿಸುವ ಜಗತ್ತನ್ನು ಸೃಷ್ಟಿಸಲು ಅದು ನೆರವಾಗಬಲ್ಲದು ಎಂದರು. ಎಐನಿಂದಾಗಿ ಉದ್ಯೋಗ ನಷ್ಟವಾಗುವುದೆಂಬ ಆತಂಕವನ್ನು ಪ್ರಸ್ತಾಪಿಸಿ, ಅದಕ್ಕೆ ಯಾವುದೇ ಆಧಾರವಿಲ್ಲ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಹೇಳಿದರು.

ತಂತ್ರಜ್ಞಾನದಿಂದಾಗಿ ಉದ್ಯೋಗಗಳು ಅದೃಶ್ಯವಾಗುವುದಿಲ್ಲ ಎನ್ನುವುದನ್ನು ಇತಿಹಾಸವೇ ತೋರಿಸಿ ಕೊಟ್ಟಿದೆ. ಆದರೆ, ಪ್ರಕೃತಿ ಬದಲಾಗುತ್ತದೆ ಹಾಗೂ ಹೊಸ ರೀತಿಯ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಪ್ರತಿಪಾದಿಸಿದರು.



## ಬಲಗೊಳ್ಳುವ ಭರವಸೆ

- ವಿಶ್ವದ ದೊಡ್ಡ ಮತ್ತು ಹಳೆಯ ಪ್ರಜಾಪ್ರಭುತ್ವ ರಾಷ್ಟ್ರಗಳಾದ ಅಮೆರಿಕ ಹಾಗೂ ಭಾರತದ ನಡುವಿನ ದ್ವಿಪಕ್ಷೀಯ ಸಂಬಂಧವು ಹೊಸ ಎತ್ತರಕ್ಕೆ ತಲುಪಿದೆ. ವಿಶ್ವವೇ ಕಾದು ಕುಳಿತಿದ್ದ ಈ ಎರಡು ದೇಶಗಳ ನಾಯಕರ ಭೇಟಿ ಹೊಸ ಭಾಷ್ಯ ಬರೆಯುವುದರಲ್ಲಿ ಅನುಮಾನವಿಲ್ಲ.
- ಟ್ರಂಪ್ ಅವರ ಕೆಲವು ಅಚ್ಚರಿಯ ನಿರ್ಧಾರಗಳಿಂದ ಭಾರತ ಅಮೆರಿಕಾ ಸಂಬಂಧ ಹದಗೆಡಲಿದೆ ಎಂದು ಕಾದು ಕುಳಿತಿದ್ದವರಿಗೆ ನಿರಾಶೆಯಾಗಿದೆ.
- ಟ್ರಂಪ್ ಮತ್ತು ಮೋದಿಯವರ ಭೇಟಿ ಮತ್ತು ಸಂಬಂಧಿತ ಬೆಳವಣಿಗೆಗಳ ಮೇಲೆ ಜಾಗತಿಕ ರಾಷ್ಟ್ರಗಳು ಗಮನ ಹರಿಸಿವೆ. ಹಾಗಾಗಿ, ಇದು ಕೇವಲ ಔಪಚಾರಿಕ ಭೇಟಿ ಆಗಿರದೆ, ವರ್ತಮಾನದ ಅನಿವಾರ್ಯತೆಗಳನ್ನು ಅರಿತುಕೊಂಡು, ಕೆಲ ಭಿನ್ನಾಭಿಪ್ರಾಯ ಬದಿಗಿರಿಸಿ ಒಟ್ಟಿಗೆ ಸಾಗುವ ಅಗತ್ಯವನ್ನು ಸಾರಿದೆ. ಹಾಗಾಗಿ, ಮುಂಬರುವ ದಿನಗಳಲ್ಲಿ ಭಾರತ-ಅಮೆರಿಕ ಸ್ನೇಹ ಹಾಗೂ ಬಾಂಧವ್ಯ ಮತ್ತಷ್ಟು ಬಲಗೊಳ್ಳುವುದರಲ್ಲಿ ಭರವಸೆ ಮೂಡಿದೆ.
- ಮುಂದಿನ ಎಐ ಶೃಂಗಸಭೆಗೆ ಭಾರತ ಆತಿಥ್ಯ ವಹಿಸಲಿರುವುದು ಅತ್ಯಂತ ವಿಶೇಷವಾಗಿರಲಿದೆ.




# ಕೇಂದ್ರ ಬಜೆಟ್ 2025

## ಬಜೆಟ್ ಗಾತ್ರ

**50.65** ಲಕ್ಷ ಕೋ.ರೂ.

**ಏರಿಕೆ**

ನೇಯ್ಗೆಯ ಬಟ್ಟೆಗಳು, ಫ್ಲ್ಯಾಟ್ ಪ್ಯಾನೆಲ್ ಡಿಸ್‌ಪ್ಲೇ, ಟೆಲಿಕಾಂ ಉಪಕರಣ, ಆಲ್ಕೋಹಾಲ್, ತಂಬಾಕು, ಸಿಗರೇಟ್, ಚಿನ್ನ ಬೆಳ್ಳಿ ಆಮದು, ವಿಮಾನ ಇಂಧನ ಮತ್ತು ಟಿಕೆಟ್, ಐಷಾರಾಮಿ ಸರಕುಗಳು, ಪ್ಲಾಸ್ಟಿಕ್ ವಸ್ತುಗಳು ಹಾಗೂ ಜಂಕ್ ಫುಡ್

**ಇಳಿಕೆ**

ಮೊಬೈಲ್, ಎಲ್‌ಇಡಿ ಟಿವಿ, ಸುಗಂದ ದ್ರವ್ಯ, ಲಿಥಿಯಂ ಬ್ಯಾಟರಿ, ಬೆಲ್ಟ್, ಶೂ, ಜಾಕೆಟ್, ಸಾಗರ ಉತ್ಪನ್ನ, ಹಡಗುಗಳ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳು, ಕ್ಯಾನ್ಸರ್ ಔಷಧಿ, ಜೀವರಕ್ಷಕ ಔಷಧಿಗಳು , ಸ್ವದೇಶಿ ಬಟ್ಟೆ

## ವಲಯವಾರು ಅನುದಾನ

ರಕ್ಷಣಾ ಕ್ಷೇತ್ರ ₹ 6.81 ಲಕ್ಷ ಕೋಟಿ

ಗ್ರಾಮೀಣ ಅಭಿವೃದ್ಧಿ ₹ 2.66 ಲಕ್ಷ ಕೋಟಿ

ಗೃಹ ಇಲಾಖೆ ₹ 2.33 ಲಕ್ಷ ಕೋಟಿ

ಕೃಷಿ, ರೈತರ ಕಲ್ಯಾಣ ₹ 1.71 ಲಕ್ಷ ಕೋಟಿ

ಶಿಕ್ಷಣ ₹ 1.28 ಲಕ್ಷ ಕೋಟಿ

ಆರೋಗ್ಯ ₹ 98,311 ಕೋಟಿ

ನಗರಾಭಿವೃದ್ಧಿ ₹ 96,777 ಕೋಟಿ

ಮಾಹಿತಿ ತಂತ್ರಜ್ಞಾನ ₹ 95,298 ಕೋಟಿ

ಇಂಧನ ₹ 81,174 ಕೋಟಿ

ವಾಣಿಜ್ಯ ಮತ್ತು ಕೈಗಾರಿಕೆ ₹ 68,553 ಕೋಟಿ

ಸಮಾಜ ಕಲ್ಯಾಣ ಇಲಾಖೆ ₹ 60,052 ಕೋಟಿ

ವಿಜ್ಞಾನ ಕ್ಷೇತ್ರ ₹ 55,679 ಕೋಟಿ



ಸಾಮಾನ್ಯ ನಾಗರಿಕರು ವಿಕಸಿತ ಭಾರತದ ಧ್ಯೇಯವನ್ನು ಮುನ್ನಡೆಸಲಿದ್ದಾರೆ. ಇದು ಸಾಮಾನ್ಯ ಜನರ ಬಜೆಟ್. ಈ ಬಜೆಟ್ ಉಳಿತಾಯ, ಹೂಡಿಕೆ ಮತ್ತು ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಬಜೆಟ್‌ಗಳು ಹೆಚ್ಚಾಗಿ ಖಜಾನೆ ತುಂಬುವುದರ ಮೇಲೆ ಕೇಂದ್ರೀಕರಿಸುತ್ತವೆ. ಈ ಬಜೆಟ್ ಜನರ ಜೇಬು ತುಂಬುವ ಮತ್ತು ಉಳಿತಾಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

– ಪ್ರಧಾನಿ ಶ್ರೀ ನರೇಂದ್ರ ಮೋದಿ

- ಬಾಡಿಗೆ ಟಿಡಿಎಸ್ ಮಿತಿ 6 ಲಕ್ಷಕ್ಕೆ ಏರಿಕೆ.
- ಒಂದು ಕೋಟಿ ಗಿಗ್ ಕಾರ್ಮಿಕರಿಗೆ ಗುರುತಿನಚೀಟಿ.
- 5 ಲಕ್ಷ ಎಸ್‌ಸಿ–ಎಸ್‌ಟಿ ಮಹಿಳಾ ಉದ್ಯಮಿಗಳಿಗೆ ಬೆಂಬಲ.
- ಎನ್ ಪಿಎಸ್ ವಾತ್ಸಲ್ಯ ಚಂದಾದಾರರಿಗೆ ತೆರಿಗೆ ಅನುಕೂಲ.
- ಹಿರಿಯ ನಾಗರಿಕರ ಬಡ್ಡಿ ಮೇಲಿನ ತೆರಿಗೆ ಕಡಿತದ ಮಿತಿ ಹೆಚ್ಚಳ.
- ಟಿಸಿಎಸ್ ಮಿತಿಯನ್ನು 7 ಲಕ್ಷ ರೂ.ಗಳಿಂದ 10 ಲಕ್ಷ ರೂ.ಗೆ ಹೆಚ್ಚಳ.
- ಶಿಕ್ಷಣದ ಉದ್ದೇಶಗಳಿಗಾಗಿ ರವಾನೆಗಳ ಮೇಲಿನ ಟಿಸಿಎಸ್ ಇಲ್ಲ
- ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ಅವಧಿ 4 ವರ್ಷಕ್ಕೆ ವಿಸ್ತರಣೆ
- ಗರ್ಭಿಣಿಯರು, ಮಕ್ಕಳು, ತಾಯಂದಿರಿಗೆ ಪೌಷ್ಟಿಕಾಂಶದ ಬೆಂಬಲ
- ಮಹಿಳೆಯರಿಗೆ ಆನ್ ಲೈನ್ ಸಾಮರ್ಥ್ಯ ವೃದ್ಧಿ ಕಾರ್ಯಾಗಾರ
- ಆಧುನಿಕ ವ್ಯಾಪಾರ, ಮಹಿಳೆಯರಿಗೆ ಡಿಜಿಟಲ್ ತರಬೇತಿ
- ಉದ್ಯಮಶೀಲತಾ ಕೌಶಲ್ಯಗಳಿಗೆ ಕಾರ್ಯಾಗಾರ ಆಯೋಜನೆ





## 12.75 ಲಕ್ಷ ರೂ. ವರೆಗೆ ತೆರಿಗೆ ಪಾವತಿಗೆ ವಿನಾಯಿತಿ

## ತೆರಿಗೆಯ ಹಂತಗಳಲ್ಲಿ ಗಮನಾರ್ಹ ಬದಲಾವಣೆ

| ಆದಾಯ | ಸ್ಲಾಬ್–ದರ ಮೇಲಿನ ತೆರಿಗೆ | | ಅನುಕೂಲ | ರಿಯಾಯ್ತಿ ಅನುಕೂಲ | ಒಟ್ಟು ಅನುಕೂಲ | ರಿಯಾಯ್ತಿ ನಂತರದ ತೆರಿಗೆ |
|---|---|---|---|---|---|---|
| | ಸದ್ಯ | ಹೊಸ ಪ್ರಮಾಣ | ದರ/ಸ್ಲಾಬ್ | (12 ಲಕ್ಷದವರೆಗೆ) | | |
| 8 ಲಕ್ಷ | 30,000 | 20,000 | 10,000 | 20,000 | 30,000 | 0 |
| 9 ಲಕ್ಷ | 40,000 | 30,000 | 10,000 | 30,000 | 40,000 | 0 |
| 10 ಲಕ್ಷ | 50,000 | 40,000 | 10,000 | 40,000 | 50,000 | 0 |
| 11 ಲಕ್ಷ | 65,000 | 50,000 | 15,000 | 50,000 | 65,000 | 0 |
| 12 ಲಕ್ಷ | 80,000 | 60,000 | 20,000 | 60,000 | 80,000 | 0 |
| 16 ಲಕ್ಷ | 1,70,000 | 1,20,000 | 50,000 | 0 | 50,000 | 1,20,000 |
| 20 ಲಕ್ಷ | 2,90,000 | 2,00,000 | 90,000 | 0 | 90,000 | 2,00,000 |
| 24 ಲಕ್ಷ | 4,10,000 | 3,00,000 | 1,10,000 | 0 | 1,10,000 | 3,00,000 |
| 50 ಲಕ್ಷ | 11,90,000 | 10,80,000 | 1,10,000 | 0 | 1,10,000 | 10,80,000 |

- 12 ಲಕ್ಷ ರೂ.ಗಳವರೆಗೆ ಆದಾಯ ತೆರಿಗೆ ಇಲ್ಲ
- 75 ಸಾವಿರ ರೂ ಸ್ಟ್ಯಾಂಡರ್ಡ್ ಡಿಡಕ್ಷನ್ ಸೇರಿ 12.75 ಲಕ್ಷದವರೆಗೆ ತೆರಿಗೆ ಇಲ್ಲ.
- ಹೊಸ ತೆರಿಗೆ ವ್ಯವಸ್ಥೆಯಿಂದ ವೇತನ ಪಡೆಯುವ ಮಧ್ಯಮ ವರ್ಗದವರ ಆರ್ಥಿಕ ಹೊರೆ ಇಳಿತ.
- ಕುಟುಂಬ ನಿರ್ವಹಣೆಗೆ ಹೆಚ್ಚು ಖರ್ಚು ಮಾಡುವ, ಉಳಿತಾಯ ಮತ್ತು ಹೂಡಿಕೆ ಮಾಡುವ ಸಾಮರ್ಥ್ಯ ಹೆಚ್ಚಳ.



## ಡೆಲಿವರಿ ಬಾಯ್ಸ್‌ಗೆ ವಿಮೆ

ಬಜೆಟ್‌ನಲ್ಲಿ 1 ಕೋಟಿ ಗಿಗ್ ಕೆಲಸಗಾರರಿಗೆ ಐ–ಕಾರ್ಡ್ ಘೋಷಣೆ. ಇ – ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಗೆ ಅವಕಾಶ ಇದರಿಂದ ಸ್ವಿಗ್ಗಿ, ಜೊಮಾಟೋದಂತಹ ಕಂಪನಿಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೂ ಆರೋಗ್ಯ ವಿಮೆ. ಗಿಗ್ ಕಾರ್ಮಿಕರಿಗೆ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂ–ಜೆಎವೈ) ಅಡಿಯಲ್ಲಿ ಆರೋಗ್ಯ ಸೌಲಭ್ಯ. ಸುಮಾರು 1 ಕೋಟಿ ಕಾರ್ಮಿಕರಿಗೆ ಪ್ರಯೋಜನ.

## ಡೇ ಕೇರ್ ಕ್ಯಾನ್ಸರ್ ಕೇಂದ್ರ



ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಿಸಿದ ಔಷಧಗಳು ಅಗ್ಗ. **36 ಜೀವ ರಕ್ಷಕ ಔಷಧ**ಗಳ ಮೇಲಿನ ಕಸ್ಟಮ್ ಸುಂಕ ರದ್ದು. ಮುಂದಿನ ಮೂರು ವರ್ಷಗಳಲ್ಲಿ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಡೇಕೇರ್ ಕ್ಯಾನ್ಸರ್ ಕೇಂದ್ರ ಸ್ಥಾಪನೆ. **2025–26ನೇ ಸಾಲಿನಲ್ಲಿ 200 ಕೇಂದ್ರಗಳ ಸ್ಥಾಪನೆಯ ಗುರಿ.**

# ಕೃಷಿ

- ಧನ ಧಾನ್ಯ ಕೃಷಿ ಯೋಜನೆ: 1.75 ಕೋಟಿ ರೈತರಿಗೆ ಅನುಕೂಲ
- ಅಸ್ಸಾಂನಲ್ಲಿ ಹೊಸ ಯೂರಿಯಾ ಸ್ಥಾವರ ಸ್ಥಾಪನೆ
- ಬಿತ್ತನೆ ಬೀಜಗಳ ವಿತರಣೆಗೆ ಕೇಂದ್ರ, ರಾಷ್ಟ್ರೀಯ ಮಿಷನ್

- ಕೃಷಿ ವಲಯದಲ್ಲೂ ತರಬೇತಿ ಪ್ರಕ್ರಿಯೆ
- ರಾಜ್ಯಗಳ ಸಹಭಾಗಿತ್ವದಲ್ಲಿ ಧನ ಸಹಾಯ ಯೋಜನೆ
- ಕೃಷಿ ವಲಯಕ್ಕೆ ಸಂಬಂಧಿಸಿದ ಕೌಶಲ ತರಬೇತಿ
- ಕೃಷಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆ
- ಕೃಷಿ ನಿರುದ್ಯೋಗ ಹೋಗಲಾಡಿಸಲು ಯೋಜನೆ
- ಹತ್ತಿ ಕೃಷಿಗೆ ಅತ್ಯಾಧುನಿಕ ತಂತ್ರಜ್ಞಾನ ಬಳಕೆ.
- ಭೂರಹಿತ ರೈತರಿಗೆ ವಿಶೇಷ ಆದ್ಯತೆ
- ದ್ವಿದಳ ಧಾನ್ಯಗಳಿಗಾಗಿ ಆತ್ಮನಿರ್ಭರ ಮಿಷನ್
- ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ ಗುರಿ
- ಬೆಳೆ ವೈವಿಧ್ಯಕರಣ ಮತ್ತು ಸುಸ್ಥಿರ ಕೃಷಿ ಪದ್ಧತಿ
- ಶೇಖರಣಾ ಸೌಲಭ್ಯಗಳನ್ನು ಹೆಚ್ಚಿಸುವ ಯೋಜನೆಗಳು
- ಕೃಷಿ ಮಾರುಕಟ್ಟೆ ಸಂಸ್ಥೆಗಳ ಜೊತೆ ರೈತರಿಗೆ ಒಪ್ಪಂದ ಅವಕಾಶ
- ಬೇಳೆ-ಕಾಳುಗಳನ್ನು ಸಂಸ್ಥೆಗಳ ಜೊತೆ ಮಾರುವ ಸಹಯೋಗ
- ಬೆಳೆ ತೀವ್ರತೆಯ ನಿಯಂತ್ರಣ




- ಕಿಸಾನ್ ಕ್ರೆಡಿಟ್ ಕಾರ್ಡ್ 7.7 ಕೋಟಿ ರೈತರಿಗೆ, ಮೀನುಗಾರರಿಗೆ ಮತ್ತು ಹೈನುಗಾರಿಕೆ ವೃತ್ತಿ ಯಲ್ಲಿರುವವರಿಗೆ 5 ಲಕ್ಷ.ರೂ ಅಲ್ಪಾವಧಿಯ ಸಾಲ.
- ಹೆಚ್ಚು ಇಳುವರಿ ನೀಡುವ ಬೀಜಗಳ ಪೂರೈಕೆಗೆ ನ್ಯಾಷನಲ್ ಮಿಶನ್ ಸ್ಥಾಪನೆಗೆ ನಿರ್ಧಾರ.
- ಸ್ಥಳೀಯ ಹವಾಮಾನಕ್ಕೆ ಪೂರಕವಾಗಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಹೆಚ್ಚು ಇಳುವರಿ ನೀಡುವ ಬೀಜಗಳ ವಿತರಣೆಗೆ ಅಗತ್ಯ ಕ್ರಮ.
- ಕಿಸಾನ್ ಕ್ರೆಡಿಟ್ ಕಾರ್ಡ್ ಮಿತಿ 5 ಲಕ್ಷ ರೂ. ಹೆಚ್ಚಳ, ಜಿಲ್ಲೆಗಳಲ್ಲಿ ಕೃಷಿ ಅಭಿವೃದ್ಧಿಗೆ ಪೂರಕ 100 ಜಿಲ್ಲೆಗಳ 1.7 ಕೋಟಿ ರೈತರಿಗೆ ಈ ಮಹತ್ತರ ಯೋಜನೆಯಿಂದ ಸಹಕಾರಿ.
- ಬಿಹಾರದಲ್ಲಿ ಮಖಾನಾ ಮಂಡಳಿ ಸ್ಥಾಪನೆಗೆ ನಿರ್ಧಾರ.
- ಹತ್ತಿ ಬೆಳೆಯ ಸಮಗ್ರ ಕಾಯಕಲ್ಪಕ್ಕಾಗಿ ಐದು ವರ್ಷಗಳ ಅವಧಿಯ ಪೂರಕ ಕ್ರಮ.

# ಮೀನುಗಾರಿಕೆ

- ಮೀನುಗಾರಿಕೆ ವಲಯ: **2,616.44** ಕೋ.ರೂ.
- ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮತ್ಸ್ಯೋದ್ಯಮ ಸ್ಥಾಪಿಸುವವರಿಗೆ ಆರ್ಥಿಕ ನೆರವು.
- ಸೆಂಟ್ರಲ್ ಮೆರೈನ್ ರಿಸರ್ಚ್ ಇನ್ಸ್ಟಿಟ್ಯೂಟ್‌ನ ವಿವಿಧ ಸಂಶೋಧನೆಗಳ ಮೂಲಕ ಮೀನುಗಾರಿಕಾ ವಲಯದಲ್ಲಿ ಇನ್ನಷ್ಟು ಲಾಭ.
- ಸಣ್ಣ ಮೀನುಗಾರ ಸಮುದಾಯಗಳು ಹಾಗೂ ಸಾಂಪ್ರದಾಯಿಕ ಮೀನುಗಾರರ
- ಅಭಿವೃದ್ಧಿಗಾಗಿ ಮತ್ತು ಅವರ ಜೀವನೋಪಾಯಕ್ಕಾಗಿ ಬೆಂಬಲ.

# ಪರಿಸರ

- ಕೇಂದ್ರ ಪರಿಸರ ಸಚಿವಾಲಯಕ್ಕೆ 3,412.82 ಕೋ.ರೂ.
- ಅರಣ್ಯ ವ್ಯಾಪ್ತಿ ವಿಸ್ತರಣೆ, ಕಾಡುಗಳನ್ನು ರಕ್ಷಿಸಲು ಮತ್ತು ಕಾಡ್ಗಿಚ್ಚುಗಳನ್ನು ತಡೆಗಟ್ಟುವ ಕೆಲಸಕ್ಕೆ ರಾಷ್ಟ್ರೀಯ ಹಸಿರು ಭಾರತ ಮಿಷನ್‌ಗೆ 220 ಕೋ. ರೂ.
- ಜಲಚರ ಪರಿಸರ ವ್ಯವಸ್ಥೆ ಸಂರಕ್ಷಣೆಗೆ 35 ಕೋ. ರೂ. ಹಂಚಿಕೆ.
- ಪ್ರಾಜೆಕ್ಟ್ ಟೈಗರ್ ಮತ್ತು ಪ್ರಾಜೆಕ್ಟ್ ಎಲಿಫೆಂಟ್ ಪ್ರಾಣಿಗಳು ಮತ್ತು ಅವುಗಳ ಆವಾಸ ಸ್ಥಾನಗಳನ್ನು ರಕ್ಷಿಸುವತ್ತ ಗಮನಹರಿಸುವ ನಿಧಿಯನ್ನು 245 ಕೋ.ರೂ. ಗಳಿಂದ 290 ಕೋ.ರೂ.ಗಳಿಗೆ ಹೆಚ್ಚಿಸಲಾಗಿದೆ.



**ಕೋಸಿ ಕಾಲುವೆ ಯೋಜನೆ:** ಬಿಹಾರದ ಮಿಥಿಲಾ ಪ್ರದೇಶದಲ್ಲಿ 50,000 ಹೆಕ್ಟೇರ್‌ಗೂ ಹೆಚ್ಚು ಭೂಮಿಯನ್ನು ಕೃಷಿ ಮಾಡಲು ಸಹಾಯ. ರೈತರಿಗೆ ಪ್ರಯೋಜನವನ್ನು ನೀಡುವ ಪಶ್ಚಿಮ ಕೋಸಿ ಕಾಲುವೆ ಯೋಜನೆಗೆ ಬಂಪರ್ ಉಡುಗೊರೆ.

# ಪ್ರವಾಸೋದ್ಯಮ ಇಲಾಖೆಗೆ 2,541 ಕೋ.ರೂ.



## 50 ಪ್ರವಾಸಿ ತಾಣಗಳ ಅಭಿವೃದ್ಧಿ

- ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಆಯ್ದ ಪ್ರವಾಸಿ ಗುಂಪುಗಳಿಗೆ ವ್ಯವಸ್ಥಿತ ಇ-ವೀಸಾ ಸೌಲಭ್ಯ ಮತ್ತು ವೀಸಾ ಶುಲ್ಕ ವಿನಾಯಿತಿ.
- ಹೀಲ್ ಇನ್ ಇಂಡಿಯಾ ಉಪಕ್ರಮದಡಿ ಮೆಡಿಕಲ್ ಟೂರಿಸಂಗೆ ಇನ್ನಷ್ಟು ಉತ್ತೇಜನ.
- ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಲಾಗಿರುವ ಪ್ರಸಾದ್ (Pilgrimage Rejuvenation and Spiritual Augmentation Drive) ಯೋಜನೆಗೆ ಹೆಚ್ಚಿನ ಅನುದಾನ.
- ಸ್ಪೇನ್, ಚೀನಾ, ಫ್ರಾನ್ಸ್ ಸೇರಿದಂತೆ ಕೆಲವು ದೇಶಗಳಲ್ಲಿ ಭಾರತದ ಪ್ರವಾಸೋದ್ಯಮದ ಬಗ್ಗೆ ಅಭಿಯಾನ ಕೈಗೊಳ್ಳಲು ಯೋಜನೆ.
- ಪ್ರವಾಸಿ ತಾಣಗಳಲ್ಲಿ ಸುರಕ್ಷಿತ ಮತ್ತು ಮಹಿಳಾ ಸ್ನೇಹಿ ವಾತಾವರಣವನ್ನು ಸೃಷ್ಟಿಸುವ ಗುರಿ.
- ಪ್ರವಾಸೋದ್ಯಮ ಉತ್ತೇಜನಕ್ಕೆ ಮುದ್ರಾ ಯೋಜನೆಯಡಿ ಹೋಂ ಸ್ಟೇಗಳಿಗೆ ಸಾಲ ಸೌಲಭ್ಯ.
- ಪ್ರವಾಸಿ ತಾಣಗಳ ಸ್ವಚ್ಛತೆ, ನಿರ್ವಹಣೆ ಆಧರಿಸಿ ರಾಜ್ಯಗಳಿಗೆ ಪ್ರೋತ್ಸಾಹ ಧನ.



## ರಕ್ಷಣೆ

- ರಕ್ಷಣಾ ಕ್ಷೇತ್ರಕ್ಕೆ 6.81 ಲಕ್ಷ ಕೋ.ರೂ. ಘೋಷಣೆ.
- ಹೊಸ ಫೈಟರ್ ಜೆಟ್‌ಗಳು, ಹೆಲಿಕಾಪ್ಟರ್‌ಗಳು, ಯುದ್ಧನೌಕೆಗಳು, ಜಲಾಂತರ್ಗಾಮಿ ನೌಕೆಗಳು, ಟ್ಯಾಂಕ್‌ಗಳು, ಫಿರಂಗಿ ಬಂದೂಕುಗಳು, ಡ್ರೋನ್‌ಗಳು ಮತ್ತು ರಾಕೆಟ್‌ಗಳು ಮತ್ತು ಕ್ಷಿಪಣಿಗಳ ಖರೀದಿ.
- ಪಿಂಚಣಿಗಾಗಿ 1,60,795 ಕೋ.ರೂ.
- ರಾಜಸ್ವ ವೆಚ್ಚ 4,88,822 ಕೋ.ರೂ.
- ವಿಮಾನ ಮತ್ತು ಏರೋಎಂಜಿನ್‌ಗಳಿಗೆ 48,614 ಕೋ.ರೂ.
- ನೌಕಾಪಡೆಗೆ 24,390 ಕೋ.ರೂ.
- ಇತರೆ ಉಪಕರಣಗಳ ಖರೀದಿಗೆ 63,099 ಕೋ.ರೂ.

## ತನಿಖೆ

- ಸಿಬಿಐ ಸಂಸ್ಥೆಗೆ 1,071 ಕೋ.ರೂ.
- ಸಿಬಿಐ ಸಂಸ್ಥೆಯು ವ್ಯವಹಾರಗಳನ್ನು ನಿರ್ವಹಿಸಲು 986.93 ಕೋ.ರೂ. ನಿಗದಿ.
- ಸಿಬಿಐ ತರಬೇತಿ ಕೇಂದ್ರಗಳ ಆಧುನೀಕರಣ, ತಾಂತ್ರಿಕ ಮತ್ತು ವಿಧಿ ವಿಜ್ಞಾನ ಬೆಂಬಲ ಘಟಕಗಳ ಸ್ಥಾಪನೆ, ಸಮಗ್ರ ಆಧುನೀಕರಣ ಮತ್ತು ಭೂಮಿ ಖರೀದಿ ಮತ್ತು ಸಂಸ್ಥೆಗಾಗಿ ಕಚೇರಿ ಮತ್ತು ನಿವಾಸ ಕಟ್ಟಡಗಳ ನಿರ್ಮಾಣ.



## ಕಾರಾಗೃಹ

- ಕಾರಾಗೃಹಗಳಿಗೆ 300 ಕೋ.ರೂ. ಅನುದಾನ.
- ಗೃಹ ಸಚಿವಾಲಯವು ಗಂಭೀರ ಅಪರಾಧಿಗಳಿಗಾಗಿ ಹೆಚ್ಚಿನ ಭದ್ರತಾ ಜೈಲುಗಳು, ಸಾಮಾನ್ಯ ಕೈದಿಗಳಿಗಾಗಿ ತೆರೆದ ಜೈಲುಗಳು ಮತ್ತು ಪುನರಾವರ್ತಿತ ಅಪರಾಧಿಗಳು ಮತ್ತು ಅಪಾಯಕಾರಿ ಎಂದು ಪರಿಗಣಿಸುವವರ ಅಪರಾಧ ಚಟುವಟಿಕೆಗಳಿಂದ ಸಮಾಜವನ್ನು ರಕ್ಷಿಸುವ ಗುರಿ. ಪ್ರಸ್ತಾವಿತ ಮಾದರಿ ಕಾರಾಗೃಹ ಕಾಯ್ದೆಯ ವಿಶ್ಲೇಷಣೆ.

## ಎಸ್‌ಸಿ, ಎಸ್‌ಟಿ ಮಹಿಳಾ ಉದ್ಯಮಿಗಳಿಗೆ ನೂತನ ಯೋಜನೆ

- ಮೊದಲ ಬಾರಿ ಉದ್ಯಮಿಗಳಾಗುತ್ತಿರುವ ಮಹಿಳೆಯರಿಗೆ ಮುಂದಿನ 5 ವರ್ಷಗಳಲ್ಲಿ 2 ಕೋ.ರೂ. ಟರ್ಮ್ ಲೋನ್.
- ಆನ್‌ಲೈನ್‌ನಲ್ಲಿ ಬ್ಯುಸಿನೆಸ್ ಉತ್ತೇಜನಾ ಮತ್ತು ನಿರ್ವಹಣಾ ಕೌಶಲಗಳ ಅಭಿವೃದ್ಧಿಯ ಕುರಿತು ಕಾರ್ಯಾಗಾರ.

## ಶಿಕ್ಷಣ



- ಐಐಟಿಯಲ್ಲಿ 6,500 ಸೀಟುಗಳ ಹೆಚ್ಚಳ.
- ಮೂರು ಎಐ ಕೇಂದ್ರಗ ಸ್ಥಾಪನೆ. ಮುಂದಿನ 5 ವರ್ಷ 75,000 ಸೀಟುಗಳನ್ನು ಸೇರಿಸುವ ಗುರಿ. ಹೆಚ್ಚುವರಿಯಾಗಿ 10,000 ಸೀಟುಗಳ ಸೇರ್ಪಡೆ.
- ಶಾಲೆ, ಪಿಎಚ್‌ಸಿಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ
- ಗ್ರಾಮೀಣ ಪ್ರದೇಶದ ಎಲ್ಲ ಸರ್ಕಾರಿ ಮಾಧ್ಯಮಿಕ ಶಾಲೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ.
- ಯುವ ಮನಸ್ಸುಗಳಲ್ಲಿ ಕುತೂಹಲ, ನಾವೀನ್ಯತೆ ಹಾಗೂ ವೈಜ್ಞಾನಿಕ ಮನೋಭಾವ ಪ್ರೇರೇಪಿಸಲು ಮುಂದಿನ ಐದು ವರ್ಷದಲ್ಲಿ ಸರಕಾರಿ ಶಾಲೆಗಳಲ್ಲಿ 50,000 ಅಟಲ್ ಟಿಂಕರಿಂಗ್ ಪ್ರಯೋಗಾಲಯಗಳ ಸ್ಥಾಪನೆ.
- ಐಐಟಿ ಪಾಟ್ನಾ ವಿಸ್ತರಣೆ, ಐಐಟಿಯ ಸಾಮರ್ಥ್ಯ ಹೆಚ್ಚಳಕ್ಕೆ ಪ್ರಮುಖ ಆದ್ಯತೆ.
- ಐದು ಐಐಟಿಗಳಲ್ಲಿ ಹೆಚ್ಚುವರಿ ಮೂಲಸೌಕರ್ಯಗಳ ಸೃಷ್ಟಿ.
- ಭಾರತೀಯ ಭಾಷಾ ಪುಸ್ತಕ ಯೋಜನೆ. ಶಾಲೆ ಮತ್ತು ಉನ್ನತ ಶಿಕ್ಷಣಕ್ಕಾಗಿ ಡಿಜಿಟಲ್ ರೂಪದ ಭಾರತೀಯ ಭಾಷಾ ಪುಸ್ತಕಗಳ ಪೂರೈಕೆ.
- ಜಾಗತಿಕವಾಗಿ ಪರಿಣತಿ ಮತ್ತು ಪಾಲುದಾರಿಕೆಯೊಂದಿಗೆ ಕೌಶಲ್ಯಕ್ಕಾಗಿ ಐದು ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಗಳ ಸ್ಥಾಪನೆ.
- ಪ್ರಧಾನ ಮಂತ್ರಿ ಸಂಶೋಧನಾ ಫೆಲೋಶಿಪ್ ಐಐಟಿಗಳು ಮತ್ತು ಐಐಎಸ್‌ಸಿಗಳಲ್ಲಿ ತಾಂತ್ರಿಕ ಸಂಶೋಧನೆಗಾಗಿ ಹತ್ತು ಸಾವಿರ ಫೆಲೋಶಿಪ್‌ಗಳ ಸೌಲಭ್ಯ.
- ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ ಖಾಸಗಿ ವಲಯ ಆಧಾರಿತ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ ಉಪಕ್ರಮ ಕಾರ್ಯಗತಗೊಳಿಸಲು 20,000 ಕೋ.ರೂ. ಅನುದಾನ.

## ರೈಲ್ವೆ



### ಮೇಲ್ ಎಕ್ಸ್‌ಪ್ರೆಸ್

- ಸಾಮಾನ್ಯ, ಸ್ಲೀಪರ್ ಬೋಗಿ ಸಂಖ್ಯೆ ಹೆಚ್ಚಳ ಸಾಮಾನ್ಯ ವರ್ಗದ 2000 ಬೋಗಿಗಳ ಹೆಚ್ಚುವರಿ ಅಳವಡಿಕೆ
- ಅಮೃತ್ ಭಾರತ್ ರೈಲುಗಳಿಗೆ 10 ಸಾವಿರ ಬೋಗಿಗಳ ತಯಾರಿಕೆ
- ರೈಲುಗಾಡಿಗಳ ಪರಸ್ಪರ ಡಿಕ್ಕಿ ತಡೆಗೆ ಕವಚ್ ಸಾಧನ ಅಳವಡಿಕೆ
- ಮುಂಬೈ-ಚೆನ್ನೈ ಮತ್ತು ಚೆನ್ನೈ-ಕೋಲ್ಕತ್ತ ರೈಲುಗಳಿಗೂ ಕವಚ್.
- 9 ಸಾವಿರ ಕಿ.ಮೀ. ಉದ್ದ ರೈಲ್ವೆ ಹಳಿಗೆ ಕಾಂಕ್ರೀಟ್ ಸ್ಲೀಪರ್ ಎಕ್ಸ್ ಜೋಡಣೆ
- ವಂದೇಭಾರತ್ ಎಕ್ಸ್‌ಪ್ರೆಸ್ ರೈಲು 136 ಮಾರ್ಗಗಳಲ್ಲಿ ಸಂಚಾರ
- ಹಮ್‌ಸಫರ್ ಎಕ್ಸ್‌ಪ್ರೆಸ್ 72, ರಾಜಧಾನಿ ಎಕ್ಸ್‌ಪ್ರೆಸ್ 36, ತೇಜಸ್ ರಾಜಧಾನಿ 14, ಶತಾಬ್ದಿ 42, ತೇಜಸ್ ಸಿಟ್ಟಿಂಗ್ 8



## ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಕೊಡುಗೆ

- ಗದಗ - ವಾಡಿ ರೈಲ್ವೆ ಮಾರ್ಗ ಅಭಿವೃದ್ಧಿ : 1,549 ಕೋ.ರೂ.
- ತುಮಕೂರು - ಚಿತ್ರದುರ್ಗ - ದಾವಣಗೆರೆ ಮಾರ್ಗ : 549 ಕೋ.ರೂ.
- ರಾಯದುರ್ಗ-ಕಲ್ಯಾಣ ದುರ್ಗ-ತುಮಕೂರು ಮಾರ್ಗ 434 ಕೋ.ರೂ.
- ಬಾಗಲಕೋಟೆ – ಕುಡುಚಿ ರೈಲ್ವೆ ಮಾರ್ಗ 428 ಕೋ.ರೂ.
- ಬೆಂಗಳೂರು - ವೈಟ್‌ಫೀಲ್ಡ್ - ಕೆಆರ್‌ಪುರಂ ಮಾರ್ಗ 357 ಕೋ.ರೂ.
- ದೌಂಡ್ – ಕಲಬುರಗಿ ಮಾರ್ಗ ವಿದ್ಯುದ್ದೀಕರಣ 84 ಕೋ.ರೂ.
- ರಾಮನಗರ – ಮೈಸೂರು ಮಾರ್ಗ ವಿದ್ಯುದ್ದೀಕರಣ 10 ಕೋ.ರೂ.
- ಬೆಂಗಳೂರಿನ ಐಐಎಸ್ಸಿ ಅಭಿವೃದ್ಧಿಗೆ ಆದ್ಯತೆ 10,000 ಸಾವಿರ ರೈಲುಗಳಿಗೆ ಕವಚ್
- ಕರ್ನಾಟಕದ ಧಾರವಾಡದಲ್ಲಿ ಸ್ಥಾಪನೆಗೊಂಡಿರುವ ಪ್ರತಿಷ್ಠಿತ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಟೆಕ್ನಾಲಜಿ' (ಐಐಟಿ) ಶೈಕ್ಷಣಿಕ ಸಂಸ್ಥೆಯ ಮೂಲ ಸೌಕರ್ಯ ಅಭಿವೃದ್ಧಿ



# ಮಾರ್ಸೈಲ್ ತಟದಲ್ಲೂ ಮೋದಿಗೆ ಸೈನಿಕನೇ ಕಂಡ!

## ಕವಿ ತಿರುವಳ್ಳುವರ್ 'ಆಳುವ ಅರಸನಿಂದ ಗೌರವಿಸಲ್ಪಡುವ ಬಲಿದಾನ ಸಾರ್ಥಕವಾಗುತ್ತದೆ' ಎಂದಿದ್ದರು. ಅದು ಮಾರ್ಸೈಲ್ ಸ್ಮಾರಕಕ್ಕೂ ಸಲ್ಲುವ ಮತ್ತು ಸಮಜಂಸವಾದ ಮಾತು.




ಸಂತೋಷ್ ತಮ್ಮಯ್ಯ
ಸಂಪಾದಕರು, ಅಸೀಮಾ ಕನ್ನಡ ಮಾಸಿಕ


ವಾಜಪೇಯಿ ಸಂಪುಟದಲ್ಲಿ ರಕ್ಷಣಾ ಸಚಿವರಾಗಿದ್ದ ಜಾರ್ಜ್ ಫರ್ನಾಂಡಿಸರನ್ನು ಮುಂದೊಂದು ದಿನ ರಾಜಕಾರಣ ಮರೆತರೂ ಸೈನ್ಯ ಮತ್ತು ಮಾಜಿ ಸೈನಿಕರಂತೂ ಮರೆಯಲಾರರು. ಸೌತ್‌ಬ್ಲಾಕಿಗೆ ಕಾಲಿಟ್ಟ ಕೆಲವೇ ದಿನಗಳಲ್ಲಿ ಅವರೊಂದು ದಿಟ್ಟ ನಿರ್ಧಾರ ತೆಗೆದುಕೊಂಡರು. ಎರಡನೆ ಮಾಹಾಯುದ್ಧದಲ್ಲಿ ಭಾಗವಹಿಸಿದ್ದ ಎಲ್ಲಾ ಯೋಧರಿಗೆ ಮತ್ತು ಯೋಧರ ಪತ್ನಿಯರಿಗೆ ಪಿಂಚಣಿ ನೀಡಲಾಗುವುದೆಂದು ಘೋಷಿಸಿದರು. ಮರುಕ್ಷಣದಲ್ಲೇ ಅವಸರಗಾರ ವಿರೋಧಪಕ್ಷಗಳು, ಸರಕಾರದ್ದು ಅವೈಜ್ಞಾನಿಕ ಕ್ರಮ, ಅದು ದೀರ್ಘ ಪ್ರಕ್ರಿಯೆ ಎಂದು ಟೀಕಿಸತೊಡಗಿದವು. ಆದರೆ ಫರ್ನಾಂಡಿಸರಿಗೆ ಎಷ್ಟೊಂದು ನಿಖರತೆ ಇತ್ತೆಂದರೆ, ಯುದ್ಧದಲ್ಲಿ ಪಾಲ್ಗೊಂಡ ಯಾವುದಾದರೊಂದು ಕುರುಹನ್ನು ನೀಡಿದರೂ ಸಾಕೆಂದು ಆದೇಶಿಸಿದರು. ದೇಶಾದ್ಯಂತ ಹರಡಿದ್ದ ರಾಯಲ್ ಬ್ರಿಟಿಷ್ ಮತ್ತು ಐಎನ್‌ಎ ಯೋಧರು ಮನೆಗಳಲ್ಲಿ ವಾರ್ ಮೆಡಲುಗಳನ್ನು ಹುಡುಕತೊಡಗಿದರು. ಸುಲಭವಾಗಿ ಪಿಂಚಣಿದಾರರಾದರು.

ಇದು ಕೇವಲ ಪಿಂಚಣಿಯ ಕತೆಯಲ್ಲ. ಇಂಥ ಆಲೋಚನೆ ಸ್ವಾತಂತ್ರ್ಯಾನಂತರದ ಯಾವ ಸರಕಾರಗಳಿಗೂ ಯಾಕೆ ಬರಲಿಲ್ಲ ಎನ್ನುವುದು ಪ್ರಶ್ನೆ. ಪ್ರತೀ ಬಾರಿ ಬಿಜೆಪಿ ಸರಕಾರ ಬಂದಾಗ ಮಾತ್ರ ಸೈನಿಕ ನೆಮ್ಮದಿಯಿಂದಿರುತ್ತಾನೆ ಎನ್ನುವುದು ಕೂಡ ಚಿಂತಿಸಬೇಕಾದ ಸಂಗತಿ. ವೀರಗತಿ ಪಡೆದ ಸೈನಿಕರ ಮೃತದೇಹಗಳನ್ನು ಮನೆಗೆ ಮುಟ್ಟಿಸುವುದರಿಂದ ಹಿಡಿದು ಮೃತದೇಹಗಳಿಗೆ ಸ್ವತಃ ಪ್ರಧಾನಮಂತ್ರಿಯವರೇ ನಮನ ಸಲ್ಲಿಸುವ ಪರಿಪಾಟ ಇತರ ದೇಶಗಳಲ್ಲಿ ಸಾಮಾನ್ಯವಾಗಿರಬಹುದು. ಆದರೆ ಭಾರತದಲ್ಲಿ ಅದು ಸಾಧ್ಯವಾಗುವುದು ಬಿಜೆಪಿ ಸರಕಾರಗಳು ಅಧಿಕಾರದಲ್ಲಿದ್ದಾಗ ಮಾತ್ರ. ಅದರಲ್ಲೂ ಮೋದಿ ಸರಕಾರ ಸೈನಿಕರ ಬಗೆಗೆ ತಳೆದಿರುವ ನಿರ್ಧಾರಗಳು ಇನ್ನೂ ಹೆಚ್ಚಿನದು.

ಮೋದಿಯವರು ಕೈಗೊಳ್ಳುವ ಬಹುತೇಕ ವಿದೇಶಿ ಪ್ರವಾಸಗಳಲ್ಲಿ ಸೈನಿಕ ಸ್ಮಾರಕ ಅಥವಾ ಯುದ್ಧ ಸ್ಮಾರಕಗಳಿಗೆ ನಮನ ಸಲ್ಲಿಸುವ ಕಾರ್ಯಕ್ರಮ ಇದ್ದೇ ಇರುತ್ತವೆ. ಎರಡು ದಿನಗಳ ಹಿಂದೆ ಫ್ರಾನ್ಸಿಗೆ ಭೇಟಿ ನೀಡಿದ ಮೋದಿ ಅಲ್ಲಿನ ಮಾರ್ಸೈಲ್ ಪಟ್ಟಣದ ಸೈನಿಕ ಸ್ಮಾರಕವೊಂದಕ್ಕೆ ಫ್ರಾನ್ಸ್ ಅಧ್ಯಕ್ಷರೊಡಗೂಡಿ ನಮನ ಸಲ್ಲಿಸಿದ್ದೀಗ ಫ್ರಾನ್ಸ್‌ನಲ್ಲಿ ಬಹುಚರ್ಚೆಯ ಸಂಗತಿ. ವಾಜಪೇಯಿ ಸರಕಾರ ಎರಡನೆ ಮಹಾಯುದ್ಧದ ಯೋಧರಿಗೆ ಗೌರವ ನೀಡಿದರೆ ಮೋದಿ ಇನ್ನೂ ಒಂದು ಹೆಜ್ಜೆ ಮುನ್ನಡೆದು ಮೊದಲ ಮಹಾಯುದ್ಧದ ಯೋಧರನ್ನು ನೆನಪಿಸಿಕೊಂಡರು! ಆ ಮೂಲಕ ಉಭಯ ದೇಶಗಳ ರಾಜತಾಂತ್ರಿಕ ಸಂಬಂಧಗಳನ್ನು ಸುಧಾರಿಸಲೂ ಸಂದರ್ಭವನ್ನು ಬಳಸಿಕೊಂಡರು. ಹೊರನೋಟಕ್ಕೆ ಅದು ಕೇವಲ ಸರ್ಕಾರಿ ಕಾರ್ಯಕ್ರಮ ಆಗಿರಬಹುದು. ಆದರೆ ಮೋದಿ ಅದನ್ನು ಫ್ರಾನ್ಸಿನ ಜನರ ಭಾವನೆಗಳನ್ನು ಮೀಟಲು ಬಳಸಿಕೊಂಡರು. ಫ್ರಾನ್ಸಿನ ಪತ್ರಿಕೆಗಳು ಅದನ್ನು ವಿಶೇಷವಾಗಿ ವರದಿ ಮಾಡಿದವು. 2015ರಲ್ಲಿ ಮೋದಿ ಫ್ರಾನ್ಸ್ ಪ್ರವಾಸ ಕೈಗೊಂಡಿದ್ದಾಗಲೂ ಕೆಲವು ಭಾರತೀಯ ಸೈನಿಕ ಸ್ಮಾರಕಗಳಿಗೆ ನಮನ ಸಲ್ಲಿಸಿದ್ದರು. ಆದರೆ ಮಾರ್ಸೈಲ್ ಫ್ರಾನ್ಸಿಗೆ ಐತಿಹಾಸಿಕವಾಗಿ ಅತ್ಯಂತ ಮಹತ್ತ್ವದ್ದು.

ಮಾರ್ಸೈಲ್ ಫ್ರಾನ್ಸಿನ ಪ್ರಮುಖ ಬಂದರು ಪಟ್ಟಣ. ಮೆಡಿಟರೇನಿಯನ್ ಸಮುದ್ರದಂಚಿನ ಮಾರ್ಸೈಲನ್ನು ನೆರೆ ದೇಶಗಳ ಆಕ್ರಮಣದ ಹೆಬ್ಬಾಗಿಲು ಎಂದೇ ಪರಿಗಣಿಸಲಾಗುತ್ತಿತ್ತು. ಹಳೆಯ ಲೂಯಿ ದೊರೆಗಳ ಕಾಲದಿಂದಲೂ ಮಾರ್ಸೈಲನ್ನು ಭದ್ರವಾಗಿಟ್ಟುಕೊಳ್ಳುವುದು ಫ್ರಾನ್ಸಿಗೆ ದುಸ್ತರವಾಗಿತ್ತು. ಮಾರ್ಸೈಲ್‌ನ ಬಾಗಿಲು ಭದ್ರವಾಗಿದ್ದರೆ ವರ್ಸೈಲ್ ಅರಮನೆ ಸುರಕ್ಷಿತವಾಗಿರುತ್ತದೆ ಎನ್ನುವ ಮಾತು ಪ್ರಚಲಿತವಾಗಿತ್ತು. ಆದರೆ ಫ್ರಾನ್ಸಿನ ದೌರ್ಭಾಗ್ಯವೆಂದರೆ ಇತಿಹಾಸದಲ್ಲೆಂದೂ ಫ್ರಾನ್ಸ್ ಯೂರೋಪಿನ ಇತರ ದೇಶಗಳಂತೆ ನೌಕಾ ಪಡೆಯಲ್ಲಿ ಶ್ರೇಷ್ಠವಾಗಲೇ ಇಲ್ಲ. ಅದೊಂದು ಕೊರತೆಯಿಂದ ಫ್ರಾನ್ಸ್ ಪದೇ ಪದೇ ಆಕ್ರಮಣಕ್ಕೆ ಒಳಗಾಗುತ್ತಿತ್ತು ಮತ್ತು ಎಲ್ಲಾ ಆಕ್ರಮಣಗಳು ದಕ್ಷಿಣದಿಂದಲೇ ಆರಂಭವಾಗುತ್ತಿತ್ತು. ರೋಮನ್ನರಂತೂ ಬಹಳ ಸುಲಭವಾಗಿ ನುಗ್ಗುತ್ತಿದ್ದರು. ಪ್ರಮುಖ ವ್ಯಾಪಾರಿ ಕೇಂದ್ರ ಮತ್ತು ಮಾರ್ಸೈಲ್ ಮೂಲಕ ಸುಲಭವಾಗಿ ದಕ್ಷಿಣ ಯೂರೋಪು, ಮಧ್ಯಪ್ರಾಚ್ಯ ಮತ್ತು ಏಷ್ಯಾವನ್ನು ಸಂಪರ್ಕಿಸುವ ಆಯಕಟ್ಟಿನ ಜಾಗವೂ ಆಗಿದ್ದರಿಂದ ಎಲ್ಲರಿಗೂ ಅದರ ಮೇಲೊಂದು ಕಣ್ಣಿತ್ತು. ಇವೆಲ್ಲದರ ಜೊತೆಗೆ ಮಾರ್ಸೈಲ್ ಅಂದಿನ ಕಾಲಕ್ಕೆ ಲಂಡನ್ ಬಿಟ್ಟರೆ ಅತಿ ಹೆಚ್ಚು ಯಹೂದಿಗಳು ನೆಲೆಸಿದ್ದ ಯೂರೋಪಿನ ಎರಡನೆಯ ಪಟ್ಟಣ ಎಂಬ ಪಟ್ಟವಿತ್ತು.

ಅದಾಗಲೇ ಜರ್ಮನ್ನರಲ್ಲಿ ಮೊಳಕೆಯೊಡೆಯುತ್ತಿದ್ದ ಯಹೂದಿ ವಿರೋಧಿ ಧೋರಣೆ ಮಾರ್ಸೈಲಿಗೆ ಆತಂಕವನ್ನು ತಂದೊಡ್ಡಿತ್ತು. ಜರ್ಮನಿ, ಆಸ್ಟ್ರಿಯಾ ಮತ್ತು ಹಂಗೇರಿಗಳು ದಿನೇ ದಿನೇ ಪ್ರಬಲವಾಗುತ್ತಿದ್ದವು. ಇನ್ನೊಂದೆಡೆ ವಿಶಾಲ ರಷ್ಯಾ ಆಂತರಿಕ ಕಲಹದಿಂದ ಶಿಥಿಲಾವಸ್ಥೆಗೆ ತಲುಪಿತ್ತು. ನೋಡನೋಡುತ್ತಲೇ ಜರ್ಮನಿಯು ರಷ್ಯಾವನ್ನು ಸೋಲಿಸಿತ್ತು. ಜರ್ಮನರೊಡಗೂಡಿದ ರಷ್ಯಾ ಬಂಡುಕೋರರು ಸಮುದ್ರ ಮಾರ್ಗದ ಮೂಲಕ ಮಾರ್ಸೈಲಿಗೆ ನುಗ್ಗಿದರು. ಆ ಹೊತ್ತಿಗಾಗಲೇ ಜರ್ಮನ್ ಸೈನ್ಯದ ಬಳಿ ಅತ್ಯಾಧುನಿಕ ಬಂಧೂಕುಗಳು, ಸರ್ಚ್‌ಲೈಟ್‌ಗಳು ಮತ್ತು ಹ್ಯಾಂಡ್ ಗ್ರಾನೇಡುಗಳಿದ್ದವು. ಇದರ ಮುನ್ಸೂಚನೆಯಿದ್ದ ಮಿತ್ರಪಡೆಗಳು ಭಾರತೀಯ ಸೈನಿಕರನ್ನು ಮಾರ್ಸೈಲಿಗೆ ಕರೆಸಿಕೊಂಡಿತ್ತು. 1914ರ ಅಕ್ಟೋಬರಿನಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್ ಜೇಮ್ಸ್ ವಿಲ್‌ಕಾಕ್ಸ್‌ನ ನೇತೃತ್ವದಲ್ಲಿ ಕರಾಚಿ ಮತ್ತು ಮುಂಬೈಯಿಂದ ಸೈನಿಕರನ್ನು ಹೊತ್ತ ಹಡಗುಗಳು ಮಾರ್ಸೈಲ್ ತಲುಪಿದವು. ಕೆಲವೇ ದಿನಗಳಲ್ಲಿ ಮಾರ್ಸೈಲ್ ಶತ್ರುಗಳಿಂದ ಮುಕ್ತವಾಯಿತು. ಫ್ರಾನ್ಸ್ ಉಳಿಯಿತು. 1918ರವರೆಗೂ ಭಾರತೀಯ ಪಡೆಗಳು ಫ್ರಾನ್ಸ್ ಮತ್ತು ಯೂರೋಪಿನ ಅನ್ಯಾನ್ಯ ಭಾಗಗಳಲ್ಲಿ ಕಾದಾಡುತ್ತಲೇ ಇದ್ದವು.

ಇಂದು ಮಾರ್ಸೈಲ್ ಫ್ರಾನ್ಸಿನ ಅತ್ಯಂತ ಸುಂದರ ಪಟ್ಟಣ. ಪ್ರಮುಖ ವ್ಯಾಪಾರಿ ಕೇಂದ್ರ. ಮಾರ್ಸೈಲ್‌ನ ಕೃಷಿ ಕೂಡ ಶ್ರೀಮಂತ. ಪ್ಯಾರಿಸಿನಂತೆ ಅದು ಕೂಡ ಜನನಿಬಿಡ ಪ್ರವಾಸಿ ಕೇಂದ್ರ. ಇಂದು ಮಾರ್ಸೈಲ್ ಹೀಗಿರುವುದಕ್ಕೆ ಅಂದು ಭಾರತೀಯ ಸೈನಿಕರು ಅದನ್ನು ರಕ್ಷಣೆ ಮಾಡಿದ್ದೇ ಕಾರಣ. ತನ್ನದಲ್ಲದ ದೇಶ, ವ್ಯತಿರಿಕ್ತ ವಾತಾವರಣ, ಯಾರ ವಿರುದ್ಧ ಯುದ್ಧ ಮಾಡಬೇಕೆಂದೇ ತಿಳಿಯದ ಪರಿಸ್ಥಿತಿಯಲ್ಲಿ ಭಾರತೀಯ ಸೈನಿಕರು ಪರಾಕ್ರಮವನ್ನು ಮೆರೆದ ಕಾರಣಕ್ಕೆ ಅಂದು ಫ್ರಾನ್ಸ್ ಉಳಿಯಿತು. ಭಾರತೀಯ ಸೈನ್ಯದ ಬಲೂಚ್-ರಜಪುತಾನ-ಗೋರ್ಖಾ-ಸಿಕ್ಖ್ ರೆಜಿಮೆಂಟ್‌ಗಳು, 34ನೇ ಪೂನಾ ಹಾರ್ಸ್, ಸಿಯಾಲ್‌ಕೋಟ್ ಕ್ಯಾವಲ್ರಿ ಬ್ರಿಗೇಡ್, ಮೀರಟ್ ಕ್ಯಾವಲ್ರೀ ಬ್ರಿಗೇಡ್, 36 ನೇ ಜೇಕಬ್ಸ್ ಹಾರ್ಸ್, 29 ನೇ ಲ್ಯಾನ್ಸರ್, ಸಿಕಂದರಾಬಾದ್ ಕ್ಯಾವಲ್ರಿ ಬ್ರಿಗೇಡ್, ಅಂಬಾಲಾ ಕ್ಯಾವಲ್ರೀ

ಬ್ರಿಗೇಡ್, 1ನೇ ಇಂಡಿಯನ್ ಕ್ಯಾವಲ್ರಿ, 9ನೇ ಹಡ್ಸನ್ ಲ್ಯಾನ್ಸರ್, 61ನೇ ಕೇಮಲ್ ಕಾರ್ಪ್ಸ್, 20ನೇ ಡೆಕ್ಕನ್ ಹಾರ್ಸ್, 7ನೇ ಹರ್ಯಾಣ ಲ್ಯಾನ್ಸರ್ಸ್, ಜೋಧ್‌ಪುರ್ ಲ್ಯಾನ್ಸರ್ಸ್, ಫಿರೋಜ್‌ಪುರ ಬ್ರಿಗೇಡ್, ಜಾಟ್, ಘರ್ವಾಲ್ ಮತ್ತು ಪಠಾಣ್ ಪಡೆಗಳು ದೀರ್ಘಕಾಲ ಫ್ರಾನ್ಸಿನಲ್ಲಿ ಕೇವಲ 11 ರೂಪಾಯಿ ಪಗಾರಕ್ಕೆ ದುಡಿಯದಿದ್ದಿದ್ದರೆ ಇಂದು ಫ್ರಾನ್ಸ್ ಹೀಗಿರುತ್ತಿರಲ್ಲ. ಏಕೆಂದರೆ ಭಾರತೀಯ ಪಡೆಗಳಿಲ್ಲದಿರುತ್ತಿದ್ದರೆ ಯೂರೋಪಿನ ನಕಾಶೆಯೇ ಬದಲಾಗಿರುತ್ತಿತ್ತು.

ಭಾರತೀಯ ಸೈನಿಕರು ಫ್ರಾನ್ಸಿನಲ್ಲಿ ಹೋರಾಟ ಮಾಡಿದ್ದೊಂದು ಇತಿಹಾಸವಾದರೆ ಮುಂದೆ ಜಗತ್ತು ಅವರನ್ನು ಮರೆತಿದ್ದು ಮತ್ತೊಂದು ದುರಂತ ಇತಿಹಾಸ. ಪ್ರಥಮ ಮಹಾಯುದ್ಧದ ಅನಂತರ ಬದಲಾದ ಜಾಗತಿಕ ವಾತಾವರಣ, ಪಶ್ಚಿಮದ ಕೃತಘ್ನ ಮಾನಸಿಕತೆ, ಬದಲಾದ ಸೈನ್ಯದ ಸ್ವರೂಪಗಳ ಜೊತೆಗೆ ಐರೋಪ್ಯರ ವಸಾಹತುಗಳಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಹೋರಾಟಗಳ ಪರಿಣಾಮವಾಗಿ ತನ್ನನ್ನು ಕಾಪಾಡಿದವರ ನೆನಪು ಯೂರೋಪಿಗೆ ಮಾಸಿಹೋಯಿತು. ಮಾರ್ಸೈಲ್‌ನ ಸ್ವರೂಪ ಕೂಡ ಬದಲಾಗತೊಡಗಿತು.

ಒಂದು ದಿನ ಫ್ರಾನ್ಸ್ ಸೇನೆಯಲ್ಲಿ ಜನರಲ್ ಆಗಿದ್ದ ಫೀಲ್ಡ್ ಮಾರ್ಷಲ್ ಸರ್ ವಿಲಿಯಂ ಬರ್ಡ್‌ವುಡ್ ಅವರಿಗೆ ಮಾರ್ಸೈಲ್‌ನಿಂದ 6 ಕಿ.ಮೀ ದೂರದ ಮಜಾರ್ಗೆಸ್ ಎಂಬ ಹಳ್ಳಿಯಲ್ಲಿ ಕೆಲವು ಸೈನಿಕರ ಸಮಾಧಿಯ ಕುರುಹುಗಳಿವೆಯೆಂಬ ಎಂಬ ಸುದ್ದಿ ಗ್ರಾಮಸ್ಥರಿಂದ ತಿಳಿಯಿತು. ಫ್ರೆಂಚ್ ಸೇನೆ ಪರಿಶೀಲಿಸಿದಾಗ ಅವೆಲ್ಲವೂ ಭಾರತೀಯ ಸೈನಿಕರದ್ದೆಂಬುದು ತಿಳಿದುಬಂತು. ಅಂದೇ ಆತ ಅದನ್ನು ಸ್ಮಾರಕವೆಂದು ಘೋಷಣೆ ಮಾಡಿದ. ಇವೆಲ್ಲವೂ ನಡೆಯುತ್ತಿದ್ದಾಗಲೇ ಎರಡನೆಯ ಮಹಾಯುದ್ಧ ಎದುರಾಯಿತು. ಆಗಲೂ ಬ್ರಿಟಿಷರಿಗೆ ಭಾರತೀಯ ಯೋಧರ ನೆನಪಾಯಿತು. ಎರಡನೆಯ ಮಹಾಯುದ್ಧದ ಅನಂತರ ಜಗತ್ತಿನ ಭೂಪಟ ಹೊಸದಾಗಿ ನಿರ್ಮಾಣವಾಗಿ ಭಾರತೀಯ ಸೈನಿಕರ ಕೊಡುಗೆಗಳನ್ನು ಕೆಲವು ದೇಶಗಳು ಕೃತಜ್ಞತಾಪೂರ್ವಕವಾಗಿ ನೆನಪಿಟ್ಟುಕೊಂಡವು. ಅಲ್ಲಿಗೆ ಮೊದಲ ಮಹಾಯುದ್ಧದ ಸೈನಿಕರು ಕಾಲಗರ್ಭಕ್ಕೆ ಸಂದುಹೋದರು. ತಮ್ಮದಲ್ಲದ ನಾಡಿಗೆ ಬಲಿದಾನಿಗಳಾದ ಆ ಯೋಧರು ಅನಾಮಿಕರಾಗುಳಿದಿದ್ದಕ್ಕೆ ಇಷ್ಟು ಮಾತ್ರ ಕಾರಣವೇ ಎಂದರೆ ಅದೂ ಅಲ್ಲ.

1914ರಲ್ಲಿ ಭಾರತೀಯ ತುಕಡಿಗಳ ನೇತೃತ್ವವನ್ನು ವಹಿಸಿದ್ದ ಸರ್ ಜೇಮ್ಸ್ ವಿಲ್‌ಕಾಕ್ಸ್ ಯುದ್ಧಾನಂತರ ಸರಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದ. ಅದರಲ್ಲಿ ಆತ ಫ್ರಾನ್ಸ್ ಮತ್ತು ಯೂರೋಪಿನ ಇತರ ಭಾಗಗಳಲ್ಲಿ ದೀರ್ಘಾವಧಿಯವರೆಗೆ ಹೋರಾಟ ಮಾಡಿದವರೆಲ್ಲರೂ ಬ್ರಿಟಿಷ್ ಸೈನಿಕರು ಎಂದು ಬಿಳಿಯ ಪ್ರಾಬಲ್ಯವನ್ನು ಇತಿಹಾಸದ ಮೇಲೆ ಪ್ರತಿಷ್ಠಾಪಿಸಿದ. ಯುದ್ಧಾನಂತರ ಬ್ರಿಟಿಷರಿಗೆ ಭಾರತೀಯ ಸೈನಿಕರನ್ನು ನೆನಪು ಮಾಡಿಕೊಳ್ಳುವಷ್ಟು ವಿಶಾಲ ಗುಣವಿರಲಿಲ್ಲ. ಮಿತ್ರಪಡೆಗಳ ದೇಶಗಳಿಗೆ ಭಾರತೀಯ ಸೈನಿಕರ ಪಾತ್ರದ ಬಗ್ಗೆ ತಿಳಿದಿತ್ತಾದರೂ ಬ್ರಿಟಿಷರ ಮಾತುಗಳೇ ಅಂತಿಮವಾಯಿತು. ಜೇಮ್ಸ್ ವಿಲ್‌ಕಾಕ್ಸನ ವರದಿಯನ್ನು ಅಂದು ಯಾವ ಪತ್ರಿಕೆಗಳೂ ಪ್ರಶ್ನಿಸಲಿಲ್ಲ. ವಿಚಿತ್ರವೆಂದರೆ ಬ್ರಿಟಿಷರ ಬಳಿ ಅಂದು ಇಡೀ ಯೂರೋಪಿನಾದ್ಯಂತ ಹೋರಾಟ ನಡೆಸುವಷ್ಟು ತುಕಡಿಗಳಿರಲಿಲ್ಲ ಎನ್ನುವ ಸತ್ಯ ಎಲ್ಲರಿಗೂ ತಿಳಿದಿತ್ತು.

ಅದಾದ ಎಷ್ಟೋ ವರ್ಷಗಳ ಅನಂತರ ಬಿಬಿಸಿಯ ಮಾರ್ಕ್ ಟುಲಿ, ಆವೊದಲ ಮಹಾಯುದ್ಧದಲ್ಲಿ ಯೂರೋಪಿನ ಸಮರಾಂಗಣಗಳಲ್ಲಿ ಭಾಗವಹಿಸಿದ ಭಾರತೀಯ ಯೋಧರ ಸಂಖ್ಯೆ 1 ಲಕ್ಷಕ್ಕೂ ಹೆಚ್ಚು. ಅದರಲ್ಲಿ ವೀರಮರಣವನ್ನಪ್ಪಿದವರು 60000 ಮತ್ತು ವೀರತೆಯ ಪದಕಗಳನ್ನು ಪಡೆದವರು 9200 ಮಂದಿಱ ಎಂದು ಪ್ರಸಾರ ಮಾಡಿದ. ನಂತರ ಕಾಮನ್‌ವೆಲ್ತ್ ಪ್ರಬಲವಾದಾಗ ಅನೇಕ ದೇಶಗಳಲ್ಲಿ ಮೊದಲ ಮತ್ತು ಎರಡನೆಯ ಮಹಾಯುದ್ಧದ ಪ್ರಮುಖ ಘಟ್ಟಗಳನ್ನು ಹಾಗು ಸಮಾಧಿ-ಸ್ಮಾರಕಗಳನ್ನು ಹುಡುಕುವ ಕಾರ್ಯ ಆರಂಭವಾಯಿತು. ಅದರ ಫಲವಾಗಿ ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್, ಸ್ಪೇನ್, ಫ್ರಾನ್ಸ್‌ಗಳಲ್ಲಿ ಭಾರತೀಯ ಸೈನಿಕ ಸ್ಮಾರಕಗಳು ನಿರ್ಮಾಣಗೊಂಡವು. ಮಾರ್ಸೈಲ್‌ನ ಸ್ಮಾರಕ ಅವುಗಳಲ್ಲೊಂದು.

ಬ್ರಿಟಿಷರ ಸ್ವಾರ್ಥಕ್ಕಾಗಿ ಪ್ರಾಣ ಅರ್ಪಿಸಿದ, ಅವರಿಂದಲೇ ನಿರ್ಲಕ್ಷಕ್ಕೊಳಗಾದ ಸ್ಮಾರಕಗಳನ್ನು ಸ್ವತಂತ್ರ ಭಾರತವಾದರೂ ಗುರುತಿಸಿ ಗೌರವಿಸಬೇಕಿತ್ತು. ಆ ಕಾರ್ಯ ಕೂಡ ನಡೆಯಲಿಲ್ಲ. ಆದರೆ ಬ್ರಿಟಿಷ್ ಜನರಲ್ ಜೇಮ್ಸ್ ವಿಲ್‌ಕಾಕ್ಸ್‌ನ ಧೋರಣೆ ಏನಿತ್ತೋ ಅಂಥದ್ದೇ ಧೋರಣೆ ಭಾರತದ ಕಾಂಗ್ರೆಸ್ ಸರಕಾರಗಳಿಗೂ ಆವರಿಸಿದ್ದವು. ಆದರೆ ಮೋದಿಯವರಿಗೆ ಮೊದಲ ಮಹಾಯುದ್ಧದಿಂದಲೂ ಭಾರತ ನೆನಪಾಗುತ್ತಿತ್ತು! ಅದನ್ನು ಅವರು ತನ್ನ ದೇಶಕ್ಕೆ ನೆನಪು ಮಾಡಿಸಿದ್ದಷ್ಟೇ ಅಲ್ಲದೆ, ಫ್ರಾನ್ಸಿನ ಜನರಿಗೂ ಸ್ಮಾರಕದ ಬಗ್ಗೆ ಗೌರವ ಇಮ್ಮಡಿಸುವಂತೆ ಮಾಡಿದರು. ಒಂದು ಸೈನಿಕ ಸ್ಮಾರಕವನ್ನು ಎರಡು ದೇಶಗಳ ಸಂಬಂಧವೃದ್ಧಿಗೆ ಬಳಸಿಕೊಂಡರು. ಸತ್ಯಕ್ಕಾಗಿ, ಧರ್ಮಕ್ಕಾಗಿ ನಡೆದ ಭಾರತಯಾತ್ರೆಯನ್ನು ಭಾಷಣದಲ್ಲಿ ಹೇಳದೆ ಕೃತಿಯ ಮೂಲಕ ತೋರಿಸಿದರು. ಇವೆಲ್ಲವೂ ದೇಶವನ್ನು ಆರಾಧನಾಭಾವದಿಂದ ನೋಡುವವರಿಗೆ ಮಾತ್ರ ಸಾಧ್ಯವಾಗುವ ಸಂಗತಿಗಳು. ಆದ್ದರಿಂದ ಇದರಲ್ಲಿ ಸೋಜಿಗವೇನೂ ಇಲ್ಲ. ಕವಿ ತಿರುವಳ್ಳುವರ್ ಇದನ್ನೇ, 'ಆಳುವ ಅರಸನಿಂದ ಗೌರವಿಸಲ್ಪಡುವ ಬಲಿದಾನ ಸಾರ್ಥಕವಾಗುತ್ತದೆ' ಎಂದಿದ್ದರು. ಅದು ಮಾರ್ಸೈಲ್ ಸ್ಮಾರಕಕ್ಕೂ ಸಲ್ಲುವ ಮತ್ತು ಸಮಂಜಸವಾದ ಮಾತು.

**ಗ್ರಂಥಋಣ:** Indian Voices of The Great War: Soldiers' Letters, 1914-18 was published by Penguin Books Limited in 2014. This hardcover also includes a foreword by Mark Tully.

# ದೆಹಲಿಯಲ್ಲಿ ಅರಳಿದ ಕಮಲ

ಬಿಜೆಪಿ - 48
ಎಎಪಿ - 22
ಕಾಂಗ್ರೆಸ್-00



ರಾಷ್ಟ್ರ ರಾಜಧಾನಿ ದಿಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ. ಸತತ 10 ವರ್ಷ ಆಡಳಿತ ನಡೆಸಿದ ಆಮ್ ಆದ್ಮಿ ಪಕ್ಷ ಭ್ರಷ್ಟಾಚಾರ ಮತ್ತು ಆಡಳಿತ ವಿರೋಧಿ ಅಲೆಯಲ್ಲಿ ಕೊಚ್ಚಿಹೋಗಿದೆ. ಅತ್ಯಂತ ಹಳೆಯ ಪಕ್ಷ ಕಾಂಗ್ರೆಸ್ ಸತತ ಮೂರನೇ ಬಾರಿಗೂ ಶೂನ್ಯ ಸ್ಥಿತಿಯಲ್ಲಿದೆ. ದಿಲ್ಲಿ ವಿಧಾನಸಭೆಯ 70 ಸ್ಥಾನಗಳ ಪೈಕಿ ಬಿಜೆಪಿ 48 ಸ್ಥಾನಗಳಲ್ಲಿ ಗೆದ್ದು ಬೀಗಿದ್ದು, ಎಎಪಿ 22 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಇನ್ನು ಕಾಂಗ್ರೆಸ್ ಖಾತೆ ತೆರೆಯುವಲ್ಲಿ ವಿಫಲವಾಗಿದೆ. ಇದರೊಂದಿಗೆ ಸತತ 26 ವರ್ಷಗಳ ಬಳಿಕ ಬಿಜೆಪಿಗೆ ದಿಲ್ಲಿ ಆಡಳಿತದ ಚುಕ್ಕಾಣಿ ಲಭಿಸಿದೆ. ಆ ಮೂಲಕ ಇದೇ ಮೊದಲ ಬಾರಿಗೆ ಬಿಜೆಪಿಗೆ ಕೇಂದ್ರ ಮತ್ತು ದಿಲ್ಲಿಯಲ್ಲಿ ಒಟ್ಟಿಗೆ ಅಧಿಕಾರ ನಡೆಸುವ ಅವಕಾಶ ಸಿಕ್ಕಿದೆ.



2025ರ ದಿಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಅಭಿವೃದ್ಧಿ ಹಾಗೂ ಉತ್ತಮ ಆಡಳಿತ ಗೆದ್ದಿದೆ. ಬಿಜೆಪಿಗೆ ಐತಿಹಾಸಿಕ ಗೆಲುವು ನೀಡಿದ ನನ್ನ ಎಲ್ಲಾ ಸಹೋದರ ಸಹೋದರಿಯರಿಗೆ ನನ್ನ ಅಭಿನಂದನೆಗಳು. ನಿಮ್ಮೆಲ್ಲರಿಗೂ ನನ್ನ ಹೃದಯಾಂತರಾಳದಿಂದ ಆಭಾರಿಯಾಗಿದ್ದೇನೆ. ದಿಲ್ಲಿಯ ಸರ್ವಾಂಗೀಣ ಅಭಿವೃದ್ಧಿ ಖಚಿತಪಡಿಸಿಕೊಳ್ಳಲು ಮತ್ತು ಜನರ ಜೀವನವನ್ನು ಉತ್ತಮಗೊಳಿಸಲು ನಾವು ಯಾವುದೇ ಅವಕಾಶವನ್ನು ಬಿಡುವುದಿಲ್ಲ ಎಂದು ನಾವು ಭರವಸೆ ನೀಡುತ್ತೇವೆ, ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವಲ್ಲಿ ದಿಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಖಚಿತಪಡಿಸುತ್ತದೆ'. ಹಗಲು-ಇರುಳು ಎನ್ನದೇ ಪಕ್ಷದ ಗೆಲುವಿಗೆ ಶ್ರಮಿಸಿದ ಬಿಜೆಪಿಯ ಎಲ್ಲ ಕಾರ್ಯಕರ್ತರ ಬಗ್ಗೆ ನನಗೆ ಹೆಮ್ಮೆಯಿದೆ. ಇನ್ನು ಮುಂದೆ ದಿಲ್ಲಿಯಲ್ಲಿ ನಾವು ಉತ್ತಮ ರೀತಿಯಲ್ಲಿ ಜನಸೇವೆ ಮಾಡುತ್ತೇವೆ.

**- ಪ್ರಧಾನಿ ಶ್ರೀ ನರೇಂದ್ರ ಮೋದಿ**

# ದೆಹಲಿಯ ನೂತನ ಮುಖ್ಯಮಂತ್ರಿ ಶ್ರೀಮತಿ ರೇಖಾ ಗುಪ್ತಾ



ದಿಲ್ಲಿಯ ಶಾಲಿಮಾರ್ ಬಾಗ್ ಕ್ಷೇತ್ರದಿಂದ ಆಮ್ ಆದಮಿ ಪಾರ್ಟಿಯ ವಂದನಾ ಕುಮಾರಿ ಅವರನ್ನು 29,595 ಮತಗಳ ಅಂತರದಿಂದ ಸೋಲಿಸಿ ಮೊದಲ ಬಾರಿ ದಿಲ್ಲಿ ವಿಧಾನಸಭೆಗೆ ಶಾಸಕಿಯಾಗಿ ಆಯ್ಕೆಯಾಗಿರುವ ರೇಖಾ ಗುಪ್ತಾ ಅವರು ದೆಹಲಿಯಲ್ಲಿ ಬಿಜೆಪಿ ಸರಕಾರದ ನೇತೃತ್ವ ವಹಿಸಲಿದ್ದಾರೆ.

1992ರಲ್ಲಿ ದಿಲ್ಲಿ ವಿಶ್ವವಿದ್ಯಾಲಯದ ದೌಲತ್‌ರಾಮ್ ಕಾಲೇಜಿನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೂಲಕ ಸಾರ್ವಜನಿಕ ಬದುಕಿಗೆ ಕಾಲಿಟ್ಟ ರೇಖಾ ಗುಪ್ತಾ ರವರು, ದಿಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷೆಯಾಗಿ ಆಯ್ಕೆಯಾಗಿ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಿದ್ದರು. 2007ರಲ್ಲಿ ಉತ್ತರ ಪ್ರೀತಮ್ ಪುರದಿಂದ ಕೌನ್ಸಿಲರ್ ಆಗಿ ಆಯ್ಕೆಯಾಗಿ ಸ್ಥಳೀಯ ಸಮಸ್ಯೆಗಳ ಪರಿಹಾರ, ಗ್ರಂಥಾಲಯಗಳ ನಿರ್ಮಾಣ, ಉದ್ಯಾನಗಳು, ಈಜು ಕೊಳಗಳ ನಿರ್ಮಾಣ ಮೂಲಕ ಗಮನ ಸೆಳೆದಿದ್ದರು.

ಆರ್ಥಿಕವಾಗಿ ದುರ್ಬಲರಾಗಿದ್ದ ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೆ ನೆರವಾಗಲು 'ಸುಮೇಧಾ ಯೋಜನಾ' ಆರಂಭಿಸಿ ಬಡ ಹೆಣ್ಣುಮಕ್ಕಳಿಗೆ ನೆರವಾಗಿದ್ದರು. ಮಹಿಳಾ ಕಲ್ಯಾಣ ಮತ್ತು ಮಕ್ಕಳ ಅಭಿವೃದ್ಧಿ ಸಮಿತಿ ಅಧ್ಯಕ್ಷೆಯಾಗಿಯೂ ಮಹಿಳಾ ಸಬಲೀಕರಣಕ್ಕೆ ಕೆಲಸ ಮಾಡಿದ್ದರು. ಅನಂತರ ಬಿಜೆಪಿ ಮಹಿಳಾ ಮೋರ್ಚಾದ ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ, ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿಯೂ ಕಾರ್ಯನಿರ್ವಹಿಸಿದ್ದರು.




# ದುರ್ಬಲ ಆರ್ಥಿಕತೆಯಿಂದ ಸದೃಢ ಆರ್ಥಿಕ ಶಕ್ತಿಯಾಗಿ ಭಾರತ – ಅಶ್ವಿನಿ ವೈಷ್ಣವ್




ವೈಯಕ್ತಿಕ ಆದಾಯ ತೆರಿಗೆ ದರದ ಬದಲಾವಣೆ ಕುರಿತು ಮಧ್ಯಮ ವರ್ಗವು ನಿರಂತರವಾಗಿ ಬೇಡಿಕೆಯನ್ನು ಇಡುತ್ತ ಬಂದಿತ್ತು. 12 ಲಕ್ಷ ರೂಪಾಯಿ ವಾರ್ಷಿಕ ಆದಾಯಕ್ಕೆ ಯಾವುದೇ ತೆರಿಗೆ ಇಲ್ಲ ಎಂಬ ಪ್ರಮುಖ ನಿರ್ಧಾರವನ್ನು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕೈಗೊಳ್ಳಲಾಗಿದೆ ಎಂದು ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾತಿ ತಂತ್ರಜ್ಞಾನ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಅವರು ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನ ದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 60 ವರ್ಷಗಳ ಬಳಿಕ ಎನ್‌ಡಿಎ ಮೂರನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರ ಪಡೆದಿದೆ. ಮೊದಲ ಮತ್ತು ಎರಡನೇ ಅಧಿಕಾರದ ಅವಧಿಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಜೀ ಅವರು ಮಾಡಿದ ಉತ್ತಮ ಕಾರ್ಯಗಳೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಿದರು.

ದೇಶದ ಉತ್ತರ-ದಕ್ಷಿಣ, ಪೂರ್ವ ಪಶ್ಚಿಮದಲ್ಲಿ ಈ ಬದಲಾವಣೆಗಳನ್ನು ಜನತೆ ನೋಡಿದ್ದಾರೆ. 60-70 ವರ್ಷಗಳಲ್ಲಿ ನೋಡದಷ್ಟು ಉತ್ತಮ ಅಭಿವೃದ್ಧಿ ಕಾರ್ಯಗಳು ಕಳೆದ 10 ವರ್ಷದಲ್ಲಿ ಕಾಣುತ್ತಿವೆ, ಇದೆಲ್ಲದಕ್ಕೂ ಬಿಜೆಪಿ ಸರಕಾರದ ಕೆಲಸ, ಎನ್‌ಡಿಎ ಚಿಂತನೆ ಮತ್ತು ಪ್ರಧಾನಿ ಮೋದಿ ರವರ ದೂರದೃಷ್ಟಿಯೇ ಕಾರಣ ಎಂದು ತಿಳಿಸಿದರು.




ಮಧ್ಯಮ ವರ್ಗದವರಿಗೆ ನೆರವಾಗುವ ನಿಟ್ಟಿನಲ್ಲಿ ಮೆಟ್ರೋ, ಹೊಸ ವಿಮಾನ ನಿಲ್ದಾಣಗಳು, 10 ವರ್ಷಗಳಲ್ಲಿ 390 ಹೊಸ ವಿಶ್ವವಿದ್ಯಾಲಯಗಳ ನಿರ್ಮಾಣ, ಹೊಸ ಐಐಟಿ, ಐಐಎಂಗಳಿಂದ ಜೀವನದಲ್ಲಿ ಮಹತ್ತರವಾದ ಬದಲಾವಣೆ ಸಾಧ್ಯವಾಗಲಿದೆ. ಬುದ್ಧಿಮತ್ತೆ, ತಾಂತ್ರಿಕತೆ, ಉದ್ಯಮಶೀಲತೆ ಇದ್ದರೂ 2014ರಲ್ಲಿ ನಮ್ಮ ದೇಶವನ್ನು ದುರ್ಬಲವಾದ 5 ಆರ್ಥಿಕ ದೇಶಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತಿತ್ತು. ಈಗ ಎಲ್ಲ ದೊಡ್ಡ ದೇಶಗಳಲ್ಲಿ ನಮ್ಮ ದೇಶವು ಆರ್ಥಿಕ ಕ್ಷೇತ್ರದಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಆರೋಗ್ಯಕರ ದೇಶವಾಗಿ ಪರಿಗಣಿಸಲ್ಪಟ್ಟಿದೆ ಎಂದರು.

ಸುಮಾರು 50 ಲಕ್ಷ ಕೋಟಿ ರೂಪಾಯಿಯ ದೇಶದ ಬಜೆಟ್ ನಮ್ಮದಾಗಿದ್ದು, ಆರ್ಥಿಕ ಕ್ಷೇತ್ರದ ಕೊರತೆಯು ಶೇ 4.8ರಷ್ಟಿದ್ದು, ಅದು ಶೇ 4ಕ್ಕೆ ತಲುಪುತ್ತಿದೆ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅದು ಶೇ 7ರಷ್ಟಿದ್ದು, ನಾವು ಆರೋಗ್ಯಕರ ಸ್ಥಿತಿಯಲ್ಲಿದ್ದೇವೆ, ದಾವೂಸ್‌ಗೆ ಭೇಟಿ ಕೊಟ್ಟಿದ್ದ ಸಂದರ್ಭದಲ್ಲಿ ದೇಶದ ಆರ್ಥಿಕ ಕ್ಷೇತ್ರದ ಕುರಿತ ಚಿಂತನೆಗಳ ಬಗ್ಗೆ ಐಎಂಎಫ್ ಮುಖ್ಯಸ್ಥರು ಅಚ್ಚರಿ ವ್ಯಕ್ತಪಡಿಸಿದ್ದರು ಎಂದು ತಿಳಿಸಿದರು.

10 ವರ್ಷಗಳ ಹಿಂದೆ ರೈತರ ಆತ್ಮಹತ್ಯೆ ನಿರಂತರವಾಗಿ ನಡೆಯುತ್ತಿದ್ದವು. ಈಗ ಅತ್ಯುತ್ತಮ ಎಂಎಸ್‌ಪಿ (ಬೆಂಬಲ ಬೆಲೆ) ಲಭಿಸುತ್ತಿದೆ. 10 ವರ್ಷಗಳ ಹಿಂದಿನ ದರದ 3 ಪಟ್ಟು ಹೆಚ್ಚು ಎಂಎಸ್‌ಪಿ ಈಗ ಕೊಡುತ್ತಿದ್ದು, ಉತ್ಪಾದಕತೆ, ಕೃಷಿ ತಂತ್ರಜ್ಞಾನಕ್ಕೆ ಒತ್ತು ಕೊಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಎಂಎಸ್‌ಎಂಇಗಳ ಸ್ಥಿತಿಯೂ ಗರಿಷ್ಠ ಸುಧಾರಿಸಿದೆ. ಕೋವಿಡ್ ಅವಧಿಯ ನಡುವೆಯೂ ಉತ್ತಮ ಸಾಲ ವ್ಯವಸ್ಥೆ, ದೊಡ್ಡ ಕೈಗಾರಿಕೆಗಳಿಂದ ಬೆಂಬಲದಿಂದ ಎಂಎಸ್‌ಎಂಇಗಳೂ ಉತ್ತಮ ಸ್ಥಿತಿಯಲ್ಲಿವೆ. ಬೆಲೆ ಏರಿಕೆ ನಿಯಂತ್ರಣದಲ್ಲಿದೆ. ನಾವು ಭವಿಷ್ಯದಲ್ಲಿ ಬೆಲೆ ಏರಿಕೆ ನಿಯಂತ್ರಣದಲ್ಲಿ ಇಟ್ಟುಕೊಂಡು ಶೇ 6ರಿಂದ 8ರಷ್ಟು ಬೆಳವಣಿಗೆ ದರವನ್ನು ಕಾಪಾಡುವ ಸ್ಥಿತಿಯಲ್ಲಿದ್ದೇವೆ ಎಂದರು.


12 ಲಕ್ಷ ಆದಾಯಕ್ಕೆ ತೆರಿಗೆ ಇಲ್ಲ ಎಂಬುದು ವೇತನದಾರರಿಗೆ ದೊಡ್ಡ ಕೊಡುಗೆ, 10 ವರ್ಷಗಳ ಂದೆ ಸುಮಾರು 2.5 ಲಕ್ಷ ಕೋಟಿ ಬಂಡವಾಳ ಹೂಡಿಕೆ ಇದ್ದರೆ, ಅದು ಈಗ 15 ಲಕ್ಷ ಕೋಟಿಗೆ ಏರಿದೆ, ಹೊಸ ಬಂಡವಾಳ ಹೂಡಿಕೆ ಎಂದರೆ ಹೊಸ ಉದ್ಯೋಗ ಸೃಷ್ಟಿ, ಬೆಳವಣಿಗೆಗೆ ಅವಕಾಶ ಎಂದರು.

ಬೆಂಗಳೂರಿನಲ್ಲಿ 40ರಿಂದ 50 ಸಾವಿರ ಜನರಿಗೆ ಉದ್ಯೋಗ ಕೊಡುವ ಮೊಬೈಲ್ ತಯಾರಿಕಾ ಘಟಕ ಆರಂಭವಾಗಲಿದೆ. ಉದ್ಯೋಗಾಧಾರಿತ ಕೈಗಾರಿಕೆಗಳಿಗೆ ಒತ್ತು ಕೊಡುವ ಪ್ರಮುಖ ಪ್ರಕಟಣೆಯೂ ಈ ಬಾರಿ ಬಜೆಟ್‌ನಲ್ಲಿ ಹೊರಬಿದ್ದಿದೆ, ಆಟಿಕೆ, ಆಹಾರ ಸಂಸ್ಕರಣೆ, ಚಪ್ಪಲಿ ಉತ್ಪಾದನೆ ಮೊದಲಾದವುಗಳಿಗೆ ಈ ಬಜೆಟ್ ಬೆಂಬಲ- ಆದ್ಯತೆ ಕೊಡಲಿದೆ ಎಂದು ವಿವರಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಕು. ಶೋಭಾ ಕರಂದ್ಲಾಜೆ, ಬೆಂಗಳೂರು ಕೇಂದ್ರ ಸಂಸದರಾದ ಶ್ರೀ ಪಿ.ಸಿ.ಮೋಹನ್, ಬೆಂಗಳೂರು ಗ್ರಾಮಾಂತರ ಸಂಸದರಾದ ಡಾ. ಸಿ.ಎನ್.ಮಂಜುನಾಥ್ ಮತ್ತು ಬೆಂಗಳೂರು ದಕ್ಷಿಣ ಸಂಸದರು ಹಾಗೂ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ತೇಜಸ್ವಿ ಸೂರ್ಯ, ರಾಜ್ಯಸಭಾ ಸದಸ್ಯ ಶ್ರೀ ಲೆಹರ್ ಸಿಂಗ್ ಸಿರೋಯಾ, ವಿಧಾನಪರಿಷತ್ತಿನ ವಿಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಚರ್ಚೆಗೊಂದು ಸಾಲು...

**ಜನರ ನಂಬಿಕೆ ಮತ್ತು ಶ್ರದ್ಧೆಗಳಿಗನುಗುಣವಾದ ಆಡಳಿತ ನೀಡುವುದೂ ಸುಶಾಸನದ ಒಂದು ಭಾಗವೇ.**



# ಅಟಲ್ ಬಿಹಾರಿ ವಾಜಪೇಯಿ

## ಉಪಮಾತೀತ ರಾಜಕಾರಣಿ



ಹರೀಶ್ ಆತ್ರೇಯ
ಕಾರ್ಯಕರ್ತರು

**ಗಾಯದ ಗುರುತುಗಳ ನಡುವಲ್ಲಿ**
**ತೆರೆದ ಮುಖಗಳಿವೆಯಿಲ್ಲಿ**
**ಸತ್ಯವನುಸುರಲು ಭಯವಾಗುತಿದೆ**
**ನಾ ಹಾಡು ಹಾಡುವುದಿಲ್ಲ**
**ಕಾಣುತಿದೆ ಎಲ್ಲವೂ ಹೊಸತಂತೆ**
**ಚೂರಾದ ಕನ್ನಡಿಯೂರಿನಂತೆ**

ಇಂತಹ ಪ್ರಭಾವಶಾಲಿ ಕವಿತೆಯನ್ನು ಬರೆಯಬಲ್ಲ ಏಕೈಕ ರಾಜಕಾರಣಿ ಅಟಲ್ ಬಿಹಾರಿ ವಾಜಪೇಯಿ. ಭಾರತದ 10ನೇ ಪ್ರಧಾನಿಯಾಗಿ ಅಟಲ್ ಬಿಹಾರಿ ವಾಜಪೇಯಿಯವರದು ಬಹು ಆಯಾಮದ ವ್ಯಕ್ತಿತ್ವ. ರಾಜಕೀಯದ ಗಡಿಗಳನ್ನು ಮೀರಿದ ನಾಯಕತ್ವ. ಕವಿ, ವಾಗ್ಮಿ ಮತ್ತು ರಾಜಕಾರಣಿಯಾಗಿದ್ದ ವಾಜಪೇಯಿ ಅವರ ಜೀವನವು ಭಾರತದ ಪ್ರಜಾಪ್ರಭುತ್ವ ನೀತಿಗೆ ಅವರ ಅಚಲವಾದ ಬದ್ಧತೆ, ಪ್ರತಿಕೂಲ ಪರಿಸ್ಥಿತಿಗಳಲ್ಲಿ ಸನ್ಮಾರ್ಗದ ನಿರ್ಧಾರಗಳು ಮತ್ತು ತಮ್ಮ ಕಟ್ಟಾ ವಿಮರ್ಶಕರೊಂದಿಗೂ ಸಹ ಸಂಬಂಧಗಳನ್ನು ಬೆಸೆಯುವ ಸಾಮರ್ಥ್ಯವನ್ನು ತೋರಿಸುತ್ತದೆ.

### ಸ್ವಾತಂತ್ರ್ಯ ಹೋರಾಟಗಾರ


ವಾಜಪೇಯಿ ಅವರ ರಾಜಕೀಯ ಪ್ರಯಾಣವು ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಪ್ರಾರಂಭವಾಯಿತು. 1942 ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಸಮಯದಲ್ಲಿ ಬಂಧಿಸಲ್ಪಟ್ಟ ಅವರು, ದೇಶಭಕ್ತಿ ಮತ್ತು ನಿಸ್ವಾರ್ಥತೆಯ ಮೌಲ್ಯಗಳನ್ನು ಜೀವನದ ಆರಂಭದಲ್ಲಿಯೇ ಅಳವಡಿಸಿಕೊಂಡವರು. ಈ ಆದರ್ಶಗಳು ಅವರ




ವೃತ್ತಿ ಜೀವನದುದ್ದಕ್ಕೂ ಮಾರ್ಗದರ್ಶಿಯನ್ನು ನೀಡುವ ಶಕ್ತಿಯಾಗಿ ಉಳಿದವು ಮತ್ತು ಸ್ವಾವಲಂಬಿ ಭಾರತಕ್ಕಾಗಿ ಅವರ ನೀತಿಗಳು ಮತ್ತು ದೃಷ್ಟಿಕೋನದ ಮೇಲೆ ಪ್ರಭಾವ ಬೀರಿದಂಥವು.

### ಎಲ್ಲರ ಪರವಾಗಿ ಮಾತನಾಡುವ ವಿರೋಧ ಪಕ್ಷದ ನಾಯಕ

ಕಾಂಗ್ರೆಸ್ ಪಕ್ಷವು ಭಾರತೀಯ ರಾಜಕೀಯದಲ್ಲಿ ಪ್ರಾಬಲ್ಯ ಹೊಂದಿದ್ದ ವರ್ಷಗಳಲ್ಲಿ ವಾಜಪೇಯಿಯವರು ವಿರೋಧ ಪಕ್ಷದ ನಾಯಕರಾಗಿದ್ದವರು . ಸಂಸತ್ತಿನಲ್ಲಿ ಅವರ ಭಾಷಣಗಳು ಅವುಗಳ ಸಾರ, ಚಾತುರ್ಯ ಮತ್ತು ತೀಕ್ಷ್ಣವಾದ ವಿಮರ್ಶೆಗಾಗಿ ಪ್ರಶಂಸಿಸಲ್ಪಟ್ಟವು. ಅವರ ಮಾತುಗಳಲ್ಲಿ ವೈಯಕ್ತಿಕ ದಾಳಿಗಳಿಲ್ಲದೆ. ರಾಷ್ಟ್ರೀಯ ಸಮಸ್ಯೆಗಳನ್ನು ವ್ಯಕ್ತಪಡಿಸುವ ಅವರ ಸಾಮರ್ಥ್ಯವು ಅವರನ್ನು ಪಕ್ಷಾತೀತವಾಗಿ ಎಲ್ಲರೂ ಗೌರವಿಸುವಂತೆ ಮಾಡಿತು.

ರಾಮಚಂದ್ರ ಗುಹಾ ಅವರು ಇಂಡಿಯಾ ಆಫ್ಟರ್ ಗಾಂಧಿಯಲ್ಲಿ ಉಲ್ಲೇಖಿಸಿದಂತೆ, ವಾಜಪೇಯಿ ವಿರೋಧ ಪಕ್ಷದ ಘನತೆಯನ್ನು ಎತ್ತಿ ಹಿಡಿದವರು, ಕೇವಲ ಭಿನ್ನಾಭಿಪ್ರಾಯಕ್ಕಿಂತ ಹೆಚ್ಚಾಗಿ ರಚನಾತ್ಮಕ ಟೀಕೆಗಳನ್ನು ಒದಗಿಸಿದವರು.

## ರಾಮ ಮಂದಿರದ ಹೋರಾಟಗಾರ

ರಾಮ ಮಂದಿರ ಚಳುವಳಿಯಲ್ಲಿ ವಾಜಪೇಯಿ ಅವರ ಪಾತ್ರವು ಪ್ರಮುಖವಾಗಿತ್ತು . ಅವರು ಈ ಆಂದೋಲನದ ಸಾಂಸ್ಕೃತಿಕ ಮತ್ತು ಧಾರ್ಮಿಕ ಭಾವನೆಗಳನ್ನು ಬೆಂಬಲಿಸುತ್ತಲೇ, ಸಂವಿಧಾನಾತ್ಮಕ ಮತ್ತು ಕಾನೂನು ವಿಧಾನಗಳ ಮೂಲಕ ಪರಿಹಾರಕ್ಕಾಗಿ ಪ್ರತಿಪಾದಿಸುತ್ತಿದ್ದರು. ಅವರ ಪ್ರಾಯೋಗಿಕ ವಿಧಾನವು ಅವರ ಪಕ್ಷದೊಳಗಿನ ಹೆಚ್ಚು ಆಕ್ರಮಣಕಾರಿ ನಿಲುವುಗಳಿಗೆ ವ್ಯತಿರಿಕ್ತವಾಗಿತ್ತು, ಆಡಳಿತದೊಂದಿಗೆ ಸಿದ್ಧಾಂತವನ್ನು ಸಮತೋಲನಗೊಳಿಸುವ ಅವರ ಸಾಮರ್ಥ್ಯವು ಅಸಾಧಾರಣವಾದದ್ದು.

## ವಿಮರ್ಶಕರ ಪಾಲಿಗೆ ಅಜಾತಶತ್ರು

ವಾಜಪೇಯಿ ಅವರ ಪ್ರಧಾನಿ ಅವಧಿಯು ಟೀಕೆಗಳಿಲ್ಲದೆ ಇರಲಿಲ್ಲ – ಅದು ಪೋಖ್ರಾನ್ ಪರಮಾಣು ಪರೀಕ್ಷೆಗಳು, ಕಾರ್ಗಿಲ್ ಯುದ್ಧ ಅಥವಾ ಆರ್ಥಿಕ ಸುಧಾರಣೆಗಳ ಸಮಯದಲ್ಲಿ ಆಗಿರಬಹುದು. ಆದರೂ, ಅವರು ತಮ್ಮ ವಿಮರ್ಶಕರನ್ನು ಸೌಜನ್ಯದಿಂದಲೇ ಮಾತನಾಡಿಸುತ್ತಿದ್ದರು. ವಿರೋಧಕ್ಕೆ ಅವರ ಪ್ರತಿಕ್ರಿಯೆಯು ವಿವೇಚನೆಯಲ್ಲಿ ಅಡಗಿತ್ತು. ಆಗಾಗ್ಗೆ ವಿರೋಧಿ ಗಳನ್ನು ತಮ್ಮ ಬುದ್ಧಿವಂತಿಕೆ ಮತ್ತು ಹಾಸ್ಯದಿಂದ ನಿಶ್ಯಸ್ತ್ರಗೊಳಿಸುತ್ತಿದ್ದರು. 1999 ರ ಅವಿಶ್ವಾಸ ನಿರ್ಣಯವನ್ನು ಒಂದೇ ಮತದಿಂದ ಸೋಲಿಸುವಂತಹ ಹಿನ್ನಡೆಗಳ ಸಮಯದಲ್ಲಿ ಅವರ ನಮ್ರತೆ, ವಿರೋಧಿ ಗಳಿಂದಲೂ ಮೆಚ್ಚುಗೆಯನ್ನು ಗಳಿಸಿತು.

## ಸಂತೋಷದ ಘಟನೆಗಳು ಮತ್ತು ಬುದ್ಧಿ


ವಾಜಪೇಯಿಯವರ ಹಾಸ್ಯಪ್ರಜ್ಞೆಯು ಅದ್ಭುತವಾಗಿತ್ತು. ಒಂದು ಉದಾಹರಣೆಯನ್ನು ಗಮನಿಸೋಣ. ಸಂಸತ್ತಿನ ಅಧಿವೇಶನದಲ್ಲಿ, ಭಾಷಣಗಳಲ್ಲಿ ದೀರ್ಘ ವಿರಾಮಗಳಿಗಾಗಿ ಸದಸ್ಯರೊಬ್ಬರು ಅವರನ್ನು ಅಪಹಾಸ್ಯ ಮಾಡಿದಾಗ, ವಾಜಪೇಯಿ, ನಿಮ್ಮ ಮನಸ್ಸು ನನ್ನ ಆಲೋಚನೆಗಳೊಂದಿಗೆ ಸೇರಲು ನಾನು ಹೀಗೆ ದೀರ್ಘ ವಿರಾಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ಪ್ರತಿಕ್ರಿಯಿಸಿದರು. ಉದ್ವಿಗ್ನ ರಾಜಕೀಯ ಸನ್ನಿವೇಶಗಳಲ್ಲಿಯೂ ಸಹ ಅವರ ಹರ್ಷಚಿತ್ತದ ಸ್ವಭಾವವು ಅವರನ್ನು ಪ್ರೀತಿಪಾತ್ರರನ್ನಾಗಿ ಮಾಡಿತು.

## ಅಡ್ವಾಣಿ ಮತ್ತು ಮೋದಿ ಅವರೊಂದಿಗಿನ ಸಂಬಂಧಗಳು

ಲಾಲ್ ಕೃಷ್ಣ ಅಡ್ವಾಣಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ರವರ ಸೌಹಾರ್ದತೆಯು ಭಾರತೀಯ ಜನತಾ ಪಕ್ಷದ ಉದಯಕ್ಕೆ ಒಂದು ಮೂಲಾಧಾರವಾಗಿತ್ತು. ಸಾಂದರ್ಭಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಅವರ ಪರಸ್ಪರ ಗೌರವವು ಪಕ್ಷದ ಸುಸಂಬದ್ಧತೆಯನ್ನು ಖಚಿತಪಡಿಸಿತು. ಶ್ರೀ ನರೇಂದ್ರ ಮೋದಿ ಅವರೊಂದಿಗಿನ ಅವರ ಸಂಬಂಧವು ಅವರ ಮಾರ್ಗದರ್ಶಕರಂತಹ ಮಾರ್ಗದರ್ಶನವನ್ನು ಪ್ರದರ್ಶಿಸಿತು.

2002 ರ ಗುಜರಾತ್ ಗಲಭೆಗಳನ್ನು ಮೋದಿ ನಿರ್ವಹಿಸಿದ ಬಗ್ಗೆ ಟೀಕೆಗಳ ಹೊರತಾಗಿಯೂ, ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರು ಸಭ್ಯತೆಯನ್ನು ಉಳಿಸಿಕೊಂಡರು, ನಂತರ ಶ್ರೀ ಮೋದಿ ರವರಿಗೆ ಆಡಳಿತ ತತ್ವಗಳ ಬಗ್ಗೆ ಸಲಹೆಯನ್ನು ನೀಡಿದರು.

ಸಿದ್ಧಾಂತವನ್ನು ವಾಸ್ತವಿಕತೆಯೊಂದಿಗೆ, ಮಾತಿನ ಚುಟುಕಿನೊಂದಿಗೆ ಕಾವ್ಯದ ಮೂಲಕ ಮತ್ತು ಬಲವನ್ನು ತುಂಬಿದ ನಾಯಕರಾದಿ ದಿ. ಅಟಲ್ ಬಿಹಾರಿ ವಾಜಪೇಯಿ ರವರು ಎಂದೆಂದಿಗೂ ಅಮರರಾಗಿದ್ದಾರೆ. ಜೀವನ ಚರಿತ್ರೆಕಾರ ಕಿಂಗ್ಶುಕ್ ನಾಗ್ ಸೂಕ್ತವಾಗಿ ವಿವರಿಸಿದಂತೆ, ಅಟಲ್ ಬಿಹಾರಿ ವಾಜಪೇಯಿ ಅವರ ಜೀವನವು ಸಂಕೀರ್ಣತೆಗಳು ಮತ್ತು ಸರಳತೆಯ ಮಿಶ್ರಣವಾಗಿದ್ದು, ಅವರನ್ನು ಭಾರತದ ಇತಿಹಾಸದಲ್ಲಿ ಅಪ್ರತಿಮ ರಾಜನೀತಿಜ್ಞರನ್ನಾಗಿ ಮಾಡಿದೆ. ಜನಮಾನಸದಲ್ಲಿ ವಾಜಪೇಯಿ ಅಜಾತಶತೃ.



# ವರಪುತ್ರ ಅಟಲ್ ಜಿ
## ಜನ್ಮ ಶತಾಬ್ದಿ ಅಭಿಯಾನ





ರತನ್ ರಮೇಶ್ ಪೂಜಾರಿ
ವಕ್ತಾರರು, ಬಿಜೆಪಿ ಮಾಧ್ಯಮ ವಿಭಾಗ


1985ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಕರ್ನಾಟಕದ ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳ ಪ್ರವಾಸ ಮುಗಿಸಿ ರಾಯಚೂರಿನಿಂದ ಹೈದರಾಬಾದ್‌ಗೆ ಪಕ್ಷದ ಕಾರ್ಯಕ್ರಮದ ನಿಮಿತ್ತ ಅಂಬಾಸಿಡರ್ ಕಾರಿನಲ್ಲಿ ಪಕ್ಷದ ಇತರ ನಾಯಕರೊಂದಿಗೆ ಪ್ರಯಾಣಿಸುತ್ತಿದ್ದರು. ಸಾಗುತ್ತಿದ್ದ ಅಂಬಾಸಡರ್ ಕಾರು ಹೊಂಡ ಗುಂಡಿಗಳಿಂದ ಕೂಡಿದ ರೋಡಿನಲ್ಲಿ ಕೆಳಗಿನಿಂದ ಮೇಲೆ ಮೇಲಿನಿಂದ ಕೆಳಗೆ ತೇಲಾಡುತ್ತ ಸಾಗಿತ್ತು. ಆಗ ಅಟಲ್‌ಜೀ ಕಂಡ ಕನಸೇ ಸುವರ್ಣ ಚತುಷ್ಪಥ ರಸ್ತೆ. ನಂತರ ಈ ಕನಸು ನನಸಾಗಿದ್ದು ಇಡೀ ದೇಶವನ್ನು ಬೆಸೆದ ಸುವರ್ಣ ಚತುರ್ಥ ರಸ್ತೆ ಹಾಗೂ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಕಾರ್ಯರೂಪಕ್ಕೆ ಬರಲು ಸಾಧ್ಯವಾಯಿತು. ನಂತರ ಅಣು ಬಾಂಬ್, ಸುವರ್ಣ ಚತುರ್ಥ ರಸ್ತೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಸಂಪರ್ಕ ಕ್ರಾಂತಿ, ದೂರಸಂಪರ್ಕ ಕ್ರಾಂತಿ, ಸೆಕೆಂಡ್ ಜನರೇಷನ್ ಎಕಾನಮಿಕ್ ರಿಫಾರ್ಮ್ಸ್ ಹೀಗೆ ಹತ್ತು ಹಲವು ದೇಶದ ಪ್ರಗತಿಯ ಪಥವನ್ನೇ ಬದಲಿಸುವ ಕೆಲಸವನ್ನು ಮಾಡಿದ ಹಾಗೂ ಭಾರತೀಯ ಜನತಾ ಪಕ್ಷವನ್ನು ಹೆಮ್ಮರವಾಗಿ ಬೆಳೆಸುವಲ್ಲಿ ಅತಿ ದೊಡ್ಡ ಪಾತ್ರ ವಹಿಸಿದ ಅಜಾತಶತ್ರು ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು 100ನೇ ವರ್ಷದ ಜಯಂತಿಯನ್ನು ಇತ್ತೀಚೆಗೆ ಡಿಸೆಂಬರ್ 25 ರಂದು ಆಚರಿಸಲಾಯಿತು. ಇಂತಹ ದೇಶ ಕಂಡ ಮಹಾನ್ ನಾಯಕರ ನೆನಪನ್ನು ಅಜರಾಮರವಾಗಿಸಬೇಕಾಗಿದ್ದು ಹಾಗೂ ಅವರ ವ್ಯಕ್ತಿತ್ವದ ಬಗೆಗಿನ ಅನುಭವವನ್ನು ಈಗಿನ ಹಾಗೂ ಮುಂದಿನ ಪೀಳಿಗೆಗೆ ರವಾನಿಸಬೇಕಾದ ಅವಶ್ಯಕತೆ ಇದೆ. ಇಂತಹ ಒಂದು ಪ್ರಯತ್ನವೇ ಅಟಲ್ ಜನ್ಮ ಶತಾಬ್ದಿ ಅಭಿಯಾನ.

ಅಟಲ್ ಬಿಹಾರಿ ವಾಜಪೇಯಿಯವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಇಡೀ ವರ್ಷ ಅವರ ರಾಜಕೀಯ ಜೀವನ, ರಾಜಕೀಯ ಸಾಧನೆಗಳು, ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ದೇಶಕ್ಕೆ ಮಾಡಿರುವಂತ ಅಭಿವೃದ್ಧಿ ಕಾರ್ಯಗಳು ಹಾಗೂ ಕಾರ್ಯಕರ್ತರಿಗೆ ಪ್ರೇರಣೆ ನೀಡುವಂತ ಅವರ ಜೀವನದ ವಿಚಾರವನ್ನು ತಿಳಿಸುವಂತಹ ಒಂದು ದೊಡ್ಡ ಅಭಿಯಾನವೇ ಅಟಲ್ ಜೀ ಶತಮಾನೋತ್ಸವ. ಈ ಅಭಿಯಾನದ ಪ್ರಯುಕ್ತ ಡಿಸೆಂಬರ್ 25ನೇ ತಾರೀಕಿನಂದು ಸುಶಾಸನ ದಿನದೊಂದಿಗೆ ಪ್ರಾರಂಭಮಾಡಿ ಅದರ ಎರಡನೇ ಹಂತದ ಅಭಿಯಾನವಾಗಿ ಶುರು ಮಾಡಿದ ಅಭಿಯಾನವೇ ಅಟಲ್ ಸ್ಮೃತಿ ಅಭಿಯಾನ.

### ಬಾಗಲಕೋಟೆಯಲ್ಲಿ ಕೆಂಪುಕೋಟೆ




ಅಟಲ್ ಜೀ ಯವರನ್ನು ಒಂದು ಬಾರಿಯಾದರೂ ಪ್ರಧಾನಮಂತ್ರಿಗಳಾಗಿ ನೋಡಬೇಕೆಂಬ ಅಭಿಲಾಷೆ ಇಡೀ ದೇಶದ ತುಂಬಾ ಆವರಿಸಿತ್ತು. ಹಾಗೂ ಅಟಲ್‌ಜೀ ಪ್ರಧಾನಮಂತ್ರಿಯಾಗಿ ಕೆಂಪುಕೋಟೆಯ ಮೇಲೆ ಭಾಷಣ ಮಾಡುವುದನ್ನು ನೋಡಬೇಕು ಎಂಬ ದೇಶದ ಬಹುತೇಕ ಜನರಲ್ಲಿ ಮೂಡಿತ್ತು. ಆ ಒಂದು ಅಭಿಲಾಷೆಗೆ ತಕ್ಕಂತೆ ಬಾಗಲಕೋಟೆಯ ಭಾರತೀಯ ಜನತಾ ಪಾರ್ಟಿಯ ನಾಯಕರು ಹಾಗೂ ಕಾರ್ಯಕರ್ತರು ವೇದಿಕೆಯನ್ನೇ ಕೆಂಪು ಕೋಟೆಯ ರೀತಿ ನಿರ್ಮಾಣ ಮಾಡಿ ಅದರ ಮೇಲೆ ಅಟಲ್ ಬಿಹಾರಿ ವಾಜಪೇಯಿ ಅವರು ಭಾಷಣ ಮಾಡುವ ರೀತಿ ವ್ಯವಸ್ಥೆ ಮಾಡಿದ್ದರು. ಇಂದು ಕೆಂಪುಕೋಟೆಯ ಮಾದರಿಯ ಮೇಲೆ ಭಾಷಣ ಮಾಡಿದ್ದಾರೆ ಮುಂದೊಂದು ದಿನ ನೈಜ ಕೆಂಪು ಕೋಟೆಯ ಮೇಲೆ ಭಾಷಣ ಮಾಡಲಿದ್ದಾರೆ ಎಂಬ ನಿರೀಕ್ಷೆ ಹಾಗೂ ಘೋಷಣೆಯೊಂದಿಗೆ ಕಾರ್ಯಕ್ರಮ ನಡೆಯಿತು ಎಂಬುದು ಇನ್ನೊಬ್ಬರು ವಾಜಪೇಯಿಯ ಜೊತೆಗಿದ್ದವರ ಅನಿಸಿಕೆ.

ಸ್ಮೃತಿ ಅಭಿಯಾನದಡಿ ಇಡೀ ರಾಜ್ಯದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಆಗಮಿಸಿದಂತಹ ಸಂದರ್ಭದಲ್ಲಿ ಅವರ ಜೊತೆ ಒಡನಾಟದಲ್ಲಿ ಇದ್ದಂತಹ, ಅವರ ಜೊತೆ ವೇದಿಕೆಯನ್ನು ಹಂಚಿಕೊಂಡಂತಹ, ಅವರ ಕಾರ್ಯಕ್ರಮಗಳಲ್ಲಿ


## ಅಭಿಯಾನದಲ್ಲಿ ವಿಶಿಷ್ಟ ಅನುಭವ

ಬೆಂಗಳೂರಿನ ಜಯನಗರದ ಒಂದು ಮನೆಯಲ್ಲಿ ಇಂದಿಗೂ ಕೂಡ 1982ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಭೇಟಿ ನೀಡಿದ ಒಂದು ಮನೆಯ ಕೋಣೆ, ಮಂಚ, ಹಾಸಿಗೆ, ದಿಂಬು ಎಲ್ಲವನ್ನೂ ಹಾಗೆಯೇ ಇಟ್ಟು 'ಅಟಲ್ ಜೀ ಕೋಣೆ' ಎಂಬ ಹೆಸರಿಟ್ಟಿದ್ದಾರೆ. ಆ ಕೋಣೆಯಲ್ಲಿ ಅಟಲ್ ಜೀ ಫೋಟೋ ಇಟ್ಟು ಅವರು ಬಳಸಿದ ಸಮಯ ಹೇಗೆ ಇತ್ತೋ ಹಾಗೆಯೇ ನಿರ್ವಹಣೆ ಮಾಡುತ್ತಿದ್ದಾರೆ. ಇನ್ನು ಕೆಲವು ಮನೆಗಳಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಊಟ ಮಾಡಿದ ತಟ್ಟೆ, ಬಳಸಿದ ಎಲ್ಲಾ ಸಾಮಗ್ರಿಗಳನ್ನು ಜೋಪಾನವಾಗಿ ಇಟ್ಟು ನೆನಪುಗಳನ್ನು ಸಂರಕ್ಷಿಸಿಕೊಂಡಿದ್ದಾರೆ. ಅಟಲ್‌ಜಿಗೆ ಸಂಬಂಧಪಟ್ಟ ವಸ್ತುಗಳು, ಪತ್ರಗಳನ್ನು ಜೋಪಾನವಾಗಿ ಕಾಪಾಡಿಕೊಂಡಿರುವುದು ನಮ್ಮ ಅಭಿಯಾನದಲ್ಲಿ ಕಂಡು ಅಭಿಮಾನ ಉಕ್ಕಿ ಬಂದಿತು.

ಭಾಗವಹಿಸಿರುವಂತಹ ನಮ್ಮ ಪಕ್ಷದ ಹಿರಿಯರು, ಹಿತೈಷಿಗಳು ಕರ್ನಾಟಕದಲ್ಲಿ ಯಾರ್ಯಾರು ಇದ್ದಾರೋ ಅವರನ್ನು ಸಂಪರ್ಕ ಮಾಡಿ ಅವರ ಬಳಿ ವಾಜಪೇಯಿಯವರ ಕುರಿತ ಅಭಿಪ್ರಾಯ, ಅನುಭವಗಳನ್ನು ಹಂಚಿಕೊಳ್ಳುವ ಕಾರ್ಯ ನಡೀತಾ ಇದೆ. ಹಾಗೆಯೇ ಅವರ ಹತ್ತಿರ ಉಳಿದಿರುವ ಅಟಲ್ ಜೀ ನೆನಪುಗಳು, ಫೋಟೋಗಳು, ಅವರು ಬಳಸಿರುವಂತ ವಸ್ತುಗಳು ಅಥವಾ ಪತ್ರ ವ್ಯವಹಾರ ಮಾಡಿರುವಂತಹ ಪತ್ರಗಳ ಸಂಗ್ರಹ ಮಾಡುವಂತಹ ಕೆಲಸ ನಡೀತಾ ಇದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 550 ಕಡೆಗಳಲ್ಲಿ ಅಟಲ್ ಜೀ ಜೊತೆ ಗುರುತಿಸಿಕೊಂಡಿರುವಂತವರ ಪಟ್ಟಿ ಮಾಡಲಾಗಿದೆ. ಅವರ ಮನೆಗೆ ಹೋಗಿ ಅಭಿಪ್ರಾಯ ಸಂಗ್ರಹ ಮಾಡಿ ಗೌರವ ಸಮರ್ಪಣೆ ಮಾಡುವ ಕಾರ್ಯ ಮಾಡುತ್ತಿದ್ದೇವೆ. ಈಗಾಗಲೇ ನಾವು 150 ಹಿರಿಯ ಕಾರ್ಯಕರ್ತರನ್ನು ಸಂಪರ್ಕ ಮಾಡಲಾಗಿದೆ. ಉಳಿದ 550 ಜನರನ್ನು ತಲುಪುವ ಕೆಲಸ ಆಗಲಿದೆ.

ಅಭಿಯಾನವು ಫೆಬ್ರುವರಿ 25 ರಂದು ಸಮಾರೋಪಗೊಳ್ಳಲಿದೆ. ಅಟಲ್ ಜೀ ಜನ್ಮ ಶತಮಾನೋತ್ಸವ ಸಮಿತಿ 2025ರ ರಾಜ್ಯ ಪ್ರಮುಖರಾಗಿ ಡಾ. ಎ. ಹೆಚ್. ಶಿವಯೋಗಿ ಸ್ವಾಮಿ, ರಾಜ್ಯ ಸಂಚಾಲಕರಾಗಿ ಶ್ರೀ ಜಗದೀಶ ಹಿರೇಮನಿ ಹಾಗೂ ಸದಸ್ಯರಾಗಿ ಶ್ರೀಮತಿ ಲಕ್ಷ್ಮಿ ಅಶ್ವಿನ್ ಗೌಡ, ಶ್ರೀ ಎನ್.. ವಿ. ಫಣೀಶ್, ಶ್ರೀ ಬಿದರೆ ಪ್ರಕಾಶ್, ಶ್ರೀ ಬಿ.ಸಿ. ಸದಾಶಿವಯ್ಯ, ಶ್ರೀ ಪಿ.ಎನ್. ಸದಾಶಿವ, ಶ್ರೀಮತಿ ಮಮತಾ ಉದಯ್, ಶ್ರೀ ದಯಾಗನ್ ಧಾರವಾಡಕರ್, ಶ್ರೀ ನರಸಿಂಹಮೂರ್ತಿ, ಶ್ರೀವೆಂಕಟ್ ಪ್ರಸಾದ್ ಮಾಲೆಪಾಟಿ, ಶ್ರೀ ಶಂಕರ್ ಬಿರಾದಾರ್ ಇವರನ್ನು ಈ ಅಭಿಯಾನದ ಯಶಸ್ಸಿಗಾಗಿ ರಾಷ್ಟ್ರೀಯ ನಾಯಕರು ನೇಮಿಸಿದ್ದಾರೆ. ನಂತರದ ದಿನಗಳಲ್ಲಿ ಅಟಲ್ ಜೀ ವಿರಾಸತ್ ಸಮಾವೇಶಗಳು ದೇಶಾದ್ಯಂತ ನಡೆಯಲಿದೆ. ಆ ಸಮಾವೇಶದಲ್ಲಿ ನಾವು ಈಗ ಸಂಪರ್ಕ ಮಾಡುವ ಎಲ್ಲಾ ಹಳೆ ಕಾರ್ಯಕರ್ತರನ್ನು ಸೇರಿಸಿ ಹೊಸ ಕಾರ್ಯಕರ್ತರಿಗೆ ಅವರ ಅನುಭವ ಹಂಚುವ ಒಂದು ವಿನೂತನ ಪ್ರಯತ್ನ ನಡೆಯಲಿದೆ. ಅಟಲ್ ಜೀ ಅವರ ಆದರ್ಶಗಳು, ಜೀವನಶೈಲಿ, ಅನುಭವ ಹಾಗೂ ಅವರ ಸರ್ಕಾರದ ಅಭಿವೃದ್ಧಿ ಹಾಗೂ ಕಲ್ಯಾಣ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಪ್ರೇರೇಪಿಸುವ ಕೆಲಸ ಮಾಡಲಾಗುತ್ತದೆ.

## ತುಲಾಭಾರ



1983ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡಕ್ಕೆ ಭೇಟಿ ನೀಡಿದ್ದರು. ಆಗ ಅವರಿಗೆ 60 ವರ್ಷ ವಯಸ್ಸು. ಆ ಸಂದರ್ಭದಲ್ಲಿ ಪಕ್ಷದ ಕಾರ್ಯಕ್ರಮ ನಿಮಿತ್ತ ರಾಜ್ಯಕ್ಕೆ ಆಗಮಿಸಿದ್ದ ಅಟಲ್ ಬಿಹಾರಿ ವಾಜಪೇಯಿರವರಿಗೆ ಗುಳೇದಗುಡ್ಡದಲ್ಲಿ ಎಲ್ಲಾ ಬಿಜೆಪಿ ಕಾರ್ಯಕರ್ತರು ಸೇರಿ ಸಂಪೂರ್ಣ ಒಂದು ರೂಪಾಯಿಯ ನಾಣ್ಯಗಳಲ್ಲಿ ತುಲಾಭಾರ ಕಾರ್ಯಕ್ರಮ ಮಾಡುವ ನಿರ್ಧಾರ ಮಾಡುತ್ತಾರೆ. ಇಡೀ ದೇಶದಲ್ಲೇ ಮೊದಲ ಬಾರಿ ಎಂಬಂತೆ ಗುಳೇದಗುಡ್ಡದಲ್ಲಿ ಅಟಲ್ ಜೀ ರವರಿಗೆ ತುಲಾಭಾರ ಕಾರ್ಯಕ್ರಮ ಆಯೋಜಿಸಿ ಹಬ್ಬದ ವಾತಾವರಣ ಸೃಷ್ಟಿಸಲಾಗುತ್ತದೆ. ಅಟಲ್ ಜಿ ಅವರ ಒಡನಾಡಿಯವರ ಅನುಭವದ ಪ್ರಕಾರ ಅವತ್ತಿನ ದಿನಗಳಲ್ಲಿ ಅಷ್ಟೊಂದು ಪ್ರಮಾಣದ ಒಂದು ರೂಪಾಯಿಯ ನಾಣ್ಯಗಳನ್ನು ಹೊಂದಿಸುವುದು ಬಹಳ ಕಷ್ಟವಾಗಿತ್ತಂತೆ. ಆಗಿನ ಅಟಲ್ ಜಿ ಅವರ ದೇಹ ತೂಕಕ್ಕೆ ಸಮನಾಗುವ ತುಲಾಭಾರ ಮಾಡಲು ಸುಮಾರು 21,000 ರೂಪಾಯಿಗಳ ನಾಣ್ಯಗಳು ಬೇಕಿತ್ತಂತೆ. ಅಷ್ಟೊಂದು ಪ್ರಮಾಣದ ನಾಣ್ಯಗಳನ್ನು ಇವರು ಬ್ಯಾಂಕುಗಳಲ್ಲಿ ಹೋಗಿ ಕೇಳಿದರೆ ಅವರು ಕೊಡಲಿಲ್ಲ. ಅಷ್ಟೊಂದು ಪ್ರಮಾಣದ ನಾಣ್ಯಗಳನ್ನು ಹೊಂದಿಸಲು ವಿಫಲರಾಗಿ ಕೊನೆಗೆ 21,000 ರೂಪಾಯಿ ಹಣವನ್ನು ಹೊಂದಿಸಿಕೊಂಡು ಪಂಡರಾಪುರಕ್ಕೆ ಹೋಗಿ ಅಲ್ಲಿ ದೇವಸ್ಥಾನದಲ್ಲಿರುವ ಒಬ್ಬರು ಪರಿಚಯಸ್ತರ ಮೂಲಕ ಹಣ ನೀಡಿ ನಾಣ್ಯಗಳನ್ನು ಮೂಟೆಗಳಲ್ಲಿ ತಂದು ಅಟಲ್ ಜಿ ರವರ ತುಲಾಭಾರ ಕಾರ್ಯಕ್ರಮ ಮಾಡಲಾಗಿತ್ತಂತೆ. ಈ ಅನುಭವವನ್ನು ಹಂಚಿಕೊಳ್ಳುವಾಗ ಅವರು ಬಹಳ ಹೆಮ್ಮೆ ಹಾಗೂ ಆನಂದತುಂದಿಲರಾಗಿ ವಿವರಿಸುತ್ತಾರೆ.

## ಅಟಲ್ ಜಿ ರವರೊಂದಿಗೆ ಕಾರ್ಯ ನಿರ್ವಹಿಸಿದ್ದ ಕಾರ್ಯಕರ್ತರ ನಿವಾಸಕ್ಕೆ ಭೇಟಿ ಹಾಗೂ ಅಭಿನಂದನಾ ಕಾರ್ಯಕ್ರಮ


ಶ್ರೀ ಕೆ.ಬಿ. ಜಯರಾಮ್, ಚಿಕ್ಕಪೇಟೆ – ಬೆಂಗಳೂರು


ಶ್ರೀಮತಿ ಸರೋಜಿನಿ ಮುತ್ತಣ್ಣ, ಜಯನಗರ – ಬೆಂಗಳೂರು


ಶ್ರೀ ಚಿದಂಬರ್, ಬೆಂಗಳೂರು ನಗರ


ಎಂ.ಹೆಚ್. ಶ್ರೀಧರ ಕುಟುಂಬ, ಬೆಂಗಳೂರು


ಶ್ರೀ ಶಿವಣ್ಣಾಚಾರ್, ಚಿತ್ರದುರ್ಗ


ಶ್ರೀ ರವೀಂದ್ರನಾಥ್, ದಾವಣಗೆರೆ


ಪಾರ್ಥಸಾರಥಿ ಜಿ., ಕೋಲಾರ


ಶ್ರೀ ಲೋಕೇಶ್ ಹೆಗ್ಡೆ, ಪುತ್ತೂರು



# ಮಹಾ ಕುಂಭಮೇಳ 2025

# ವ್ಯವಸ್ಥೆಯಲ್ಲಿ ಅಚ್ಚುಕಟ್ಟುತನ, ಕರ್ತವ್ಯದಲ್ಲಿ ಬದ್ಧತೆ, ಆಚರಣೆಯಲ್ಲಿ ನಂಬಿಕೆ ಮತ್ತು ಶ್ರದ್ಧೆಗೆ ಸಾಕ್ಷಿ

**ನೇರವಾಗಿ ಭಾಗವಹಿಸಿದವರೂ, ಪರೋಕ್ಷವಾಗಿ ಬೆಂಬಲಿಸಿದವರೂ ಸೇರಿದರೆ ದೇಶದ ಜನಸಂಖ್ಯೆಯ ಶೇಕಡಾ 50ರಷ್ಟಕ್ಕೂ ಹೆಚ್ಚು ಜನರನ್ನು ನಂಬಿಕೆ ಮತ್ತು ಶ್ರದ್ಧೆಯ ಮೂಲಕವೇ ಒಗ್ಗೂಡಿಸಿದ ಕುಂಭಮೇಳ ಹಿಂದೂಗಳ ಆತ್ಮಸ್ಥೈರ್ಯ ಹೆಚ್ಚಳಕ್ಕೆ ಕಾರಣವಾದರೆ, ಹಿಂದೂ ವಿರೋಧಿಗಳಿಗೆ ಒಂದಿಷ್ಟು ನಡುಕ ಉಂಟು ಮಾಡಿರುವುದನ್ನಂತೂ ಯಾರೂ ಅಲ್ಲಗೆಳೆಯುವಂತಿಲ್ಲ.**

**ಶ್ರೀ ಅಜಿತ್ ಶೆಟ್ಟಿ ಹೆರಂಜೆ**
ರಾಜ್ಯ ಸಹ-ಸಂಚಾಲಕರು
ಪ್ರಕಾಶನ ಪ್ರಕೋಷ್ಠ, ಬಿಜೆಪಿ

**ಪ್ರ**ಯಾಗರಾಜದಲ್ಲಿ ಈಗ ನಡೆಯುತ್ತಿರುವ ಕುಂಭ ಮೇಳ ಭಾರತಕ್ಕೆ ಸ್ವಾತಂತ್ರ್ಯಾನಂತರ ನಡೆದ ಅತ್ಯಂತ ದೊಡ್ಡ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮ. ಈ ಹಿಂದೆ ಅನೇಕ ಭಾರಿ ಕುಂಭ ಮೇಳಗಳು ನಡೆದಿದ್ದರೂ ಈ ಪರಿಯ ಭಕ್ತರು ಪಾಲ್ಗೊಂಡಿರುವ ಬಗ್ಗೆ ಯಾವುದೇ ನಿದರ್ಶನಗಳಿಲ್ಲ. ಇದರ ಜೊತೆಗೆ 2019ರಲ್ಲಿ ಯೋಗಿ ಆದಿತ್ಯನಾಥರ ಆಡಳಿತಾವಧಿಯಲ್ಲಿ ನಡೆದ ಅರ್ಧಕುಂಭ ಮೇಳಕ್ಕಿಂತಲೂ ಈ ಸಾರಿಯ ಸಂಖ್ಯೆ ಹೆಚ್ಚಾಗಿದೆ. ಜೊತೆಗ ಹಿಂದೂ ಭಕ್ತರನ್ನು ಅತ್ಯಂತ ಗೌರವ ಹಾಗು ಕಾಳಜಿಯಿಂದ ನಡೆಸಿಕೊಂಡ ಉತ್ಸವ ಇದಾಗಿದೆ. ಹಿಂದಿನ ಸರಕಾರಗಳ ಅವಧಿಯಲ್ಲಿ ನಡೆದ ಕುಂಭಮೇಳಕ್ಕಿಂತ, ಪ್ರಸ್ತುತ ಮೋದಿಜಿ ಹಾಗೂ ಯೋಗಿ ಆದಿತ್ಯನಾಥರ ಡಬಲ್ ಎಂಜಿನ್ ಆಡಳಿತದಲ್ಲಿ ನಡೆಯುತ್ತಿರುವ ಕುಂಭಮೇಳ ಸರ್ವ ರೀತಿಯಲ್ಲೂ ಭಿನ್ನವಾಗಿ ನಿಲ್ಲುತ್ತದೆ.





## 1954 ರ ಕುಂಭ, ಜವಾಹರ್ ಲಾಲ್ ನೆಹರು ಸ್ನಾನ

ಹಿಂದೂ ಆಚರಣೆ ನಂಬಿಕೆಗಳ ಬಗ್ಗೆ ತೀರ ಅಸಡ್ಡೆ ಹಾಗು ಅಗೌರವ ಹೊಂದಿದ್ದ ಅಂದಿನ ಪ್ರಧಾನಿ ಜವಹರಲಾಲ್ ನೆಹರು 1954ರ ಕುಂಭಮೇಳಕ್ಕೆ ವಿಶೇಷ ವ್ಯವಸ್ಥೆಗಳನ್ನೇನೂ ಮಾಡಿರಲಿಲ್ಲ. ಯಾವುದೇ ಪೂರ್ವ ಯೋಜನೆ, ಮುಂಜಾಗ್ರತೆ ಇಲ್ಲದೆಯೇ ಆಯೋಜಿತವಾದ 50 ಲಕ್ಷಕ್ಕೂ ಅಧಿಕ ಯಾತ್ರಿಗಳು ಭಾಗಿಯಾಗಿದ್ದ ಕುಂಭಮೇಳದಲ್ಲಿ ಕಾಲ್ತುಳಿತ ಉಂಟಾಗಿ ಸುಮಾರು 2 ಸಾವಿರ ಮಂದಿ ಸಾಯುತ್ತಾರೆ. ಸರಕಾರ ವಿಷಯ ಹೊರ ಜಗತ್ತಿಗೆ ತಿಳಿಯುವ ಮುಂಚೆಯೇ ಸತ್ತವರ ಶವ ಸಂಸ್ಕಾರ ಮಾಡಿ, ಸತ್ತವರು ನಿರ್ಗತಿಕ ಭಿಕ್ಷುಕರು ಅಂದು ಬಿಡುತ್ತದೆ. ಆದರೆ ಆ ಮೃತ ಶರೀರಗಳ ಮೇಲೆ ಚಿನ್ನಾಭರಣಗಳು ಇದ್ದವು ಎಂದು ಅಂತ್ಯಸಂಸ್ಕಾರಗಳನ್ನು ಮಾಡಿರುವ ಸರಕಾರಿ ಅಧಿಕಾರಿಗಳು, ಪೋಲೀಸರು ಹಾಗು ಜನರ ಹೇಳಿಕೆಗಳು ಅಂದಿನ ಸುದ್ದಿ ಪತ್ರಿಕೆ ಮತ್ತು ಸರಕಾರಿ ವರದಿಗಳಲ್ಲಿ ದಾಖಲಾಗಿದೆ. **(ಕಾಲ್ತುಳಿದಲ್ಲಿ ಪ್ರಸ್ತುತ ಸಾವೀಗೀಡಾದ ಇಬ್ಬರು ಹೆಣ್ಣು ಮಕ್ಕಳ ಆಭರಣಗಳು ಬೆಳಗಾವಿಗೆ ಸುರಕ್ಷಿತವಾಗಿ ತಲುಪಿದ್ದು ಇಲ್ಲಿ ಉಲ್ಲೇಖನೀಯ)**





## 2013ರ ಸಮಾಜವಾದಿ ಸರ್ಕಾರದ ಆಶ್ರಯದಲ್ಲಿ ನಡೆದ ಕುಂಭ

ಅಪ್ಪಟ ಹಿಂದೂ ವಿರೋಧಿಗೆ ಆಜಂ ಖಾನ್ ಉಸ್ತುವಾರಿಯಲ್ಲಿ ನಡೆದ 2013ರಲ್ಲಿ ಪ್ರಯಾಗರಾಜಿನಲ್ಲಿ ನಡೆದ ಕುಂಭಮೇಳ ಭ್ರಷ್ಟಾಚಾರದ ಕೂಪವಾಗಿತ್ತು ಎಂದು 2014ರ ಸಿ ಎ ಜಿ ವರದಿಯಲ್ಲಿ ಹೇಳಲಾಗಿದೆ. ಅಂದಿನ ಸಮಾಜವಾದಿ ಸರಕಾರ ಕುಂಭಕ್ಕೆ ಘೋಷಿಸಿದ್ದ 1200 ಕೋಟಿ ರೂಗಳ ಪೈಕಿ ಬಹುತೇಕ ಹಣ ಕುಂಭ ಮೇಳ ಮುಗಿದಮೇಲೂ ಬಿಡುಗಡೆ ಆಗಲಿಲ್ಲ. 2014ರಲ್ಲಿ ಬಂದ ಸಿಎಜಿ ವರದಿ ಪ್ರಕಾರ ಒಟ್ಟು ಅನುಮೋದನೆಗೊಂಡ ಕಾಮಗಾರಿಯ 59% ಕಾಮಗಾರಿಗಳು ಪೂರ್ಣಗೊಳ್ಳಲೇ ಇಲ್ಲ, ಕುಂಭ ಮುಗಿದ ಮೇಲೂ ಕುಂಭದ ಕೆಲಸಗಳು ನಡೆಯುತ್ತಿದ್ದವು. ಕುಂಭಮೇಳದ ಹೆಸರಿನಲ್ಲಿ 75%ದಷ್ಟು ಅನುಪಯುಕ್ತ ವಸ್ತುಗಳ ಖರೀದಿ ಆಯಿತು, ಮೇಳದಲ್ಲಿ ಅಸಮರ್ಪಕ ಪೋಲೀಸರ ನಿಯೋಜನೆಯಾಗಲಿಲ್ಲ, ರಕ್ಷಣಾ ಪಡೆಗಳ ನಿಯೋಜನೆ ಸಮರ್ಪಕವಾಗಿರಲಿಲ್ಲ. ತಾತ್ಕಾಲಿಕ ಸೇತುವೆಗಳ ನಿರ್ಮಾಣದಲ್ಲಿ ವಿಳಂಬ, ಇದೆಲ್ಲಕ್ಕಿಂತ ಮಿಗಿಲಾಗಿ ಫೆಬ್ರವರಿ 9ರ ಮೌನಿ ಅಮಾವಾಸ್ಯೆಯ ದಿನ ಪ್ರಯಾಗರಾಜ್ ರೈಲ್ವೇ ನಿಲ್ದಾಣದಲ್ಲಿ ನೂಕು ನುಗ್ಗಲಿನ ಕಾರಣ ನಡೆದ ಕಾಲ್ತುಳಿತದ ಕಾರಣ 36 ಜನರ ಸಾಯುತ್ತಾರೆ. ಇದರ ಬಗ್ಗೆ ಅಖಿಲೇಶ್ ಯಾದವ್ ಹಾರಿಕೆಯ ಉತ್ತರ ಕೊಟ್ಟಿದ್ದರು. ಈ ಎಲ್ಲಾ ಅವ್ಯವಸ್ಥೆಗೆ ಮೂಲ ಕಾರಣನಾಗಿದ್ದ ಆಜಂ ಖಾನ್ ವಿರುದ್ಧ ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

## ಯೋಗಿ ಸರ್ಕಾರದಲ್ಲಿ ಮಹಾ ಕುಂಭಮೇಳ

ಪ್ರಸ್ತುತ ನಡೆಯುತ್ತಿರುವ ಮಹಾ ಕುಂಭಮೇಳಕ್ಕಾಗಿ ಕೇಂದ್ರ ಹಾಗು ರಾಜ್ಯ ಸರಕಾರ ಜಂಟಿಯಾಗಿ ಕಳೆದ 5 ವರ್ಷಗಳಿಂದಲೇ ಯೋಜನೆಯ ತಯಾರಿ ಹಾಗೂ ಅನುಷ್ಟಾನ ಪ್ರಾರಂಭವಾಗಿ ಬಿಟ್ಟಿತ್ತು. ಕುಂಭ ಸ್ನಾನ ನಡೆಯುವ ಗಂಗಾ ಯಮುನ ಕಿನಾರೆಯ ಸುತ್ತ ಕೃತಕ ಸೇತುವೆಗಳ, ಸ್ನಾನ ಘಟ್ಟಗಳ ನಿರ್ಮಾಣ, ಸುರಕ್ಷತಾ ಪ್ರದೇಶಗಳ ನಿರ್ಧರಿಸುವಿಕೆ, ಕುಂಭ ನಗರಕ್ಕೆ ಸಂಪರ್ಕ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ಸರುಕ್ಷತಾ ವ್ಯವಸ್ಥೆ, ಕಾವಲು ಗೋಪುರಗಳ ನಿರ್ಮಾಣ, ಸಂಚಾರ ನಿರ್ವಹಣೆ ಸೇರಿದಂತೆ ಎಲ್ಲವನ್ನೂ ಅತ್ಯಂತ ಅಚ್ಚುಕಟ್ಟಾಗಿ ಮಾಡಲು ಸಂಪನ್ಮೂಲದ ಯೋಜನೆ, ನಿರ್ವಹಣೆ ಮಾಡುವ ಮತ್ತು ಮಾಡಿಸುವ ಅಧಿಕಾರಿಗಳ ತಂಡಗಳೆಲ್ಲವೂ ಅತ್ಯಂತ ಯೋಜಿತವಾಗಿ ನಡೆದಿರುವುದು ಸ್ಪಷ್ಟ.

## ಲಾಠಿ ಬಿಟ್ಟು ಸೀಟಿ ಹಿಡಿದ ಪೋಲೀಸರು



ಕಳೆದ ಹತ್ತು ವರ್ಷಗಳಿಂದ ಅಪರಾಧ ಜಗತ್ತಿಗೆ ಸಿಂಹ ಸ್ವಪ್ನವಗಿರುವ ಉತ್ತರಪ್ರದೇಶದ ಪೋಲೀಸರು ಕುಂಭಮೇಳದಲ್ಲಿ ಮಾತ್ರ ಹೃದಯಿಗಳಂತೆ ಯಾತ್ರಿಗಳೊಂದಿಗೆ ವರ್ತಿಸುತ್ತಿರುವುದು ನಿಜಕ್ಕೂ ಉತ್ತರ ಪ್ರದೇಶದ ಅಪರಾಧ ಜಗತ್ತಿಗೆ ನಡುಕ ಹುಟ್ಟಿಸಿದವರು ಇವರೇನಾ ಎನ್ನುವಂತಿದೆ. ಇಡೀ ಕುಂಭಮೇಳಕ್ಕೆ 50 ಸಾವಿರಕ್ಕೂ ಅಧಿಕ ಪೋಲೀಸರನ್ನು ನಿಯೋಜಿಸಲಾಗಿದೆ. ದಿನಕ್ಕೆ ಒಂದು ಕೋಟಿಗೂ ಅಧಿಕ ಜನರು ಬಂದು ಸೇರುವ ಪ್ರದೇಶಲ್ಲಿ ಕೈಯಲ್ಲಿ ಲಾಠಿ ಕೂಡ ಹಿಡಿಯದೆ, ತಮ್ಮ ಮಾತು ಸಂಬಂಧಗಳ ಮೂಲಕವೇ ಯಾತ್ರಿಗಳನ್ನು ನಿಭಾಯಿಸುತ್ತಿವ ಸಂಗತಿ ನಿಜಕ್ಕೂ ಶ್ಲಾಘನೀಯ. ಕಂಭಮೇಳದಲ್ಲಿ ಯಾತ್ರಿಗಳ ಮುಂದೆ ಪೋಲೀಸರು ಲಾಠಿ ಹಿಡಿಯದೇ ಸೀಟಿಯನ್ನಷ್ಟೇ ಹಿಡಿದು ವ್ಯವಹರಿಸಬೇಕು ಎಂದು ಮುಖ್ಯಮಂತ್ರಿ ಯೋಗಿಯವರು ಪೋಲೀಸರಿಗೆ ಕೊಟ್ಟ ಸೂಚನೆಯನ್ನು ಪಾಲಿಸುತ್ತಿರುವುದು ಕಾಣ ಸಿಗುತ್ತದೆ.



## ಮದುವಣಗಿತ್ತಿಯಂತೆ ಶೃಂಗಾರಗೊಂಡ ಕುಂಭ ನಗರಿ

ಕುಂಭಕ್ಕೆ ಇಡಿ ಪ್ರಯಾಗರಾಜ ನಗರವೇ ಮಧುವಣಗಿತ್ತಿಯಂತೆ ಶೃಂಗಾರಗೊಂಡಿದೆ, ಪ್ರಧಾನಿ ಮೋದಿಯವರು ಹೇಳುವಂತೆ, ವಿಕಾಸ್ ಭೀ, ವಿರಾಸತ್ ಭೀ ಅನ್ನುವಂತೆ ಆಧುನಿಕತೆಯ ತಂತ್ರಜ್ಞಾನದ ಜೊತೆಗೆ ಪ್ರಯಾಗರಾಜದ ಇತಿಹಾಸ ಎಲ್ಲವನ್ನು ಯಾತ್ರಿಕರಿಗೆ ಪರಿಚಯಿಸುವ ನಿಟ್ಟಿನಲ್ಲಿ ನಗರವನ್ನು ಸಜ್ಜುಗೊಳಿಸುವ ಕೆಲಸವಾಗಿದೆ. ನಗರದ ಉದ್ದಕ್ಕೂ ಆಧುನಿಕ ಸಿ.ಸಿ ಕ್ಯಾಮರಗಳು, ಸೂಚನಾ ಫಲಕಗಳು, ರಸ್ತೆಗಳ ಅಗಲೀಕರಣ, ಹೊಸ ರಸ್ತೆಗಳ ನಿರ್ಮಾಣ, ಪೋಲೀಸ್ ಚೌಕಿಗಳು, ರೈಲ್ವೇ ನಿಲ್ದಾಣಗಳ ಆಧುನೀಕರಣ, ಹೊರ ರಾಜ್ಯಗಳಿಂದ ಬರುವ ಯಾತ್ರಿಕರಿಗೆ ಸುಸಜ್ಜಿತ ವಾಹನ ನಿಲುಗಡೆ ಪ್ರದೇಶ, ರಸ್ತೆ ಪಕ್ಕದಲ್ಲಿ ಪ್ರಯಾಗರಾಜ್ ಮತ್ತು ಉತ್ತರ ಪ್ರದೇಶದ ಸಾಂಸ್ಕೃತಿಕ ಹಾಗು ಐತಿಹಾಸಿಕ ಕಥೆಗಳನ್ನು ಹೇಳುವ ಭಿತ್ತಿ ಚಿತ್ರಗಳ ಪ್ರದರ್ಶನ, ಹೀಗೆ ಎಲ್ಲಾ ರೀತಿಯಲ್ಲಿ ನಗರವನ್ನು ಸಜ್ಜುಗೊಳಿಸಿತು. ಇದರ ಜೊತೆಗೆ ನಗರದಲ್ಲಿ ಅಥಿತಿಗಳ ವಸತಿಗೆ ಬೇಕಾದ ಎಲ್ಲಾ ವ್ಯಸವ್ತೆಗಳನ್ನು ಮಾಡಲಾಯಿತು.

## ತ್ರಿವೇಣಿ ಸಂಗಮದಲ್ಲಿ ಯಾತ್ರಿಗಳ ಪ್ರವಾಹ



144 ವರ್ಷಗಳಿಗೊಮ್ಮೆ ಬರುವ ಈ ವಿಶೇಷ ಕುಂಭಕ್ಕೆ ಈ ಬಾರಿಯ ಪ್ರಚಾರವೂ ಅಧಿಕವಾಗಿತ್ತು. ಆಯೋಜನೆ ಮಾಡುವ ಸರಕಾರದ ಬದ್ಧತೆಯ ಬಗ್ಗೆ ವಿಶ್ವಾಸವಿತ್ತು. ಈ ವಿಶೇಷ ಸ್ನಾನದ ಸಂದರ್ಭದಲ್ಲಿ ದಿನಕ್ಕೆ 3 ರಿಂದ 6 ಕೋಟಿ ಜನ ಸೇರುವಾಗ, ಬರುವ ಭಕ್ತರ ಭಕ್ತಿಯ ಪರಾಕಾಷ್ಟೆಯ ಮುಂದೆ ಎಲ್ಲಾ ವ್ಯವಸ್ಥೆಗಳು ಏರು ಪೇರಾಗುವ ಸಧ್ಯತೆಯೇ ಹೆಚ್ಚು. ಸಂಗಮದಲ್ಲಿ ಹಿಂದಿನ ರಾತ್ರಿಯೇ ಬಂದು ಸೇರುವ ಭಕ್ತರು ಅಲ್ಲೇ ಸಿಕ್ಕ ಸಿಕ್ಕ ವಸ್ತುಗಳನ್ನು ಹಾಸಿ ಮಲಗಿ ಕಾಲ ಕಳೆಯುತ್ತಾರೆ.

ಸಂಗಮ ತಲುಪಲಾಗದ ಜನರು ರಸ್ತೆ ಬದಿಯಲ್ಲಿ ಮೇಲು ಸೇತುವೆಗಳ ಅಡಿಯಲ್ಲಿ ಮಲಗುತ್ತಾರೆ. ಹೀಗೆ ಅಸುರಕ್ಷಿತ ಜಾಗಗಳಲ್ಲಿ ತಂಗುವ ಜನರಿಗೆ ಸೂರನ್ನು ಒದಗಿಸಲು ಆಗದೇ ಇದ್ದರೂ ಅವರ ಸುರಕ್ಷತೆಗೆ ಅಂತಹ ಜಾಗದಲ್ಲಿ ಪೋಲೀಸರ ಕಾವಲನ್ನು ಸರಕಾರ ಹೆಚ್ಚಿಸಿತು. ಇನ್ನು ಸ್ನಾನ ಪ್ರದೇಶದಲ್ಲಿ ತಡೆಗೋಡೆಗಳು, ರಕ್ಷಣಾ ಸಿಬ್ಬಂಧಿಗಳನ್ನೂ ನಿಯೋಜಿಸಿ ಭಕ್ತರಿಗೆ ಸಾಧ್ಯವಾದಷ್ಟು ಉತ್ತಮ ವ್ಯವಸ್ಥೆಯನ್ನು ಕಲ್ಪಿಸಿತು.

## ಸ್ವಚ್ಛತಾ ಕಾರ್ಯ, ಸುರಕ್ಷ ಅಭಿಯಾನ



ದಿನವೊಂದಕ್ಕೆ ಸರಾಸರಿ ಒಂದೂವರೆ ಕೋಟಿ ಜನ ಬಂದು ಹೋಗುವ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯಕ್ಕೆ 10,000 ಸ್ವಚ್ಛತಾ ಸಿಬ್ಬಂಧಿಗಳನ್ನು ನಿಯೋಜಿಸಿದ ಯೋಗಿ ಸರಕಾರ, ಕುಂಭಕ್ಕೂ ಮುನ್ನ ಅವರಲ್ಲರನ್ನೂ ಕರೆದು ಒಂದು ವಿಶೇಷ ಔತಣ ಕೂಟ ಏರ್ಪಡಿಸಿ, ಕುಂಭ ನಡೆಯುವಷ್ಟೂ ಕಾಲ ಅವರ ಮಕ್ಕಳನ್ನು ನೋಡಿಕೊಳ್ಳಲು ಅಲ್ಲಿಯೇ ಒಂದು ವಿಶೇಷ ಶಾಲೆಯನ್ನು ತೆರೆದರು. ಯಾತ್ರಿಗಳು ಸಾಗುವ ರಸ್ತೆಗಳನ್ನು ಪ್ರತೀ 15 ನಿಷಕ್ಕೊಮ್ಮೆ ಸ್ವಚ್ಛಗೊಳಿಸಲಾಗುತ್ತಿದೆ. ಪ್ರತಿ ದಿನ ಸಂಜೆ ಸ್ನಾನ ಘಟ್ಟದಲ್ಲಿ ಯಾತ್ರಿಗಂಳಿದ ಉಂಟಾದ ತ್ಯಾಜವನ್ನು ಸಂಗ್ರಹಿಸಿ ಅದನ್ನು ಸ್ವಚ್ಛಗೊಳಿಸುತ್ತಿದ್ದಾರೆ. ಜಪಾನಿನ ಆಧುನಿಕ ತಂತ್ರಜ್ಞಾನ ಬಳಸಿ ನದಿ ನೀರನ್ನೂ ಸ್ವಚ್ಛಗೊಳಿಸಲಾಗುತ್ತಿದೆ.

ಯಾತ್ರಿಗಳ ಸುರಕ್ಷತೆಗೆ ಸ್ನಾನಘಟದ್ದಲ್ಲಿ ಎಐ ತಂತ್ರಜ್ಞಾನದ 2 ಸಾವಿರಕ್ಕೂ ಹೆಚ್ಚು ಸಿಸಿ ಕ್ಯಾಮರಗಳನ್ನು ಬಳಸಲಾಗುತ್ತಿದೆ, ಕುಂಭದಲ್ಲಿ ಕಳೆದು ಹೋದವರನ್ನು ಪತ್ತೆ ಹಚ್ಚಿ ನಿರಂತರವಾಗಿ ಅವರ ಸಂಭಂಧಿಗಳೊಂದಿಗೆ ಸೇರಿಸುವ ಕೆಲಸವಾಗುತ್ತಿದೆ. ಅಗ್ನಿ ಅವಘಡವನ್ನು ತಪ್ಪಿಸಲು ಎನ್ ಡಿ ಆರ್ ಎಫ್ ಸಿಬ್ಬಂಧಿಗಳು ಸನ್ನದ್ದ ಸ್ಥಿತಿಯಲ್ಲಿರುತ್ತಾರೆ. ಆ ಕಾರಣ ಜನವರಿ 19ರಂದು ನಡೆದ ಅಗ್ನಿ ದುರಂತಲ್ಲಿ ಯಾವುದೇ ಪ್ರಾಣ ಹಾನಿ ಆಗದೆ ಅಧಿಕಾರಿಗಳು ಅದನ್ನು ಸಮರ್ಥವಾಗಿ ನಿಭಾಯಿಸಿದರು. ಜನವರಿ 29ರಂದು ನಡೆದ ಕಾಲ್ತುಳಿತ ಪ್ರಕರಣ ಅತಿರೇಕಕ್ಕೆ ಹೋಗದಂತೆ ತಡೆಯುವಲ್ಲಿಯೂ ವ್ಯವಸ್ಥೆ ಯಶಸ್ವಿಯಾಯತು. ಕಾಲ್ತುಳಿತದಲ್ಲಿ ನಿಧನರಾದ 30 ಯಾತ್ರಿಗಳ ಪರಿವಾರದ ಜೊತೆಗೆ ಯೋಗಿ ಸರಕಾರ ಅತ್ಯಂತ ಸಂವೇದನಾಶೀಲವಾಗಿ ಸ್ಪಂದಿಸಿ, ಪರಿಹಾರವನ್ನೂ ಘೋಷಿಸಿ, ಪಾರ್ಥೀವಶರೀರಗಳನ್ನು ಅತ್ಯಂತ ಗೌರವಯುತವಾಗಿ ಅವರ ಕುಟುಂಬಿಕರಿಗೆ ತಲುಪಿಸುವ ಕೆಲಸವಾಯಿತು. ವಿಶೇಷ ಸಂದರ್ಭಗಳಲ್ಲಿ ಸ್ವತಃ ಮುಖ್ಯಂತ್ರಿಗಳೇ ವಾರ್ ರೂಮ್‌ನಲ್ಲಿ ಕುಳಿತು ಪರಿಸ್ಥಿತಿಯ ಅವಲೋಕನ ಮಾಡಿದ್ದು ಒಟ್ಟು ಕುಂಭ ವ್ಯವಸ್ಥೆಯನ್ನು ಸರಕಾರ ತೆಗೆದುಕೊಂಡ ಗಂಭೀರತೆಗೆ ಸಾಕ್ಷಿ ಎನ್ನಬಹುದು.

## ಭಾಗವಹಿಸುವಿಕೆಯಿಂದಲೇ ಭಕ್ತರ ಉತ್ತರ



ಕುಂಭ ಮೇಳ ಅದ್ದೂರಿಯಾಗಿ ಚಾಲನೆಗೊಂಡ ನಂತರ ಒಂದಷ್ಟು ಹಿಂದೂ ವಿರೋಧಿ ರಾಜಕಾರಣಿಗಳು ಕುಂಭದ ವಿಚಾರದಲ್ಲಿ ರಾಜಕಾರಣದ ಮಾತುಗಳನ್ನು ಆಡುತ್ತಲೇ ಇದ್ದಾರೆ, ರಾಜಕೀಯ ಪ್ರೇರಿತ ಮಾತುಗಳನ್ನಾಡಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಘಾಸಿಗೊಳಿಸುತ್ತಲೇ ಇದ್ದಾರೆ. ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕುಂಭದಲ್ಲಿ ಸ್ನಾನ ಮಾಡುವುದರಿಂದ ಬಡತನ ನಿರ್ಮೂಲನ ಆಗುವುದಿಲ್ಲ ಎಂದರು. ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ ಯಾದವ್ ಕುಂಭವನ್ನು ಫಾಲ್ತು ಕಿ ಕುಂಭ (ನಿರುಪಯುಕ್ತ ಕುಂಭ) ಅಂದರು. ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ಮಹಾ ಕುಂಭ ಮೇಳ ಅನ್ನುವಂತಾದ್ದೇ ಇಲ್ಲ, ಇದರ ಹೆಸರಿನಲ್ಲಿ ಸರಕಾರಿ ಹಣವನ್ನು ಪೋಲು ಮಾಡಲಾಗುತ್ತಿದೆ ಎಂದರು, ಇವೆಲ್ಲರಿಗೂ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದ ಪ.ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಹಾ ಕುಂಭವನ್ನು ಮೃತ್ಯು ಕುಂಭ ಅಂದರು. ಒಟ್ಟನಲ್ಲಿ ಯಥಾ ಪ್ರಕಾರ ರಾಜಕೀಯ ವಿರೋಧ ಹಾಗೂ ತುಷ್ಟೀಕರಣಕ್ಕಾಗಿ ಈ ರೀತಿಯ ಹೇಳಿಕೆಗಳ ಪ್ರವಾಹವೇ ಹರಿದುಬಂತು.

ಆದರೆ ಕುಂಭಮೇಳದಲ್ಲಿ ದೇಶದ 50 ಕೋಟಿಗೂ ಹೆಚ್ಚು ಸಂಖ್ಯೆಯ ಭಕ್ತಾದಿಗಳು ಭಾಗಿಯಾಗಿ ಈ ಮಹಾ ನಾಯಕರುಗಳಿಗೆಲ್ಲಾ ತಮ್ಮ ಭಾಗವಹಿಸುವಿಕೆಯಿಂದಲೇ ಉತ್ತರ ಕೊಟ್ಟಿದ್ದಾರೆ. ನಾನಾ ಕಾರಣದಿಂದ ಭಾಗವಹಿಸದೆ ಉಳಿದವರೂ ತಾವಿರುವಲ್ಲಿಂದಲೇ ಕುಂಭಮೇಳವನ್ನು ಬೆಂಬಲಿಸಿ ಹಿಂದೂ ಧಾರ್ಮಿಕ ಆಚರಣೆಯಲ್ಲಿ ತಮಗಿರುವ ನಂಬಿಕೆ ಮತ್ತು ಶ್ರದ್ಧೆಯನ್ನು ಸಾರಿ ಸಾರಿ ಹೇಳಿದ್ದಾರೆ. ಒಟ್ಟಿನಲ್ಲಿ ನೇರವಾಗಿ ಭಾಗವಹಿಸಿದವರೂ, ಪರೋಕ್ಷವಾಗಿ ಬೆಂಬಲಿಸಿದವರೂ ಸೇರಿದರೆ ದೇಶದ ಶೇಕಡಾ 50ರಷ್ಟಕ್ಕೂ ಹೆಚ್ಚು ಜನರನ್ನು ನಂಬಿಕೆ ಮತ್ತು ಶ್ರದ್ಧೆಯ ಮೂಲಕವೇ ಒಗ್ಗೂಡಿಸಿದ ಕುಂಭಮೇಳ ಹಿಂದೂಗಳ ಆತ್ಮಸ್ಥೈರ್ಯ ಹೆಚ್ಚಳಕ್ಕೆ ಕಾರಣವಾದರೆ, ಹಿಂದೂ ವಿರೋಧಿಗಳಿಗೆ ಒಂದಿಷ್ಟು ನಡುಕ ಉಂಟು ಮಾಡಿರುವುದನ್ನಂತೂ ಯಾರೂ ಅಲ್ಲಗೆಳೆಯುವಂತಿಲ್ಲ.



# ಹುಟ್ಟೂರಿನಲ್ಲೊಂದು ಉಲ್ಲೇಖನೀಯ ಕಾರ್ಯ





ಶ್ರೀ ಶ್ರೀಕಾಂತ ಎಂ. ಕುಸೂರ
ಬಿಜೆಪಿ ಕಾರ್ಯಕರ್ತರು

ಹುಟ್ಟೂರಿನ ಮಮತೆ ಇರುವ ವ್ಯಕ್ತಿಗೆ ಅಧಿಕಾರ ಸ್ಥಾನಮಾನ ಸಿಕ್ಕರೆ ಆ ಊರಿನ ಚಿತ್ರಣವೇ ಬದಲಾಗಬಹುದೆಂಬುಕ್ಕೆ ವಿಧಾನ ಪರಿಷತ್ ಸದಸ್ಯ ಶ್ರೀ ಎನ್. ರವಿಕುಮಾರ್‌ರವರೇ ಸ್ಪಷ್ಟ ಉದಾಹರಣೆ. ತಮ್ಮ ಹುಟ್ಟೂರಾದ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಒಂದು ಕುಗ್ರಾಮ ಹುಚ್ಚಂಗಿಪುರ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವನ್ನು ನೂತನವಾಗಿ ನಿರ್ಮಿಸಿ ಸಮಾಜಕ್ಕೆ ಅರ್ಪಣೆ ಮಾಡಿರುವ ಶ್ರೀ ರವಿಕುಮಾರ್‌ರವರ ಕಾರ್ಯ ಅನುಕರಣೀಯ. ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಎಬಿವಿಪಿ ಸಂಘಟನೆಯಲ್ಲಿ ಸುಮಾರು 25 ವರ್ಷಗಳ ಕಾಲ ಪೂರ್ಣಾವಧಿ ಕಾರ್ಯಕರ್ತರಾಗಿ, ಬಿಜೆಪಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಸಮಾಜದ ಬಗ್ಗೆ, ಶಿಕ್ಷಣ ಕ್ಷೇತ್ರದ ಸುಧಾರಣೆ ಬಗ್ಗೆ ತುಡಿತವಿರುವ ಇವರ ಕಾರ್ಯ ಸಾಮಾಜಿಕ ವಲಯದಲ್ಲಿ ಸಾಕಷ್ಟು ಮೆಚ್ಚುಗೆಗೆ ಒಳಗಾಗಿದೆ.

ಜಿಲ್ಲಾ ಕೇಂದ್ರದಿಂದ ಸುಮಾರು 40 ಕೀ.ಮೀ ದೂರದಲ್ಲಿರುವ ಈ ಗ್ರಾಮದಲ್ಲಿನ ಹಳೆಯ ಸರ್ಕಾರಿ ಶಾಲಾ ಕಟ್ಟಡ ಶಿಥಿಲಾವಸ್ಥೆಗೆ ತಲುಪಿತ್ತು, ಇದೇ ಗ್ರಾಮದಲ್ಲಿ ಜನಿಸಿದ ಎನ್. ರವಿಕುಮಾರ್ ಅವರು ತಾನು ಕಷ್ಟಪಟ್ಟಿದ ದಿನಗಳನ್ನು ಮೆಲಕು ಹಾಕಿ ಈಗಿನ ಮಕ್ಕಳಿಗೆ ಆ ಕಷ್ಟಗಳು ಬಾರದಿರಲಿ ಎಂಬ ದೃಷ್ಟಿಯಿಂದ ಹಳೆಯ ಶಾಲೆಯನ್ನು ಕೆಡವಿ, ಅದೇ ಸ್ಥಳದಲ್ಲಿ ಒಂದು ಸುಸಜ್ಜಿತ, ಆಧುನಿಕ ಸೌಲಭ್ಯಗಳುಳ್ಳ ಒಂದು ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣ ಮಾಡಿದ್ದಾರೆ.

ಸುಮಾರು 3.5 ಕೋ.ರೂ. ವೆಚ್ಚದಲ್ಲಿ ಪರಿಷತ್ ಸದಸ್ಯ ಶ್ರೀ ರವಿಕುಮಾರ್ ಅವರ ಅನುದಾನ ಮತ್ತು ಕೇಂದ್ರ ಹಣಕಾಸು ಖಾತೆ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ರಾಜ್ಯಸಭಾ ಸದಸ್ಯರುಗಳಾದ ಶ್ರೀ ಲೇಹರ್ ಸಿಂಗ್ ಸಿರೋಯಾ, ಶ್ರೀ ಕೆ ನಾರಾಯಣ, ಶ್ರೀ ಈರಣ್ಣ ಕಡಾಡಿ, ಶ್ರೀ ಕೆ.ಸಿ. ರಾಮಮೂರ್ತಿ ಸೇರಿದಂತೆ ಇತರೆ ಶಾಸಕರ ಹಾಗೂ ಸರ್ಕಾರದ ವಿವಿಧ ಅನುದಾನದಲ್ಲಿ ಹಾಗೂ ವಿವಿಧ ಖಾಸಗಿ ಸಾಫ್ಟ್‌ವೇರ್ ಕಂಪೆನಿಯ ಸಿ.ಎಸ್.ಆರ್ ನಿಧಿಯಿಂದ ಸುಮಾರು 20 ಸಾವಿರ ಚದರ ಅಡಿಯಲ್ಲಿ ನಿರ್ಮಿಸಲಾದ ಈ ಶಾಲೆಯಲ್ಲಿ ಈಗ ಸುಮಾರು 16 ಸುಸಜ್ಜಿತ ಕೊಠಡಿಗಳಿವೆ.

ಹೊರಾಂಗಣ ಕಾರ್ಯಕ್ರಮಗಳಿಗಾಗಿ ಕುವೆಂಪು ಬಯಲು ರಂಗ ಮಂದಿರ, ಒಳಾಂಗಣ ಕಾರ್ಯಕ್ರಮಗಳಿಗೆ ಡಾ. ಬಿ.ಆರ್. ಅಂಬೇಡ್ಕರ ಸಭಾಂಗಣ ನಿರ್ಮಿಸಲಾಗಿದೆ. ಮಕ್ಕಳಿಗೆ ಇ-ಲರ್ನಿಂಗ್‌ಗಾಗಿ ಡಿಜಿಟಲ್ ಮಾಧ್ಯಮ ಮುಖಾಂತರ ಕಲಿಯಲು ಸ್ವಾಮಿ ವಿವೇಕಾನಂದ ಸ್ಮಾರ್ಟ್ ಕ್ಲಾಸ್ ನಿರ್ಮಿಸಲಾಗಿದೆ. ಶಾಲೆಯಲ್ಲಿ ಪ್ರಯೋಗಾಲಯ, ಪುಸ್ತಕ ಮತ್ತು ಗಣಕಯಂತ್ರ ಗ್ರಂಥಾಲಯಕ್ಕೂ ಕೂಡ ಪ್ರತ್ಯೇಕ ಕೊಠಡಿ ನಿರ್ಮಾಣ ಮಾಡಲಾಗಿದೆ. ಶುದ್ಧ ಕುಡಿಯುವ ನೀರಿಗಾಗಿ ಬೋರ್‌ವೆಲ್ ಕೊರೆಸಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ, ಆಟದ ಮೈದಾನ, ಕಟ್ಟಡದ ಮೇಲ್ಭಾಗದಿಂದ ಮಳೆ ನೀರನ್ನು ಪಕ್ಕದ ಕೊಳವೆ ಬಾವಿಗೆ ಮರುಪೂರಣ ಮಾಡುವ ವ್ಯವಸ್ಥೆ ಕೂಡ ಮಾಡಲಾಗಿದೆ. ಈ ಶಾಲೆಯಲ್ಲಿ ಹೈಟೆಕ್ ಶಿಕ್ಷಣದ ಮೂಲಕ ಸುಮಾರು 300 ಕ್ಕೂ ಹೆಚ್ಚು ಮಕ್ಕಳು ಗುಣಮಟ್ಟದ ಶಿಕ್ಷಣ, ಸ್ಮಾರ್ಟ್ ಕಲಿಕಾ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

### ತಾಯಿಯ ಕನಸನ್ನು ನನಸು ಮಾಡಿದ ಸಂತಸ



ವ್ಯಕ್ತಿತ್ವದ ನಿರ್ಮಾಣವನ್ನು ಮಾಡುವುದೇ ನಿಜವಾದ ಶಿಕ್ಷಣ. ನನ್ನ ತಾಯಿ ಬದುಕಿದ್ದ ದಿನಗಳಲ್ಲಿ ಹುಚ್ಚಂಗಿಪುರದ ಊರಿಗಾಗಿ ಶಾಲೆ ಮತ್ತು ಆಸ್ಪತ್ರೆ ನಿರ್ಮಾಣ ಮಾಡುವುದರ ಜೊತೆಗೆ ಊರಿಗೆ ಉಪಕಾರ ಮಾಡಲು ನನಗೆ ಸಲಹೆ ನೀಡಿದ್ದರು. ಹಾಗಾಗಿ ಪರಿಷತ್ ಸದಸ್ಯನಾದ ಮೇಲೆ ನನ್ನ ಹಾಗೂ ವಿವಿಧ ಶಾಸಕರ, ಸಂಸದರ ನಿಧಿಯಿಂದ ಈ ಶಾಲೆಯನ್ನು ನಿರ್ಮಿಸಿ ನನ್ನ ತಾಯಿಯ ಸಂಕಲ್ಪವನ್ನು ಈಡೇರಿಸಿರುವುದು ಬಹಳ ಸಂತಸ ಸಂಗತಿಯಾಗಿದೆ.

**– ಎನ್ ರವಿಕುಮಾರ್.** ವಿಧಾನಪರಿಷತ್ ಸದಸ್ಯರು

ಅದ್ಭುತ ಕೊಡುಗೆ. 3.5 ಕೋಟಿ ವೆಚ್ಚದಲ್ಲಿ ಕರ್ನಾಟಕ ರಾಜ್ಯದಲ್ಲಿಯೇ ಎರಡನೇ ಸ್ಥಾನ ಪಡೆದಿರುವ ನೂತನ ಕಟ್ಟಡವನ್ನು ನಿರ್ಮಾಣ ಮಾಡಿ ಹುಟ್ಟಿದ ಊರಿಗೆ ದ್ಭುತ ಕೊಡುಗೆ ನೀಡಿದ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಕಾರ್ಯ ಶ್ಲಾಘನೀಯ.

**– ಮಧುಬಂಗಾರಪ್ಪ, ಶಿಕ್ಷಣ ಸಚಿವರು**

# ಬಿಜೆಪಿ ನೂತನ ಜಿಲ್ಲಾಧ್ಯಕ್ಷರಿಗೆ ಅಭಿನಂದನೆಗಳು



**ಶ್ರೀ ಎಲ್. ನಾಗೇಂದ್ರ**
ಮೈಸೂರು ನಗರ



**ಶ್ರೀ ಸಿ.ಎಸ್. ನಿರಂಜನಕುಮಾರ್**
ಚಾಮರಾಜನಗರ



**ಶ್ರೀ ಸತೀಶ್ ಕುಂಪಲ**
ದಕ್ಷಿಣಕನ್ನಡ



**ಶ್ರೀ ದೇವರಾಜ ಶೆಟ್ಟಿ**
ಚಿಕ್ಕಮಗಳೂರು



**ಶ್ರೀ ಎನ್.ಕೆ. ಜಗದೀಶ್**
ಶಿವಮೊಗ್ಗ



**ಶ್ರೀ ಎನ್.ಎಸ್. ಹೆಗಡೆ**
ಉತ್ತರಕನ್ನಡ



**ಶ್ರೀ ತಿಪ್ಪಣ್ಣ ಮಜ್ಜಗಿ**
ಹುಬ್ಬಳ್ಳಿ-ಧಾರವಾಡ



**ಶ್ರೀ ನಿಂಗಪ್ಪ ಡಿ. ಸುತಗಟ್ಟಿ**
ಧಾರವಾಡ ಗ್ರಾಮಾಂತರ



**ಶ್ರೀಮತಿ ಗೀತಾ ಸುತಾರ್**
ಬೆಳಗಾವಿ ನಗರ



**ಶ್ರೀ ಸುಭಾಷ್ ದುಂಡಪ್ಪ ಪಾಟೀಲ್**
ಬೆಳಗಾವಿ ಗ್ರಾಮಾಂತರ



**ಶ್ರೀ ಸತೀಶ್ ಅಪ್ಪಾಜಿಗೋಳ್**
ಚಿಕ್ಕೋಡಿ



**ಶ್ರೀ ಸೋಮನಾಥ್ ಪಾಟೀಲ್**
ಬೀದರ್



**ಶ್ರೀ ಚಂದ್ರಕಾಂತ್ ಬಿ. ಪಾಟೀಲ್**
ಕಲಬುರಗಿ ನಗರ



**ಶ್ರೀ ಅಶೋಕ್ ಬಗಲಿ**
ಕಲಬುರಗಿ ಗ್ರಾಮಾಂತರ



**ಶ್ರೀ ಬಸವರಾಜಪ್ಪಗೌಡ ವಿ.**
ಯಾದಗಿರಿ



**ಶ್ರೀ ದಡೇಸಗೂರು ಬಸವರಾಜ್**
ಕೊಪ್ಪಳ



**ಶ್ರೀ ಅನಿಲ್ ಕುಮಾರ್ ಮೋಕಾ**
ಬಳ್ಳಾರಿ



**ಶ್ರೀ ಸಂಜೀವ್ ರೆಡ್ಡಿ**
ವಿಜಯನಗರ




**ಶ್ರೀ ಓಂ ಶಕ್ತಿ ಛಲಪತಿ**
ಕೋಲಾರ



**ಶ್ರೀ ಎಸ್. ಹರೀಶ್**
ಬೆಂಗಳೂರು ಉತ್ತರ



**ಶ್ರೀ ಎ.ಆರ್. ಸಪ್ತಗಿರಿ ಗೌಡ**
ಬೆಂಗಳೂರು ಕೇಂದ್ರ



**ಶ್ರೀ ಸಿ.ಕೆ. ರಾಮಮೂರ್ತಿ**
ಬೆಂಗಳೂರು ದಕ್ಷಿಣ



# ಬಾಲ್ಯದಿಂದಲೇ ಸ್ವಯಂಸೇವಕರಾಗಿದ್ದ ಶ್ರೀ ಉಮನಾಥ್ ಶೆಟ್ಟಿಗಾರ್ ಬೋಳಾರ್



ಗುರುಪ್ರಸಾದ್ ಬೋಳಾರ್
ಕಾರ್ಯಕರ್ತರು

ಶ್ರೀ ಉಮನಾಥ್ ಶೆಟ್ಟಿಗಾರ್ ಬೋಳಾರ್ ಇವರು ಬಾಲ್ಯದಿಂದಲೇ ಸಂಘದ ಸ್ವಯಂ ಸೇವಕರು, ಉಮ್ಮಣ್ಣನೆಂದು ಚಿರಪರಿಚಿತರಾಗಿರುವ ಉಮಾನಾಥ್ ಹಾಗೂ ಅವರ ಸಹೋದರರೆಲ್ಲರೂ ಸಂಘದ ಸ್ವಯಂ ಸೇವಕ ಅವರ ಮನೆ ಸಂಘದ ಮನೆಯಾಗಿತ್ತು. ಅನೇಕ ಸಂಘದ ಪ್ರಚಾರಕರು ಅವರ ಮನೆಯಲ್ಲಿ ಆಶ್ರಯ ಪಡೆದಿದ್ದರು. ತನ್ನ ಕಾಲೇಜು ವಿದ್ಯಾರ್ಥಿ ಜೀವನದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನನಗರ ಸ್ಥರದ ಜವಾಬ್ದಾರಿಯನ್ನು ಹೊಂದಿದ್ದರು. ಆ ನಗರ ಸ್ಥರದ ಜವಾಬ್ದಾರಿಯನ್ನು ಹೊಂದಿದ್ದರು. ಆ ಸಮಯದಲ್ಲಿ ಎ.ಬಿ.ವಿ.ಪಿ. ಯ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದ ಶ್ರೀ ಹೆಚ್.ಎನ್. ಅನಂತಕುಮಾರ್ ಇವರೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಿದ್ದರು.

ಸಂಘದ ಶಾಖೆಯ ಮುಖ್ಯ ಶಿಕ್ಷಕರಾಗಿ ಮುಂದಿನ ದಿನಗಳಲ್ಲಿ ಭಾಗ ಕಾರ್ಯ ವಾಹರಾಗಿ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ಮಂಗಳೂರು ಮಾಜಿ ಲೋಕಸಭಾ ಸದಸ್ಯರು, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷರು ಆಗಿರುವ ಶ್ರೀ ನಳಿನ್‌ಕುಮಾರ್ ಕಟೀಲ್ ಆ ಭಾಗದ ಪ್ರಚಾರಕರಾಗಿದ್ದರು.

ರಾಮ ಜನ್ಮಭೂಮಿಯ ಪ್ರಮುಖ ಹೋರಾಟಗಳಾದ ಶ್ರೀರಾಮ ಶಿಲಾ ಪೂಜನ, ಶ್ರೀ ರಾಮ ಜಪಯಜ್ಞ, ಶ್ರೀರಾಮ ಪಾದುಕಾ ಪೂಜನ, ಶ್ರೀರಾಮ ಜ್ಯೋತಿ ಮುಂತಾದ ಕಾರ್ಯಕ್ರಮಗಳಲ್ಲಿ ಮುಂಚೂಣಿ ಕಾರ್ಯಕರ್ತರಾಗಿ ಜವಾಬ್ದಾರಿ ನಿರ್ವಹಿಸಿದ್ದರು. ಇವರ ಕಾರ್ಯ ವೈಖರಿಯು ಕಂಡು ಹಿರಿಯರು ಮುಂದಿನ ದಿನಗಳಲ್ಲಿ ಶ್ರೀ ಉಮಾನಾಥರವರನ್ನು ಮಂಗಳಾದೇವಿ ನಗರದ ಪ್ರಪ್ರಥಮ ಕಾರ್ಯವಾಹರನ್ನಾಗಿ ನಿಯುಕ್ತಿಗೊಳಿಸಿದರು. ಆ ಸಂದರ್ಭದಲ್ಲಿ ಈಗಿನ ಸಹ ಸರಕಾರ್ಯವಾಹರಾಗಿರುವ ಶ್ರೀ ಸಿ.ಆರ್. ಮುಕುಂದ್ ಮಹಾನಗರ ಪ್ರಚಾರಕರಾಗಿದ್ದರು. ಶ್ರೀ ಮುಕುಂದ್ ಜೀ ಹಾಗೂ ಉಮಾನಾಥರು ಆತ್ಮೀಯ ಸಂಬಂಧ ಹೊಂದಿದ್ದರು. ಮಂಗಳೂರಿಗೆ ಆಗಿನ ಸರಸಂಘಚಾಲಕರಾದ ಶ್ರೀ ಬಾಳಾ ಸಾಹೇಬ್ ದೇವರಸ್ ಮಂಗಳೂರಿಗೆ ಭೇಟಿ ಸಂದರ್ಭದಲ್ಲಿ ನಡೆದ ಬೃಹತ್ ಪಥಸಂಚಲನದಲ್ಲಿ ಮಂಗಳಾದೇವಿಯಿಂದ ಹೊರಟ ಸಂಚಲನದ ಎಲ್ಲಾ ವ್ಯವಸ್ಥೆಗಳನ್ನು ಉಮಾನಾಥ್ ನಿರ್ವಹಿಸಿದ್ದರು. 1991 ರಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಇಡೀ ಮಂಗಳಾದೇವಿ ನಗರದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಭಾಜಪ ಮೊದಲ ಬಾರಿಗೆ ವಿಜಯಿಯಾಗಿತ್ತು. ಮಂಗಳೂರಿನಲ್ಲಿ ನಡೆದ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಮುಂಚೂಣಿಯಲ್ಲಿ ನಿಂತು ಕಾರ್ಯ ನಿರ್ವಹಿಸಿದ್ದರು.

1992ರ ಡಿಸೆಂಬರ್ 6ರ ಕರಸೇವೆಯಲ್ಲಿ ತಾನು ಭಾಗವಹಿಸುವುದರೊಂದಿಗೆ ಆ ಭಾಗದ ಅನೇಕ ತರುಣರು ಕರಸೇವೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರಣೆ ನೀಡಿದರು. ಶ್ರೀ ಉಮಾನಾಥ್ ಅನೇಕ ತರುಣರನ್ನು ರಕ್ತದಾನ ಮಾಡುವಂತೆ ಪ್ರೇರಣೆ ನೀಡಿದರು. ಉಮಾನಾಥ್ ಅನೇಕ ವರ್ಷಗಳ ಕಾಲ ಸಂಘದ ಮಂಗಳಾದೇವಿ ನಗರ ಕಾರ್ಯವಾಹರಾಗಿ ಜವಾಬ್ದಾರಿ ನಿರ್ವಹಿಸಿ ಮುಂದಿನ ದಿನಗಳಲ್ಲಿ ಹಿರಿಯರ ಅಪೇಕ್ಷೆಯಂತೆ ಬಿಜೆಪಿ ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸುವುದರ ಮೂಲಕ ಕಾರ್ಯಾಲಯದ ನಿತ್ಯ ದಿನಚರಿಯಲ್ಲಿ ಅನೇಕ ಬದಲಾವಣೆಯನ್ನು ತಂದಿದ್ದರು. ಯಾವುದೇ ಸ್ಥಾನಮಾನ ಪ್ರಚಾರವನ್ನು ಬಯಸದ ಶ್ರೀ ಉಮಾನಾಥ್ ಅನೇಕ್ ಕಾರ್ಯಕರ್ತರನ್ನು ಬೆಳೆಸಿದ್ದರು. ಇವರ ಗರಡಿಯಲ್ಲಿ ಪಳಗಿದ ಕಾರ್ಯಕರ್ತರಲ್ಲಿ ಒಬ್ಬರು ಮಹಾನಗರ ಪಾಲಿಕೆ ಸದಸ್ಯರಾಗಿ, ಯಶಸ್ವಿ ಮೇಯರ್ ಆಗಿ ಹೆಸರುವಾಸಿ ಆಗಿದ್ದಾರೆ. ನಿಷ್ಕಳಂಕ, ನಿಸ್ವಾರ್ಥ, ನಿರ್ಮಲ ಮನಸ್ಸಿನ ಶ್ರೀ ಉಮಾನಾಥ್ ರವರು ಮೃದು ಹಾಗೂ ಮಿತ ಭಾಷಿಯಾಗಿದ್ದರು. ಸದಾ ನಗುನಗುತ್ತಾ ಭೇಟಿ ನೀಡುವ ಕಾರ್ಯಕರ್ತರನ್ನು ಮಾತನಾಡಿಸುತ್ತಿದ್ದರು. ಅನೇಕ ಹಿರಿಯ ಕಿರಿಯ ಕಾರ್ಯಕರ್ತರ ಸಂಪರ್ಕ ಸೇತುವಾಗಿದ್ದ ಉಮಾನಾಥ್ ಒಬ್ಬ ಅಜಾತ ಶತೃವಾಗಿದ್ದರು.

ಎಬಿವಿಪಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಬಿಜೆಪಿಯಲ್ಲಿ ಅನೇಕ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ ಉಮಾನಾಥರು ಅಲ್ಪಕಾಲದ ಅನಾರೋಗ್ಯದ ಕಾರಣವಾಗಿ 17.01.2025ರಂದು ನಿಧನರಾದರು. ಅಗಲಿದ ಆತ್ಮಕ್ಕೆ ಭಗವಂತರು ಚಿರಶಾಂತಿಯನ್ನು ಕರುಣಿಸಲಿ.

# ಮಾಸದ ಮಾಧುರ್ಯ 94ನೇ ಕಾರ್ಯಕ್ರಮದಲ್ಲಿ ದಕ್ಷ ಯಜ್ಞ



ಜಗನ್ನಾಥ ಬಳಗದ 'ಮಾಸದ ಮಾಧುರ್ಯ' ಕಾರ್ಯಕ್ರಮಗಳು ಒಂದರಿಂದ ತೊಂಬತ್ನಾಲ್ಕು ಸಂಖ್ಯೆಗೆ ತೆಗೆದುಕೊಂಡ ಸಮಯ ಹತ್ತು ವರ್ಷ ಐದು ತಿಂಗಳು. ಇದರಲ್ಲಿ ಇಪ್ಪತ್ತೊಂಬತ್ತು ತಿಂಗಳು ಕರೋನಾ ಕಾರಣದಿಂದ ನಿಲ್ಲಿಸಲಾಗಿತ್ತು. ಈ ಕಾರಣ ಹೊರತುಪಡಿಸಿ ಪ್ರತಿ ತಿಂಗಳ ಮೊದಲ ಭಾನುವಾರ ಒಳ್ಳೊಳ್ಳೆ ಕಾರ್ಯಕ್ರಮಗಳನ್ನು ಕೊಡುತ್ತಾ ಬಂದಿದ್ದು ಕಲಾಸಕ್ತರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿದೆ.

ದಿ 02-02-2025 ರಂದು ಭಾನುವಾರ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಬಂಗಾರು ಹನುಮಂತು ಅವರ ನೇತೃತ್ವದಲ್ಲಿ ಜಗನ್ನಾಥ ಬಳಗದ ಸಹಕಾರ, ಶ್ರೀ ಕಲ್ಲೇಶ್ವರ ಯಕ್ಷಗಾನ ಸಂಘ (ರಿ) ಅರಳಗುಪ್ಪೆ ಗ್ರಾಮ, ತಿಪಟೂರು ತಾಲೂಕು, ಇವರ ಆಸಕ್ತಿಯಿಂದ 'ದಕ್ಷಯಜ್ಞ' ಪ್ರಸಂಗವನ್ನು ಮೂಡಲಪಾಯ ಯಕ್ಷಗಾನ ಪ್ರಕಾರದ ಮುಖಾಂತರ ಶ್ರೀ ಎ.ಸಿ. ಯೋಗಿಶ್ವರ ಅವರ ಮುಂದಾಳತ್ವದಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ದಕ್ಷ ಮಹಾರಾಜನ ಪಾತ್ರದಲ್ಲಿ ಶ್ರೀ ಎ.ಜಿ. ಸೋಮೇಶೇಖರ್, ಈಶ್ವರನ ಪಾತ್ರದಲ್ಲಿ ಶ್ರೀ ಎ.ವಿ. ಮಂಜುನಾಥ್, ಸಾರಥಿ ಪಾತ್ರದಲ್ಲಿ ಶ್ರೀ ಎ.ಟಿ. ಶಂಕರಲಿಂಗಯ್ಯ, ವೀರಭದ್ರನ ಪಾತ್ರದಲ್ಲಿ ಶ್ರೀ ಎ.ಎಂ. ಪುನೀತಕುಮಾರ ಪ್ರಸಂಗಕ್ಕೆ ಹೆಚ್ಚಿನ ಕಳೆಕಟ್ಟಿದರು.

ಹಿಮ್ಮೇಳದಲ್ಲಿ ಭಾಗವತರಾಗಿ ಆಗಮಿಸಿದ ಕರ್ನಾಟಕ ಯಕ್ಷಗಾನ ಕಲಾ ಅಕಾಡೆಮಿಯ ಸದಸ್ಯರಾದ ಶ್ರೀ ಎ.ಆರ್. ಪುಟ್ಟಸ್ವಾಮಿಯವರು ಅತ್ಯಂತ ಸುಸ್ಪಷ್ಟವಾಗಿ, ಶೃತಿ ಲಯದಲ್ಲಿ ಹಾಡಿದ್ದು ಪ್ರಶಂಸನೀಯ. ಮೃದಂಗದಲ್ಲಿ ಶ್ರೀ ಎ.ಸಿ. ಯೋಗೀಶ ಇವರೊಟ್ಟಿಗೆ ತಾಳದಲ್ಲಿ ಶ್ರೀ ಎ.ಸಿ. ವಸಂತಕುಮಾರ್, ಶ್ರೀ ಎಸ್. ವಿರುಪಾಕ್ಷಯ್ಯ, ಹಿಮ್ಮೇಳದಲ್ಲಿ ಶ್ರೀ ಎ.ಎಚ್. ತಿಲಕ್ ಉತ್ತಮವಾಗಿ ಸಾಥ್‌ಕೊಟ್ಟರು.

ಭಾರತಮಾತೆಗೆ ಪುಷ್ಪಾರ್ಚನೆಯನ್ನು ಶ್ರೀ ಬಂಗಾರು ಹನುಮಂತು ಅವರು ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ, ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೇಕಲ್ಲು, ಶ್ರೀ ಎ.ಸಿ. ಯೋಗಿಶ್ವರ ಹಾಗೂ ಅರಳಗುಪ್ಪೆ ಗ್ರಾಮದ 90 ವರ್ಷ ಪ್ರಾಯದ ಕೇಂದ್ರ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಶ್ರೀ ಎ. ನಂಜಪ್ಪ ಅವರುಗಳು ನೆರವೇರಿಸಿದರು. ನಂತರದಲ್ಲಿ ಮಾತನಾಡಿದ ಮುಖ್ಯ ಅತಿಥಿ ಶ್ರೀ ಬಂಗಾರು ಹನುಮಂತು ಅವರು ನನಗೆ ಇಂಥಹ ಹಳ್ಳಿಯ ಪ್ರತಿಭೆಗಳೊಡನೆ ಒಂದೂವರೆ ಘಂಟೆ ಕಳೆಯುವ ಅವಕಾಶ ಬಹಳ ಸಂತಸದ ಸಂಗತಿ ಎಂದು ಹೇಳಿದರು.

ಕಾರ್ಯಕ್ರಮದ ಸಮಾರೋಪದಲ್ಲಿ ಭಾಗವತರಾದ ಶ್ರೀ ಎ.ಆರ್. ಪುಟ್ಟಸ್ವಾಮಿಯವರಿಗೆ ಹಾಗೂ ಹಿರಿಯ ಚೇತನ ಶ್ರೀ ಎ. ನಂಜಪ್ಪ ಅವರಿಗೆ ಮುಖ್ಯ ಅತಿಥಿಗಳು ಸನ್ಮಾನಿಸಿದರು ಹಾಗೆಯೇ ಎಲ್ಲಾ ಕಲಾವಿದರಿಗೂ ಅಭಿನಂದನಾ ಪತ್ರವನ್ನು ನೀಡಿ ಸನ್ಮಾನಿಸಲಾಯಿತು.



# ಏಕತೆಯ ಮಹಾಕುಂಭ

## ಮನ್ ಕಿ ಬಾತ್

## ದ್ವೇಷಮುಕ್ತ ಸಮಾಜ ನಿರ್ಮಾಣಕ್ಕೆ ಪ್ರಧಾನಿ ಮೋದಿ ಸಲಹೆ

**ಜಾ**ಗತಿಕವಾಗಿ ಪ್ರಸಿದ್ಧ ಮಹಾ ಕುಂಭ ಮೇಳವು ಪ್ರತಿಯೋರ್ವ ಭಾರತೀಯನ ಪಾಲಿಗೆ ಹೆಮ್ಮೆಯ ವಿಚಾರ. ದೇಶದ ಯುವಶಕ್ತಿ ಈ ಬಾರಿ ಅತ್ಯಧಿಕ ಸಂಖ್ಯೆಯಲ್ಲಿ ಕುಂಭ ಮೇಳದಲ್ಲಿ ಪಾಲ್ಗೊಂಡಿರುವುದು ಸಂತಸದ ವಿಚಾರ. ಅಂತೆಯೇ, ಅಯೋಧ್ಯೆಯಲ್ಲಿ ರಾಮ ಲಲಾ ವಿಗ್ರಹದ ಪ್ರಾಣಪ್ರತಿಷ್ಠೆಯು ಭಾರತದ ಸಾಂಸ್ಕೃತಿಕ ಅಸ್ಮಿತೆಯ ಮರುಸ್ಥಾಪನೆ ಯಾಗಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ತಮ್ಮ 'ಮನ್ ಕಿ ಬಾತ್'ನಲ್ಲಿ ವಿಶ್ಲೇಷಿಸಿದರು.

ರಾಮಲಲಾ ವಿಗ್ರಹದ ಪ್ರಾಣಪ್ರತಿಷ್ಠೆಯ ದ್ವಾದಶಿಯು ಭಾರತದ ಸಾಂಸ್ಕೃತಿಕ ಅಸ್ಮಿತೆಯ ಮರು ಅನುಸ್ಥಾನವಾಗಿದೆ. ಹಾಗಾಗಿ ಪೌಷ ಶುಕ್ಲ ದ್ವಾದಶಿಯು ಒಂದು ವಿಧದಲ್ಲಿ ಪ್ರತಿಷ್ಠಾ ದ್ವಾದಶಿ ದಿನವೂ ಆಗಿದೆ ಎಂದು ಅವರು ಹೇಳಿದರು.

**ವಿವಿಧತೆಯಲ್ಲಿ ಏಕತೆ:** ಪ್ರಯಾಗರಾಜ್‌ನಲ್ಲಿ ಸಂಪನ್ನಗೊಂಡಿರುವ ಮಹಾಕುಂಭ ಮೇಳವು ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸಿದೆ. ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಮಹಾಕುಂಭ ಮೇಳದಲ್ಲಿ ಯಾವುದೇ ಜಾತಿವಾದ, ತಾರತಮ್ಯಕ್ಕೆ ಎಡೆಯಿಲ್ಲ ಎಂಬ ಸಂದೇಶ ನೀಡಿದೆ. ಯುವಪೀಳಿಗೆ ತಮ್ಮ ನಾಗರೀಕತೆಯನ್ನು ಆತ್ಮೀಯವಾಗಿ ಮತ್ತು ಹೆಮ್ಮೆಯಿಂದ ಸ್ವೀಕರಿಸಿದಾಗ ಸದರಿ ನಾಗರೀಕತೆಯ ಮೂಲಬೇರುಗಳು ಮತ್ತಷ್ಟು ಬಲಿಷ್ಠವಾಗುತ್ತದೆ ಮತ್ತು ಅದರ ಸುವರ್ಣ ಭವಿಷ್ಯವೂ ಖಚಿತವಾಗುತ್ತದೆ ಎಂದು ತಿಳಿಸಿದರು. ಈ ಬಾರಿ ಕುಂಭಮೇಳದ ಡಿಜಿಟಲ್ ಹೆಜ್ಜೆ ಗುರುತುಗಳು ಬೃಹತ್ ಪ್ರಮಾಣದಲ್ಲಿ ಗೋಚರಿಸಿವೆ. ಮಹಾಕುಂಭ ಮೇಳವು ಮಾನವೀಯತೆಯ ಅವಿಸ್ಮರಣೀಯ ಸಮುದ್ರ, ಸಮಾನ, ಧಾರ್ಮಿಕ ವಿಧಿ ವಿಧಾನಗಳು ಸೇರಿದಂತೆ ಅಪೂರ್ವಾ ಪೂರ್ವ ಕಾರ್ಯಕ್ರಮಗಳು ಮೇಳೈಸಿವೆ. ಇಲ್ಲಿ ಸಮಾನತೆ ಮತ್ತು ಸೌಹಾರ್ದಗಳ ಅಸಾಧಾರಣ ಸಂಗಮವಿದೆಂದು ಅವರು ಬಣ್ಣಿಸಿದರು.

### ಅರಿವು ಮೂಡಿಸುವ ಸಂಪ್ರದಾಯಗಳು

ಪಶ್ಚಿಮ ಬಂಗಾಳದಲ್ಲಿ ಗಂಗಾಸಾಗರ ಮೇಳವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಕುಂಭ, ಪುಷ್ಕರಮ್ ಮತ್ತು ಗಂಗಾ ಸಾಗರ ಮೇಳಗಳು ಸಾಮಾಜಿಕ ಒಗ್ಗಟ್ಟು, ಸೌಹಾರ್ದತೆ ಮತ್ತು ಏಕತೆಯನ್ನು ವಿಸ್ತೃತಗೊಳಿಸುತ್ತವೆ. ಈ ಉತ್ಸವಗಳು ದೇಶದ ಜನರಿಗೆ ಭಾರತೀಯ ಸಂಪ್ರದಾಯಗಳ ಪರಿಚಯ ನೀಡುತ್ತವೆ, ಸಂಪ್ರದಾಯಗಳ ಜತೆ ಜನರನ್ನು ಜೋಡಿಸುತ್ತವೆ. ನಮ್ಮ ಪವಿತ್ರ ಪುರಾಣಗಳು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪ್ರತಿಪಾದಿಸುವಂತೆ ನಮ್ಮ ಸಂಪ್ರದಾಯಗಳು ಕೂಡ ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅರಿವು ಮೂಡಿಸುತ್ತವೆ ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದರು.



ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ದೆಹಲಿ ವಿಧಾನಸಭಾ ಚುನಾವಣೆ
ವಿಜಯೋತ್ಸವದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಹಾಗೂ ಗಣ್ಯರು



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ
'ಒಂದು ದೇಶ – ಒಂದು ಚುನಾವಣೆ' ಕಾರ್ಯಾಗಾರ



ಹಣ ದುರ್ಬಳಕೆ ಮಾಡಿಕೊಂಡ ದಲಿತ ವಿರೋಧಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಂದೋಲನ ಕುರಿತು
ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಪೂರ್ವಭಾವಿ ಕಾರ್ಯಾಗಾರ



ಅಭಿವೃದ್ಧಿ ಶೂನ್ಯ ಬೆಂಗಳೂರು ಹಾಗೂ ಗ್ರೇಟರ್ ಬೆಂಗಳೂರು ಕುರಿತು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಭಿಪ್ರಾಯ ಸಂಗ್ರಹ ಸಭೆ



ಬೆಂಗಳೂರಿನ ಸದಾಶಿವ ನಗರದ ಛತ್ರಪತಿ ಶಿವಾಜಿ ಮಹಾರಾಜರ
ಪ್ರತಿಮೆಗೆ ಅವರ ಜಯಂತಿ ಪ್ರಯುಕ್ತ ಗಣ್ಯರಿಂದ ಮಾಲಾರ್ಪಣೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪಂ. ದೀನದಯಾಳ
ಉಪಾಧ್ಯಾಯರ ಪುಣ್ಯ ತಿಥಿಯಂದು ಅವರ ಭಾವಚಿತ್ರಕ್ಕೆ ಪುಷ್ಪನಮನ

ಸೃಷ್ಟಿ

ಕಟ್ಟಕಡೆಗೊಂದು ದೃಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ನಾನು, ನನ್ನಿಂದಲೇ ...

'ನಾನು' ಎಂಬ ಪದ ಪ್ರತಿ ದಿನ, ಪ್ರತಿ ಕ್ಷಣ ನಮ್ಮ ಕಿವಿ ಮೇಲೆ ಬೀಳುತ್ತಲೇ ಇರುತ್ತದೆ. 'ನಾನು' ಎನ್ನುವ ವಿಶ್ವಾಸ ಇರುವುದು ಸರಿ, ಆದರೆ ನನ್ನಿಂದಲೇ ಎಲ್ಲಾ ಎನ್ನುವುದು ಅಹಂಕಾರದ ಪರಮಾವಧಿ. ಎಲ್ಲ ಕೆಲಸಗಳು ಒಬ್ಬರಿಂದಲೇ ಆಗಲು ಸಾಧ್ಯವಿಲ್ಲ. ನಮಗೆ ಆದರ್ಶವಾಗಿರುವ ನಮ್ಮ ಪ್ರಮುಖ ಗ್ರಂಥಗಳಾದ ರಾಮಾಯಣ ಹಾಗೂ ಮಹಾಭಾರತದಲ್ಲಿಯೂ ಸಹ 'ನಾನು, ನನ್ನಿಂದಲೇ ಎಲ್ಲಾ' ಎನ್ನುವುದು ತನ್ನನ್ನು ನಾಶ ಮಾಡುವುದಲ್ಲದೇ ಇತರರನ್ನೂ ನಾಶ ಮಾಡುವ ದುಷ್ಟ ಶಕ್ತಿಯಾಗಿದ್ದು ಇದನ್ನು ತೊರೆದು ಬದುಕುವುದೇ ಸಾರ್ಥಕವಾದ ಜನ್ಮ ಎಂದು ಹೇಳಲಾಗಿದೆ. ಇದಕ್ಕೆ ಪೂರಕವಾದ ಒಂದು ಕಥೆ ನಮಗೆ ಇದರ ಮನವರಿಕೆ ಮಾಡಿಸುತ್ತದೆ.

ಒಬ್ಬ ಶ್ರೀಮಂತ ಅಂಗಡಿಗೆ ಬಂದು ವ್ಯಾಪಾರಿಯಿಂದ ಸೇಬಿನ ಹಣ್ಣನ್ನು ಖರೀದಿಸುವಾಗ ವ್ಯಾಪಾರಿಗೆ 'ಏನಯ್ಯಾ, ಒಂದು ಹಣ್ಣು ಕೆಟ್ಟು ಹೋಗಿದೆ, ನಾನು ಕಷ್ಟಪಟ್ಟು ಸಂಪಾದಿಸಿದ ದುಡ್ಡಿನಿಂದ ಹಣ್ಣನ್ನು ಕೊಂಡುಕೊಳ್ಳುತ್ತಿದ್ದೇನೆ ಕೆಟ್ಟ ಹಣ್ಣನ್ನು ಕೊಟ್ಟು ನನಗೆ ಮೋಸ ಮಾಡುತ್ತೀಯಾ ಇದೇ ರೀತಿ ಎಷ್ಟು ಜನರಿಗೆ ಮೋಸ ಮಾಡಿರುವೆ' ಎಂದು ಗದರಿಸುತ್ತಾನೆ. ವ್ಯಾಪಾರಿ 'ತಪ್ಪಾಯಿತು ಸ್ವಾಮಿ ನಾನು ಯಾರಿಗೂ ಕೊಳೆತ ಹಣ್ಣನ್ನು ಕೊಡುವುದಿಲ್ಲ ಇದು ನನಗೆ ಗೊತ್ತಿಲ್ಲದೆ ಆಗಿರುವ ತಪ್ಪು ದಯವಿಟ್ಟು ಕ್ಷಮಿಸಿ, ಅದರ ಬದಲಿಗೆ ಒಳ್ಳೆಯ ಹಣ್ಣನ್ನು ಕೊಡುತ್ತೇನೆ ತೊಗೊಳ್ಳಿ' ಎಂದು ಹೇಳುತ್ತಾನೆ.

ಸ್ವಲ್ಪ ಸಮಯದ ನಂತರ ಮತ್ತೋರ್ವ ಶ್ರೀಮಂತ ಸೇಬು ಹಣ್ಣನ್ನು ಕೊಳ್ಳಲು ಬರುತ್ತಾನೆ. ಅವನು ಖರೀದಿಸಿದ ಹಣ್ಣಿನಲ್ಲಿಯೂ ಒಂದು ಹಣ್ಣು ಕೆಟ್ಟು ಹೋಗಿರುತ್ತದೆ. ಆ ಶ್ರೀಮಂತ ಹಣ್ಣಿನ ವ್ಯಾಪಾರಿಗೆ 'ಸ್ವಾಮಿ ಒಂದು ಹಣ್ಣು ಕೆಟ್ಟು ಹೋಗಿದೆ, ಬೇರೆ ಹಣ್ಣನ್ನು ಕೊಡುತ್ತೀರ' ಎಂದು ವಿನಯದಿಂದ ಕೇಳುತ್ತಾನೆ. ಆಗ ವ್ಯಾಪಾರಿಗೆ ಇಬ್ಬರೂ ಶ್ರೀಮಂತರೇ ಆಗಿದ್ದರೂ ಇವರು ಮಾತ್ರ ಗದರಿಸದೆ ವಿನಮ್ರತೆಯಿಂದ ಕೆಟ್ಟ ಹಣ್ಣಿನ ಬದಲಿಗೆ ಒಳ್ಳೆಯ ಹಣ್ಣನ್ನು ಕೇಳಿ ಪಡೆದರು ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತಾ 'ಸ್ವಾಮಿ ತಾವು ಕೂಡ ಕಷ್ಟಪಟ್ಟು ಸಂಪಾದಿಸಿದ ಹಣದಿಂದಲೇ ಸೇಬು ಹಣ್ಣನ್ನು ಖರೀದಿಸಿದಿರಿ, ಕೆಟ್ಟ ಹಣ್ಣಿನ ಬದಲಿಗೆ ಒಂದು ಒಳ್ಳೆಯ ಹಣ್ಣನ್ನು ಕೊಡು ಎಂದು ವಿನಯದಿಂದ ಕೇಳಿದಿರಿ, ನಿಮಗೆ ನನ್ನ ಮೇಲೆ ಕೋಪ ಬರಲಿಲ್ಲವೇ' ಎಂದು ಕೇಳಿದನು. ಆಗ ಆ ಶ್ರೀಮಂತ 'ನೀನು ಹೇಳುವುದೂ ಸರಿಯೇ ನಾನು ಕಷ್ಟಪಟ್ಟು ಸಂಪಾದಿಸಿದ ಹಣದಿಂದಲೇ ಹಣ್ಣನ್ನು ಖರೀದಿಸಿದ್ದೇನೆ. ಆದರೆ ಒಂದು ಹಣ್ಣಿನ ಹಿಂದೆ ಎಷ್ಟು ಜನರ ಶ್ರಮವಿದೆ ಎಂಬುದರ ಅರಿವು ನನಗಿದೆ. ಯಾರೋ ಒಬ್ಬರು ಬೀಜ ಹಾಕಿ, ಅದಕ್ಕೆ ನೀರು ಗೊಬ್ಬರ ಹಾಕುತ್ತಾರೆ, ಆ ಬೀಜ ಮೊಳಕೆಯೊಡೆದು ಫಲ ನೀಡುವಲ್ಲಿ ಪ್ರಕೃತಿಯೂ ಫಲವತ್ತತೆಯ ಮಣ್ಣು, ನೀರು ಶುದ್ಧ ಗಾಳಿಯೊದಗಿಸಿ ಸಹಕರಿಸುತ್ತದೆ. ಬೆಳೆದ ಹಣ್ಣು ನನ್ನ ಕೈ ಸೇರುವಲ್ಲಿಯೂ ಹಲವಾರು ಜನರ ಶ್ರಮವಿದೆ ಎಂಬುದರ ಅರಿವು ನನಗಿದೆ' ಎಂದು ಹೇಳುತ್ತಾನೆ.

ಒಂದು ಹಣ್ಣು ಪಕ್ವವಾಗಿ ಕೈ ಸೇರುವುದರ ಹಿಂದೆ ಹೇಗೆ ಪೂರಕ ಪರಿಸರ ಮತ್ತು ನೂರಾರು ಜನರ ಶ್ರಮವಿದೆಯೋ ಹಾಗೆಯೇ ಒಂದು ಸಂಘಟನೆ ಅಥವಾ ರಾಜಕೀಯ ಪಕ್ಷಗಳ ಪ್ರಗತಿಯ ಹಿಂದೆಯೂ ಅದೆಷ್ಟೋ ಜನರ ತ್ಯಾಗ, ಬಲಿದಾನ ಹಾಗೂ ಪರಿಶ್ರಮವಿರುತ್ತದೆ. ಸಂಘಟನೆಯಲ್ಲಿ ಅವಕಾಶ ಕೆಲವರಿಗೇ ಮಾತ್ರ ಸಿಗಬಹುದು. ಆದರೆ ಆ ಅವಕಾಶ ಲಭಿಸಿರುವುದರ ಹಿಂದೆ ಅನೇಕರ ಪರಿಶ್ರಮದ ಜೊತೆಗೆ ಸಂಘಟನೆಯಲ್ಲಿ ನಡೆಯುವ ಚಟುವಟಿಕೆಗಳೂ ಪೂರಕವಾಗಿರುತ್ತದೆ. ಎಲ್ಲವೂ ನನ್ನಿಂದಲೇ, ನಾನಿಲ್ಲದೆ ಏನೂ ಇಲ್ಲ ಎನ್ನುವ ಭ್ರಮೆ ಮಾತ್ರವಲ್ಲ ಆ ವ್ಯಕ್ತಿಯನ್ನೂ, ಸಂಘಟನೆಯನ್ನು ಪಾತಾಳಕ್ಕೆ ಕರೆದೊಯ್ಯುತ್ತದೆ.

ಒಬ್ಬರಿಂದ ಸಂಘಟನೆ ಸಾಧ್ಯವಿಲ್ಲ, ಬದಲಾಗಿ ಸಾವಿರಾರು ಕಾರ್ಯಕರ್ತರ ಶ್ರಮ, ಕರ್ತವ್ಯ, ಜವಾಬ್ದಾರಿಯುತ ನಡೆಯೇ ಸಂಘಟನೆಯ ಮೂಲ ಮಂತ್ರವಾಗಿದೆ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH
This issue is permitted to be posted on 25-02-2025

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**